ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 27 ಭಾನುವಾರ 2022

ಸಂಪುಟ: 43 | ಸಂಚಿಕೆ: 337 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


ರಾಜ್ಯದಲ್ಲಿ ಮತ್ತೆ ಕಮಲ ಅರಳಿಸಲು ಬಿಜೆಪಿ

ಅತಿರಥರ ರಂಗ ಪ್ರವೇಶ

- ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಷಾ, ಪಕ್ಷದ ಅಧ್ಯಕ್ಷ ನಡ್ಡಾ ಶೀಘ್ರ ರಾಜ್ಯ ಭೇಟಿ
- ವಿವಿಧ ಸಮಾಜಗಳ ಓಲೈಸಿಕೊಳ್ಳಲು ನಾನಾ ಕಾರ್ಯಕ್ರಮಗಳ ಆಯೋಜನೆ
- ರಾಜ್ಯದ ಸಚಿವರು, ಶಾಸಕರು, ಪಕ್ಷದ ನಾಯಕರಿಗೆ ಟಾಸ್ಕ್ ನೀಡಲು ನಿರ್ಧಾರ



ನರೇಂದ್ರ ಮೋದಿ



ಅಮಿತ್ ಷಾ



ಜೆ.ಪಿ.ನಡ್ಡಾ

ಬೆಂಗಳೂರು,ಮಾ.26(ಕೆಎಂಶಿ)–ಕರ್ನಾಟಕದಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲು ದೆಹಲಿ ಬಿಜೆಪಿ ನಾಯಕರೇ ಅಖಾಡಕ್ಕೆ ಇಳಿಯುತ್ತಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ ಒಂದು ವರ್ಷ ಬಾಕಿ ಇರುವಾಗಲೇ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯಾತಿ ಗಣ್ಯರು ಏಪ್ರಿಲ್ ತಿಂಗಳಲ್ಲಿ ರಾಜ್ಯ ಪ್ರವಾಸ ಕೈಗೊಂಡು ಚುನಾವಣಾ ಬಾವುಟ ಹಾರಿಸುತ್ತಿದ್ದಾರೆ. ಕರ್ನಾಟಕದ ಬಿಜೆಪಿ ನಾಯಕರನ್ನು ನಂಬಿಕೊಂಡರೆ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲವೆಂದು ಮನಗಂಡು ವರಿಷ್ಠರೇ ರಾಜ್ಯದ ನಾಯಕತ್ವ ಕೈಗೆತ್ತಿಕೊಂಡಿದ್ದಾರೆ.

ಪ್ರಧಾನಿಯವರು ಏ.5ರಂದು ಒಂದು ದಿನದ ರಾಜ್ಯ ಪ್ರವಾಸ ಕೈಗೊಂಡರೆ, ಕೇಂದ್ರ ಗೃಹ ಸಚಿವ ಅಮಿತ್ ಷಾ ಮಾರ್ಚ್ 31 ಹಾಗೂ ಏ.1ರಂದು ರಾಜ್ಯ ಪ್ರವಾಸ ಮಾಡಲಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಏಪ್ರಿಲ್ 17 ಮತ್ತು 18ರಂದು 2 ದಿನಗಳ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ಏ.6ರಂದು ಜಿಲ್ಲಾ ಉಸ್ತುವಾರಿ ಸಚಿವರುಗಳು ತಮಗೆ ವಹಿಸಿರುವ ಜಿಲ್ಲೆಗಳಲ್ಲೇ ಉಳಿದು, ಬಿಜೆಪಿ ಸಂಸ್ಥಾಪನಾ ದಿನಾಚರಣೆಯನ್ನು ದೊಡ್ಡ ಪ್ರಮಾಣದಲ್ಲಿ ಆಚರಿಸಬೇಕೆಂದು ದೆಹಲಿಯಿಂದ ಸಂದೇಶ ಬಂದಿದೆ.

ಅಂದು ಉಸ್ತುವಾರಿ ಸಚಿವರುಗಳು, ಜಿಲ್ಲಾ ಕಾರ್ಯಕರ್ತರ ಸಭೆ ನಡೆಸಿ, ಮುಂಬರುವ ವಿಧಾನಸಭಾ ಚುನಾವಣೆಗೆ ಸಜ್ಜಾಗುವಂತೆ ಸೂಚಿಸಬೇಕು. ಅಷ್ಟೇ ಅಲ್ಲ, ಸಾರ್ವಜನಿಕರಿಗೆ ತಲುಪುವ ಕಾರ್ಯಕ್ರಮಗಳು ಯಾವ ಹಂತದಲ್ಲಿವೆ ಎಂಬುದರ ಬಗ್ಗೆ ಪರಿಶೀಲಿಸುವಂತೆ ಸೂಚಿಸಿದೆ. ಒಂದೆಡೆ ಜನರಿಗೆ ತಲುಪಬಹುದಾದ ಕಾರ್ಯಕ್ರಮಗಳ ● 9ನೇ ಪುಟಕ್ಕೆ

ರಾಜ್ಯದ ಬೇಡಿಕೆಯಂತೆ ಅನುದಾನಕ್ಕೂ ಅಸ್ತು

ಬೆಂಗಳೂರು,ಮಾ.26(ಕೆಎಂಶಿ)–ಕರ್ನಾಟಕದಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮಗಳಿಗೆ ಹೆಚ್ಚಿನ ಬೇಡಿಕೆ ಇರುವುದನ್ನು ಗಮನಿಸಿದ ಕೇಂದ್ರ ಸರ್ಕಾರವು ರಾಜ್ಯದ ಬೇಡಿಕೆ ಅನುಸಾರ ಕೇಂದ್ರ ಅನುದಾನವನ್ನು ಹೆಚ್ಚಿಸಿ ಆದೇಶಿಸಿದೆ. ಅಲ್ಲದೇ 2ನೇ ಕಂತಿನ ಅನುದಾನವನ್ನು ಸಹ ಬಿಡುಗಡೆ ಮಾಡಿದೆ. 2020–21ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಪಿಎಂಕೆಎಸ್.ವೈ ಪಿಡಿಎಂ ಅಡಿಯಲ್ಲಿ 400 ಕೋಟಿ ರೂ. ಬಿಡುಗಡೆ ಮಾಡಿತ್ತು. 2021–22ನೇ ಸಾಲಿನಲ್ಲಿ ರಾಜ್ಯದಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಕೇಂದ್ರ ಸರ್ಕಾರ ಇದೀಗ ರಾಜ್ಯದ ಮನವಿಯಂತೆ 500 ಕೋ.ರೂಗಳ ಅನುದಾನವನ್ನು ಹಂಚಿಕೆ ಮಾಡಿದೆ.

ಕಳೆದ ಬಾರಿಗೆ ಹೋಲಿಸಿದಲ್ಲಿ ಶೇ.25ರಷ್ಟು ಹೆಚ್ಚಿನ ಕೇಂದ್ರದ ಪಾಲಿನ ಅನುದಾನ ಪಡೆಯಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕೇಂದ್ರವು ಹಂಚಿಕೆ ಮಾಡಿದ್ದ 500 ಕೋಟಿ ರೂ.ಗಳಲ್ಲಿ ಮೊದಲ ಕಂತಿನ ಅನುದಾನವನ್ನಾಗಿ ರಾಜ್ಯಕ್ಕೆ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಉಳಿದ 200 ಕೋಟಿ ರೂ.ಗಳನ್ನು ಮಾ.25ರಂದು ಅಂದರೆ, ನಿನ್ನೆ ಆದೇಶವನ್ನು ಕರ್ನಾಟಕಕ್ಕೆ ಬಿಡುಗಡೆ ಮಾಡಿದೆ. ಸದರಿ ಕಾರ್ಯಕ್ರಮವು ತೋಟಗಾರಿಕೆ, ಕೃಷಿ, ರೇಷ್ಮೆ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳನ್ನೊಳಗೊಂಡಿರುತ್ತದೆ. ಕೇಂದ್ರ ಹಂಚಿಕೆ ಮಾಡಿದ ಅನುದಾನದಲ್ಲಿ ಶೇ.76ರಷ್ಟು ಸಾಮಾನ್ಯ ವರ್ಗಕ್ಕೆ ಶೇ.17ರಷ್ಟು ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.7ರಷ್ಟನ್ನು ನಿಗದಿಪಡಿಸಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಕೇಂದ್ರದಿಂದ ರಾಜ್ಯಕ್ಕೆ ಇದರ ಯೋಜನೆಯಡಿ ಹಂಚಿಕೆಯಾದ 2ನೇ ಕಂತಿನ 200 ಕೋಟಿ ರೂ.ಗಳ ಕೇಂದ್ರದ ಪಾಲಿನ ಅನುದಾನದಲ್ಲಿ ಕೃಷಿ ಇಲಾಖೆಗೆ ಹಂಚಿಕೆ ಮಾಡಬಹುದಾದ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನವನ್ನೂ ಸೇರಿಸಿ ಲಭ್ಯವಾಗುವ ಒಟ್ಟು ಅನುದಾನಕ್ಕೆ ಜಿಲ್ಲಾವಾರು ಬೇಡಿಕೆ ಅನುಸಾರ ಕ್ರಿಯಾ ಯೋಜನೆಯನ್ನು ನೀಡಲಾಗಿರುತ್ತದೆ. ಇದರಿಂದ ಬೇಸಿಗೆ ಹಂಗಾಮಿನ ಬೆಳೆಗಳಿಗೆ ಸಕಾಲದಲ್ಲಿ ಸೂಕ್ಷ್ಮ ನೀರಾವರಿ ಘಟಕಗಳನ್ನು ವಿತರಿಸಿ ಬೆಳೆಗಳನ್ನು ಉಳಿಸಿಕೊಳ್ಳಲು ಸಹಾಯಕವಾಗುತ್ತದೆ. ಜಿಲ್ಲೆಗಳಿಗೆ ನೀಡಿದ ಕ್ರಿಯಾ ಯೋಜನೆಯನ್ವಯ ಸೂಕ್ಷ್ಮ ನೀರಾವರಿ ಘಟಕಗಳನ್ನು ರೈತರಿಗೆ ತುರ್ತಾಗಿ ಮಾ.25ರಿಂದ ವಿತರಣೆ ಆರಂಭವಾಗಿರುತ್ತದೆ. ಇದರಿಂದ ಸಂಕಷ್ಟದಲ್ಲಿರುವ ರೈತರಿಗೆ ತುರ್ತಾಗಿ ನೆರವಿಗೆ ಧಾವಿಸಲು ಕರ್ನಾಟಕ ಸರ್ಕಾರ ಕ್ರಮ ಕೈಗೊಂಡಿರುತ್ತದೆ.

ರೋಪ್ ವೇ ಚಾಮುಂಡಿಬೆಟ್ಟಕ್ಕೆ

ಅಪಾಯಕಾರಿ

- ಸಂಸದ ಶ್ರೀನಿವಾಸಪ್ರಸಾದ್ ಪ್ರಸ್ತುತ ಯೋಜನೆಗೆ ವಿರೋಧ
- ಮಾರಕವಾದ ರೋಪ್ ವೇ ಪ್ರಸ್ತಾಪ ಕೈಬಿಡಲು ಒತ್ತಾಯ
- ಬೆಟ್ಟದಲ್ಲಿ ನಡೆಯುತ್ತಿದ್ದ ಅಭಿವೃದ್ಧಿ ಕಾಮಗಾರಿಗಳು ಅರಣ್ಯ, ಪರಿಸರ ಇಲಾಖೆ ಅಧಿಕಾರಿಗಳಿಗೆ ಅರಿವಿಲ್ಲ!



ಮೈಸೂರು,ಮಾ.26–ಮೈಸೂರಿನ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಕಾಮಗಾರಿ ಕೈಗೊಂಡರೆ ಭೂಮಿ ಸಡಿಲಗೊಂಡು ಪರಿಸರಕ್ಕೆ ಅಪಾರವಾದ ಹಾನಿ ಸಂಭವಿಸುವ ಅಪಾಯವಿರುವುದರಿಂದ ಈ ಯೋಜನೆ ಕೈಗೊಳ್ಳುವುದು ಸೂಕ್ತವಲ್ಲ ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನ ಸೆಳೆದಿದ್ದಾರೆ.

ಈ ಸಂಬಂಧ ವಾರ್ತಾ ಇಲಾಖೆ ಮೂಲಕ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, 2022–23ರ ಆಯ–ವ್ಯಯದಲ್ಲಿ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಾಮುಂಡಿಬೆಟ್ಟಕ್ಕೆ ರೋಪ್ ವೇ ನಿರ್ಮಿಸುವುದರ ಬಗ್ಗೆ ಪ್ರಸ್ತಾಪಿಸಿರುವ ಸುದ್ದಿ ಪ್ರಕಟವಾಗುತ್ತಿದ್ದಂತೆಯೇ ಮೈಸೂರಿನ ಜನತೆ ಮತ್ತು ಪರಿಸರವಾದಿಗಳು ಈ ಯೋಜನೆಯನ್ನು ವಿರೋಧಿಸುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿದ್ದು, ಈ ಕುರಿತು ಕೆಲವು ಮಹತ್ವದ ಸಂಗತಿಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿರುವುದಾಗಿ ಅವರು ತಿಳಿಸಿದ್ದಾರೆ.

ಚಾಮುಂಡಿಬೆಟ್ಟಕ್ಕೆ ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ, ಪೂಜಾ ಸಾಮಗ್ರಿಗಳ ಮಾರಾಟ ವ್ಯವಸ್ಥೆಯಂತಹ ಈಗಿರುವ ಮೂಲಭೂತ ಸೌಕರ್ಯಗಳು ಸಾಕೆನಿಸಿದೆ. ಇನ್ನೇನಾದರೂ ಅಗತ್ಯ ಕಂಡುಬಂದಲ್ಲಿ ಪರಿಸರಸ್ನೇಹಿ ವಿಧಾನದಲ್ಲಿ ಅದನ್ನು ಒದಗಿಸುವ ಅವಶ್ಯವಿದೆಯೇ ಹೊರತು, ಪರಿಸರಕ್ಕೆ ಮಾರಕವಾದ ರೋಪ್ ವೇಯಂತಹ ಮಾರ್ಗ ನಿರ್ಮಾಣವು ಅಭಿವೃದ್ಧಿಯೂ ಅಲ್ಲ, ಅದರ ಅಗತ್ಯತೆಯೂ ಇಲ್ಲ. ಆದುದರಿಂದ ಮುಖ್ಯಮಂತ್ರಿಗಳು ಈ ವಿಷಯವನ್ನು ಮರು ಪರಿಶೀಲಿಸಬೇಕು ಮತ್ತು ಸಕಾರಾತ್ಮಕ ನಿರ್ಣಯ ಕೈಗೊಳ್ಳಬೇಕು ಎಂದು ಆಗ್ರಹಪೂರ್ವಕವಾಗಿ ಒತ್ತಾಯಿಸುವುದಾಗಿ ಪ್ರಸಾದ್ ತಿಳಿಸಿದ್ದಾರೆ.

ತಾವು ಕಂದಾಯ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭ, 2015ರಲ್ಲಿ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳು ಮತ್ತು ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ವಾಣಿಜ್ಯ ಸಮುಚ್ಚಯ, ಡಾರ್ಮಿಟರಿ ಬ್ಲಾಕ್, ಕ್ಯೂ ಲೈನ್ ವಿತ್ ಟಾಯ್ಲೆಟ್ ಬ್ಲಾಕ್, ರಸ್ತೆ ನಿರ್ಮಾಣ, ವಾಹನ ನಿಲುಗಡೆಗೆ ಬಹು ಅಂತಸ್ತಿನ ಕಟ್ಟಡ ಮುಂತಾದವುಗಳಿಗೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಯೋಜನೆ ಸಿದ್ಧಪಡಿಸಿ ಕಾಮಗಾರಿ ಕೈಗೊಳ್ಳಲು ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಅದಕ್ಕಾಗಿ ● 9ನೇ ಪುಟಕ್ಕೆ



> “ಚಾಮುಂಡಿಬೆಟ್ಟ ಮೈಸೂರಿಗೆ ಪ್ರಕೃತಿದತ್ತವಾದ ಕೊಡುಗೆ. ಈಗ ಅದು ಮೈಸೂರಿನ ಮಧ್ಯಭಾಗದಲ್ಲಿದೆ. ಮೈಸೂರಿನ ಯದುವಂಶದ ಅರಸರು ತಮ್ಮ ಕುಲದೇವತೆ ಚಾಮುಂಡೇಶ್ವರಿಗೆ ದೇವಸ್ಥಾನ ನಿರ್ಮಿಸಿ, ಅಂದಿನಿಂದಲೂ ಅದರ ಅಭಿವೃದ್ಧಿಗಾಗಿ ಯೋಜಿತ ರೀತಿಯಲ್ಲಿ ಪ್ರಯತ್ನ ನಡೆಸುತ್ತಲೇ ಬಂದಿದ್ದಾರೆ. ಬೆಟ್ಟದ ತುದಿಯನ್ನು ತಲುಪಲು ಸುಸಜ್ಜಿತವಾದ ಮೆಟ್ಟಿಲುಗಳ ಒಂದು ಮಾರ್ಗವಿದೆ. ಬಸ್ ಹಾಗೂ ಇತರ ವಾಹನಗಳಿಗಾಗಿ ಮತ್ತೊಂದು ರಸ್ತೆ ಇದೆ. ಇದಲ್ಲದೇ ಇನ್ನೂ ಎರಡು ಕಡೆಯಿಂದ ಬೆಟ್ಟ ಹತ್ತಿಕೊಂಡು ಹೋಗಲು ಮಾರ್ಗಗಳಿವೆ. ಕೇವಲ ಅರ್ಧ ಗಂಟೆ ಅವಧಿಯಲ್ಲಿ ಬೆಟ್ಟದ ತುದಿ ತಲುಪಬಹುದು ಮತ್ತು ಬೆಟ್ಟದ ತುದಿಯಿಂದ 20 ನಿಮಿಷದಲ್ಲಿ ಮೈಸೂರು ನಗರಕ್ಕೆ ಪ್ರವೇಶಿಸಬಹುದು. ಹೀಗೆ ಬೆಟ್ಟಕ್ಕೆ ಹೋಗಿ–ಬರಲು ಮಾರ್ಗ ಸೌಕರ್ಯ ಇರುವುದರಿಂದ ರೋಪ್ ವೇ ಅನಗತ್ಯ.
>
> –**ಶ್ರೀನಿವಾಸಪ್ರಸಾದ್, ಸಂಸದ**

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮೈಸೂರು ಜಿಲ್ಲೆಯಲ್ಲಿ ಸಿದ್ಧತೆ

ಮೈಸೂರು,ಮಾ.26(ಆರ್‌ಕೆ)–ಮಾ.28ರಿಂದ ಏ.11ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳಿಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಭರದ ಸಿದ್ಧತೆ ನಡೆದಿದೆ. ಮೈಸೂರು ನಗರದ 57 ಸೇರಿದಂತೆ ಜಿಲ್ಲೆಯ 149 ಪರೀಕ್ಷಾ ಕೇಂದ್ರಗಳಲ್ಲಿ ಕೊಠಡಿಗಳ ವ್ಯವಸ್ಥೆ, ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ನಮೂದಿಸಿ, ಸೂಚನಾ ಫಲಕ, ಕೋವಿಡ್–19 ಮಾರ್ಗಸೂಚಿಯಂತೆ ಅಗತ್ಯ ಎಲ್ಲಾ ಸುರಕ್ಷತಾ ಕ್ರಮಗಳು, ಕೊಠಡಿ ಮೇಲ್ವಿಚಾರಕರ ನಿಯೋಜನೆಯೂ ಸೇರಿದಂತೆ ಸುಸೂತ್ರವಾಗಿ ಪರೀಕ್ಷೆ ನಡೆಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲಾ ತಯಾರಿ ನಡೆಸಿದೆ. ● 9ನೇ ಪುಟಕ್ಕೆ

ಹಿಜಾಬ್‌ಗೆ ನಿರ್ಬಂಧ

ಬೆಂಗಳೂರು: ಸೋಮವಾರದಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ಎಲ್ಲ ವಿದ್ಯಾರ್ಥಿಗಳು ಶಾಲಾ ಸಮವಸ್ತ್ರ ಧರಿಸಿಯೇ ಪರೀಕ್ಷೆ ಬರೆಯಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ವಿದ್ಯಾರ್ಥಿಗಳು ಹಿಜಾಬ್ ಸೇರಿದಂತೆ ಯಾವುದೇ ವಸ್ತ್ರಗಳನ್ನು ಧರಿಸುವಂತಿಲ್ಲ. ಶಾಲಾ ಸಮವಸ್ತ್ರ ಧರಿಸಿಯೇ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ಪರೀಕ್ಷೆ ಬರೆಯುವುದು ಕಡ್ಡಾಯ. ಈ ಸಂಬಂಧ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಅಧೀನ ● 9ನೇ ಪುಟಕ್ಕೆ

ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಸೆಪ್ಟೆಂಬರ್‌ವರೆಗೆ ವಿಸ್ತರಣೆ

ನವದೆಹಲಿ: ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು 2022ರ ಸೆಪ್ಟೆಂಬರ್‌ವರೆಗೆ ವಿಸ್ತರಿಸಲು ನಿರ್ಧರಿಸಿದೆ.

ಈ ಕುರಿತು ಹಿಂದಿಯಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ. ಇದರಿಂದ ಭಾರತದ 80 ಕೋಟಿಗೂ ಹೆಚ್ಚು ಜನರು ಇದರ ಲಾಭವನ್ನು ಪಡೆಯಲು ಸಾಧ್ಯವಾಗಲಿದೆ ಎಂದು ಹೇಳಿದ್ದಾರೆ.

ಕೇಂದ್ರ ಕ್ಯಾಬಿನೆಟ್ ಸಭೆಯನ್ನು ಮುಕ್ತಾಯಗೊಳಿಸಿದ ನಂತರ ಈ ಕುರಿತು ವಿವರ ನೀಡಿರುವ ಕೇಂದ್ರ ಸಚಿವ ಪಿಯೂಷ್ ಗೋಯಲ್, ಉಚಿತ ಆಹಾರ ಧಾನ್ಯ ಕಾರ್ಯಕ್ರಮವಾದ ಪಿಎಂಜಿಕೆಎವೈಯನ್ನು ಆರು ತಿಂಗಳವರೆಗೆ ವಿಸ್ತರಿಸುವ ● 9ನೇ ಪುಟಕ್ಕೆ

ಹೆಬ್ಬಾಳಲ್ಲಿ ‘ಡಾ.ಸುಧಾಮೂರ್ತಿ ರಸ್ತೆ’ ಅನಾವರಣ

- ಅಂತರರಾಷ್ಟ್ರೀಯ ಖ್ಯಾತಿಯ ಇನ್ಫೋಸಿಸ್ ರೂವಾರಿಗಳಲ್ಲಿ ಒಬ್ಬರಾದ ಡಾ.ಸುಧಾಮೂರ್ತಿ ಅವರಿಗೆ ಅಭಿಮಾನ ಧಾರೆ
- ಅವರಿಂದಲೇ ರಸ್ತೆ, ಜೊತೆಗೆ ‘ಹೆಬ್ಬಾಳಿನ ಹೆಬ್ಬಾಗಿಲು’ ಉದ್ಘಾಟನೆ



ಮೈಸೂರಿನ ಹೆಬ್ಬಾಳಿನಲ್ಲಿ ‘ಡಾ.ಸುಧಾಮೂರ್ತಿ ರಸ್ತೆ’ ಹಾಗೂ ‘ಹೆಬ್ಬಾಳಿನ ಹೆಬ್ಬಾಗಿಲ’ನ್ನು ಶನಿವಾರ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಇನ್ಫೋಸಿಸ್ ಫೌಂಡೇಷನ್‌ನ ಮುಖ್ಯಸ್ಥೆ ಡಾ.ಸುಧಾಮೂರ್ತಿ, ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಪೈಲ್ವಾನ್ ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು,ಮಾ.26(ಎಂಕೆ)–ನಗರದ ಹೆಬ್ಬಾಳಿನಲ್ಲಿ ನಿರ್ಮಿಸಿರುವ ‘ಹೆಬ್ಬಾಳಿನ ಹೆಬ್ಬಾಗಿಲು’ ಹಾಗೂ ‘ಡಾ.ಸುಧಾಮೂರ್ತಿ ರಸ್ತೆ’ಯನ್ನು ಶನಿವಾರ ಉದ್ಘಾಟಿಸಲಾಯಿತು.

ಹೆಬ್ಬಾಳಿನ ಮುಖ್ಯದ್ವಾರದಲ್ಲಿ ಹಮ್ಮಿಕೊಂಡಿದ್ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕ ಮುಖ್ಯಸ್ಥೆ ಡಾ.ಸುಧಾಮೂರ್ತಿ ಅವರು ತಮ್ಮದೇ ಹೆಸರಿನ ರಸ್ತೆ ಹಾಗೂ ‘ಹೆಬ್ಬಾಳಿನ ಹೆಬ್ಬಾಗಿಲ’ನ್ನು ಉದ್ಘಾಟಿಸಿದರು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ರಾಜ್ಯದ ಹಲವೆಡೆ ಸಮಾಜ ಸೇವೆ ಮಾಡುತ್ತಿದ್ದೇನೆ. ಆದರೆ ನನ್ನ ಸೇವೆಯನ್ನು ಗುರುತಿಸಿದ್ದು ಮೈಸೂರೇ ಮೊದಲು ಅನ್ನಿಸುತ್ತದೆ. ಹೆಬ್ಬಾಳಿನ ಮುಖ್ಯ ರಸ್ತೆಗೆ ನನ್ನ ಹೆಸರನ್ನು ಇಟ್ಟಿರುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇದು ನಮ್ಮ ಊರಿನಲ್ಲಿ ನನಗೆ ಸಿಕ್ಕ ಉಡುಗೊರೆಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

‘ಎನಿತು ಜನರಿಗೆ ಎನಿತು ಜನ್ಮಗಳಿಗೆ ಎನಿತು ಋಣಿಯೋ ಹಾಗೇ ನೋಡಿದರೆ ಈ ಜನ್ಮವು ಒಂದು ಋಣದ ಗಣಿಯೇ...’ ಎಂಬಂತೆ ನಮ್ಮ ಊರಿಗೆ, ನಮ್ಮ ಭಾಷೆಗೆ, ನಾಡಿಗೆ ಸೇವೆ ಮಾಡಬೇಕು. ಹಣ ಬರುವುದು ವೈಭವಕ್ಕಲ್ಲ. ದೇವರು ಐಶ್ವರ್ಯ ಕೊಡುವುದು ಸೇವೆ ಮಾಡುವುದಕ್ಕಾಗಿ. ಈ ನಿಟ್ಟಿನಲ್ಲಿ ಮಾಡಿದ ಅಲ್ಪ ಸೇವೆಯನ್ನು ನೆನಪಿನಲ್ಲಿ ಇಟ್ಟುಕೊಂಡು ಪ್ರೀತಿ ತೋರಿಸಿ, ಧೈರ್ಯ, ವಿಶ್ವಾಸ ಮತ್ತು ಪ್ರೋತ್ಸಾಹಿಸಿದ್ದೀರಿ ಎಂದರು.

ಕೆರೆ ಸ್ವಚ್ಛವಾಗಿಟ್ಟುಕೊಳ್ಳಿ: ಕೆಲ ದಿನಗಳ ಹಿಂದೆ ಹೆಬ್ಬಾಳ ಕೆರೆ ನೋಡಲು ಬಂದಿದ್ದಾಗ ಯಾರೋ ಬೆಡ್‌ಶೀಟ್, ಮುರಿದ ಖುರ್ಚಿ, ಪ್ಲಾಸ್ಟಿಕ್ ಡಬ್ಬಗಳನ್ನು ಎಸೆದಿದ್ದರು. ಇದರಿಂದ ಕೆರೆಯ ಸ್ವಚ್ಛತೆ ಹಾಳಾಗುತ್ತದೆ. ಜೊತೆಗೆ ಮೀನುಗಳನ್ನು ಹಿಡಿಯುತ್ತಿದ್ದಾರೆ. ಒಂದೂವರೆ ಲಕ್ಷ ಮೀನುಗಳನ್ನು ಬಿಟ್ಟಿರುವುದು ಕೆರೆಯ ನೀರು ಸ್ವಚ್ಛವಾಗಿರಲೆಂದು. ● 7ನೇ ಪುಟಕ್ಕೆ

ಶಾಸಕ ಜಿ.ಟಿ.ದೇವೇಗೌಡರ ಸಹಕಾರ ಮರೆಯುವಂತಿಲ್ಲ...

ಹೆಬ್ಬಾಳ ಕೆರೆ ಅಭಿವೃದ್ಧಿ ಮಾಡುವಾಗ ಬಹಳಷ್ಟು ತೊಂದರೆಗಳು ಎದುರಾದವು. ಆಗ ನಾವೇ ಏನೋ ಸರಿಯಾಗಿ ಮಾಡುತ್ತಿಲ್ಲವೇನೋ ಎಂದುಕೊಂಡಿದ್ದೆ. ನಂತರ ಹೆಬ್ಬಾಳ ಕೆರೆ ಅಭಿವೃದ್ಧಿಗೆ ಜಿ.ಟಿ.ದೇವೇಗೌಡರು ಸಹಕಾರ ನೀಡಿದರು. ಆರಂಭದಲ್ಲಿ ಕೆರೆ ಅಭಿವೃದ್ಧಿಗೆ 10–15 ಕೋಟಿ ರೂ. ಖರ್ಚಾಗಬಹುದು ಎಂದುಕೊಂಡಿದ್ದೆವು. ನಂತರ 25 ಕೋಟಿ ರೂ. ಅಂದಾಜಿಸಲಾಯಿತು. ಆದರೆ ಅಂತಿಮವಾಗಿ ಖರ್ಚಾಗಿದ್ದು, 108 ಕೋಟಿ ರೂ. ಎಂದು ಇನ್ಫೋಸಿಸ್ ಮುಖ್ಯಸ್ಥೆ ಡಾ.ಸುಧಾಮೂರ್ತಿ ಸ್ಮರಿಸಿದರು. ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಮೊದಲು ನನ್ನ ಹೆಸರನ್ನು ಸೂಚಿಸಿದ್ದು ಜಿ.ಟಿ.ದೇವೇಗೌಡರೇ. ಆಗ ಸಿಎಂ ಆಗಿದ್ದ ಕುಮಾರಸ್ವಾಮಿಯವರು ನನಗೆ ಕರೆ ಮಾಡಿ ದಸರಾ ಮಹೋತ್ಸವ ಉದ್ಘಾಟನೆ ಮಾಡಬೇಕು ಎಂದರು. ದಸರಾ ಮಹೋತ್ಸವ ಉದ್ಘಾಟನೆ ಮಾಡಿದ್ದು ನನ್ನ ಎಷ್ಟೋ ಜನ್ಮದ ಪುಣ್ಯ ಎಂದರು.

ಏಳು ವರ್ಷದ ಶ್ರಮದ ಫಲ...

ಹಲವು ವರ್ಷಗಳಿಂದ ಡಾ.ಸುಧಾಮೂರ್ತಿ ಅವರ ಸಮಾಜ ಸೇವೆಯನ್ನು ನೋಡುತ್ತಿದ್ದೇನೆ. ಹೆಬ್ಬಾಳಿನ ಮುಖ್ಯ ರಸ್ತೆಗೆ ಡಾ.ಸುಧಾಮೂರ್ತಿಯವರ ಹೆಸರನ್ನಿಡಬೇಕು ಎಂದು ಕಳೆದ 7 ವರ್ಷದಿಂದ ಶ್ರಮಪಟ್ಟಿದ್ದೇನೆ. ನಗರಪಾಲಿಕೆಗೆ, ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕಡೆಗೆ ಅನುಮತಿ ಪಡೆದು, ಈಗ ಹೆಸರಿಡಲಾಗಿದೆ.

–**ಪೈಲ್ವಾನ್ ಶ್ರೀನಿವಾಸ್**, ಪಾಲಿಕೆ ಸದಸ್ಯ

ಖಾಯಂಯೇತರ ನೌಕರರ ಸಂಘಟನಾ ಸಮಾವೇಶ

ಗುತ್ತಿಗೆ ಪದ್ಧತಿ ನಿಷೇಧ ಕಾಯ್ದೆ ಸರ್ಕಾರದಿಂದಲೇ ಪಾಲನೆ ಆಗುತ್ತಿಲ್ಲ

ಕರ್ನಾಟಕ ಖಾಯಂಯೇತರ ನೌಕರರ ಒಕ್ಕೂಟದ ಅಧ್ಯಕ್ಷೆ ಎಸ್.ವರಲಕ್ಷ್ಮಿ



ಮೈಸೂರಿನ ಶ್ರೀಹರ್ಷ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಖಾಯಂಯೇತರ ನೌಕರರ ಸಂಘಟನಾ ಸಮಾವೇಶದಲ್ಲಿ ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಮಾತನಾಡಿದರು.

ಮೈಸೂರು,ಮಾ.26(ಪಿಎಂ)– ಗುತ್ತಿಗೆ ಪದ್ಧತಿಯ ನಿಯಂತ್ರಣ ಮತ್ತು ನಿಷೇಧ ಕಾಯ್ದೆ 1970ರ ಪ್ರಕಾರ ಖಾಯಂ ಸ್ವರೂಪದ ಹುದ್ದೆಗಳನ್ನು ಗುತ್ತಿಗೆಯಡಿ ಭರ್ತಿ ಮಾಡಲು ಅವಕಾಶವಿಲ್ಲ. ಆದರೆ ಸರ್ಕಾರದ ಇಂತಹ ಹುದ್ದೆಗಳಲ್ಲಿಯೇ ಗುತ್ತಿಗೆ ಪದ್ಧತಿ ಪಾಲನೆಯಾಗುತ್ತಿದೆ. ಇದು ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂದು ಸಿಐಟಿಯು ರಾಜ್ಯಾಧ್ಯಕ್ಷ ಹಾಗೂ ಕರ್ನಾಟಕ ಖಾಯಂಯೇತರ ನೌಕರರ ಒಕ್ಕೂಟದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಹೇಳಿದರು.

ಮೈಸೂರಿನ ಶ್ರೀಹರ್ಷ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಖಾಯಂಯೇತರ ನೌಕರರ ಒಕ್ಕೂಟ (ಸಿಐಟಿಯು ಅಧೀನ), ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ಖಾಯಂಯೇತರ ನೌಕರರ ಸಂಘದ ಜಂಟಿ ಆಶ್ರಯದಲ್ಲಿ 'ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿನ ಸವಾಲುಗಳು ಹಾಗೂ ಖಾಯಂಯೇತರ ನೌಕರರ ಪರಿಸ್ಥಿತಿ' ಕುರಿತು ಶನಿವಾರ ಹಮ್ಮಿಕೊಂಡಿದ್ದ ಮೈಸೂರು ವಿಭಾಗ ಮಟ್ಟದ ಸಂಘಟನಾ ಸಮಾವೇಶದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಖಾಯಂ ಸ್ವರೂಪದ ಕೆಲಸ ಎಂದು ಪರಿಗಣಿಸಲ್ಪಟ್ಟ ಹುದ್ದೆಗಳಿಗೆ ಹೊರಗುತ್ತಿಗೆ ಮತ್ತು ಗುತ್ತಿಗೆಯಡಿ ನೇಮಕಾತಿ ಮಾಡಲು ಅವಕಾಶವಿಲ್ಲ. 1970ರ ಗುತ್ತಿಗೆ ಪದ್ಧತಿ ನಿಯಂತ್ರಣ ಮತ್ತು ನಿಷೇಧ ಕಾಯ್ದೆಯೇ ಇದನ್ನು ಪ್ರತಿಪಾದಿಸುತ್ತದೆ. ಆದರೆ ಸರ್ಕಾರ ಇಂತಹ ಹುದ್ದೆಗಳನ್ನು ಗುತ್ತಿಗೆ ನೀಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಮಿಕ ಕಾನೂನು ರೂಪಿಸಿರುವುದು ಸರ್ಕಾರವೇ ಆಗಿದ್ದು, ಕಾರ್ಮಿಕ ಸಚಿವರು ಚುನಾಯಿತ ಜನಪ್ರತಿನಿಧಿ. ಈ ಚುನಾಯಿತ ಪ್ರತಿನಿಧಿ ಇರುವಂತಹ ಸರ್ಕಾರವೇ ಖಾಯಂ ಸ್ವರೂಪದ ಕೆಲಸ ಹೊಂದಿರುವ ಹುದ್ದೆಗಳನ್ನು ಹೊರಗುತ್ತಿಗೆ ನೀಡಿದರೆ, ಕನಿಷ್ಠ ವೇತನ ನೀಡದಿದ್ದರೆ, ಮಹಿಳೆಯರಿಗೆ ಹೆರಿಗೆ ಭತ್ಯೆ ನೀಡದಿದ್ದರೆ, ಯಾರ ಬಳಿ ನ್ಯಾಯ ಕೇಳುವುದು? ಎಂದು ಪ್ರಶ್ನಿಸಿದರು.

ಇದು ಬೇಲಿಯೇ ಎದ್ದು ಹೊಲ ಮೇಯ್ದಂತೆ, ಸರ್ಕಾರದ ಪೋಷಣಾ ಅಭಿಯಾನ ಇದಕ್ಕೆ ತಾಜಾ ಉದಾಹರಣೆ. ಶಿಶುಮಂದಿರ ಮತ್ತು ಬಾಲಮಂದಿರದಲ್ಲಿ ಕೆಲಸ ಮಾಡುವ ಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ನೀಡಲಾಗುತ್ತಿದೆ ಎಂದು ಮಾಹಿತಿ ನೀಡುತ್ತಾರೆ. ಆದರೆ ಪರಿಶೀಲಿಸಿದರೆ, ವಾಸ್ತವದಲ್ಲಿ ಅದಾಗುತ್ತಿಲ್ಲ. ನ್ಯಾಯ ನೀಡಬೇಕಾದವರೇ ಅನ್ಯಾಯ ಮಾಡಿದರೆ ಏನು ಮಾಡಬೇಕು? ಎಂಬ ಬೃಹದಾಕಾರದ ಪ್ರಶ್ನೆ ಇಂದು ಸರ್ಕಾರದ ಹೊರಗುತ್ತಿಗೆ ಮತ್ತು ಗುತ್ತಿಗೆಯಡಿ ಕಾರ್ಯ ನಿರ್ವಹಿಸುವ ನೌಕರರು, ಕಾರ್ಮಿಕರ ವಿಚಾರದಲ್ಲಿ ಹುಟ್ಟಿಕೊಂಡಿದೆ. ಸಂಘಟನೆ ಮತ್ತು ಚಳವಳಿಯೇ ಈ ಪ್ರಶ್ನೆಗೆ ಉತ್ತರ ಎಂದು ಹೇಳಿದರು.

ಈ ನೌಕರರು, ಕಾರ್ಮಿಕರು ಶ್ರಮ ವಹಿಸಿ ಮಾಡುತ್ತಿರುವ ಕೆಲಸದ ಕ್ರೆಡಿಟ್ ಅನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಕೊಳ್ಳುತ್ತಿವೆ. ಹಾಗಾಗಿ ಈ ನೌಕರರು, ಕಾರ್ಮಿಕರನ್ನು ಸಂಘಟಿಸಿ, ಅವರ ಸೌಲಭ್ಯ ಕಲ್ಪಿಸಲು ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದಾ ಮಾತನಾಡಿ, ಬೆಲೆ ಏರಿಕೆ ಕಾರಣದಲ್ಲಿ ಶಾಸಕರು ತಮ್ಮ ವೇತನ ಹೆಚ್ಚಳ ಮಾಡಿಕೊಂಡಿದ್ದಾರೆ. ಇದು ಗುತ್ತಿಗೆಯಡಿ ಕೆಲಸ ಮಾಡುವ ನಿಮ್ಮಂತಹ ನೌಕರರು, ಕಾರ್ಮಿಕರಿಗೆ ಮಾತ್ರ ಅನ್ವಯಿಸುವುದಿಲ್ಲ. ಇದು ಸರ್ಕಾರದ ದ್ವಂದ್ವ ನೀತಿಯಾಗಿದೆ. ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಮಾ.28 ಮತ್ತು 29ರಂದು ದೇಶವ್ಯಾಪಿ ಕಾರ್ಮಿಕರ ಮುಷ್ಕರ ಹಮ್ಮಿಕೊಂಡಿದ್ದು, ಇದಕ್ಕೆ ತಾವೆಲ್ಲರೂ ಬೆಂಬಲ ನೀಡಬೇಕೆಂದು ಕೋರಿದರು. ಮಕ್ಕಳ ಹಕ್ಕುಗಳ ಹೋರಾಟಗಾರ ಬಾಬುರಾಜ್ ಉದ್ಘಾಟಿಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಬಾಲಾಜಿ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ಖಾಯಂಯೇತರ ನೌಕರರ ಸಂಘದ ಕಾರ್ಯದರ್ಶಿ ಕಾಂತರಾಜು, ಮೈಸೂರು ಸಂಚಾಲಕ ಚಂದ್ರಕುಮಾರ್ ಮತ್ತಿತರರು ಹಾಜರಿದ್ದರು.

ನೀವೇ ಪ್ರಶ್ನೆ ಕೇಳಿ, ನೀವೇ ವಿವಾದ ಮಾಡುತ್ತೀರಾ......!

ಮಾಧ್ಯಮದವರ ಮೇಲೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ



ಮೈಸೂರು,ಮಾ.26(ಆರ್‌ಕೆ)–ನೀವೇ ಪ್ರಶ್ನೆ ಕೇಳಿ, ನೀವೇ ವಿವಾದ ಮಾಡುತ್ತೀರಾ .....! ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಮಾಧ್ಯಮ ಪ್ರತಿನಿಧಿಗಳ ಮೇಲೆ ಗರಂ ಆದ ಪ್ರಸಂಗ ಶನಿವಾರ ನಡೆಯಿತು.

ಮೈಸೂರಿನಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಾನು ಸ್ವಾಮೀಜಿಗಳ ಬಗ್ಗೆ ಅಗೌರವವಾಗಿ ಮಾತನಾಡಿಲ್ಲ. ನಿನ್ನೆ ನಾನು ಹಿಜಾಬ್ ಪದವನ್ನೇ ಬಳಸಿಲ್ಲ. ಹಿಜಾಬ್‌ಗೂ ದುಪ್ಪಟ್ಟಾಕ್ಕೂ ವ್ಯತ್ಯಾಸವೇ ಗೊತ್ತಿಲ್ವಾ ನಿಮ್ಗೆ ಎಂದು ಮಾಧ್ಯಮ ಪ್ರತಿನಿಧಿಗಳ ಮೇಲೆ ಹರಿಹಾಯ್ದರು.

ನೀವೇ ಪ್ರಶ್ನೆ ಕೇಳ್ತೀರಿ, ನೀವೇ ವಿವಾದ ಮಾಡ್ತೀರಿ. ಹಿಜಾಬ್ ಬೇರೆ ದುಪ್ಪಟ್ಟಾವೇ ಬೇರೆ. ಜನರು ಸಾರ್ವಜನಿಕವಾಗಿ ಯಾವ ವಸ್ತ್ರ ಬಳಸುತ್ತಾರೆಂದು ಹೇಳಿದ್ದೇನೆ. ಅದನ್ನು ನೀವು ಯಾವ್ಯಾವುದಕ್ಕೋ ಲಿಂಕ್ ಮಾಡಿ ವಿವಾದ ಸೃಷ್ಟಿಸುತ್ತಿದ್ದೀರಿ. ನನಗೆ ಹಿಂದಿನಿಂದಲೂ ಸ್ವಾಮೀಜಿಗಳ ಮೇಲೆ ಅಪಾರವಾದ ಗೌರವವಿದೆ. ನಾನೆಂದೂ ಮಠಗಳ ಬಗ್ಗೆ ಅಗೌರವವಾಗಿ ಮಾತನಾಡಿಲ್ಲ. ದುಪ್ಪಟ್ಟಾ ಹಾಕಿಕೊಂಡು ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಕೊಡಿ ಎಂದು ಕೇಳಿದ್ದೇನೆ, ತಪ್ಪಾ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ನಾನು ಸಮವಸ್ತ್ರ ವಿರೋಧಿಯಲ್ಲ, ಸಮವಸ್ತ್ರದ ಜೊತೆ ಅದೇ ಬಣ್ಣದ ದುಪ್ಪಟ್ಟಾಕ್ಕೆ ಅವಕಾಶ ಕೊಡಿ ಎಂದಿದ್ದೇನೆ ಅದರಲ್ಲಿ ತಪ್ಪೇನಿದೆ. ನಾನು ಸಲಹೆ ಕೊಟ್ಟಿದ್ದೇನೆ, ಸ್ವೀಕರಿಸುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು ಎಂದು ಸಿದ್ದರಾಮಯ್ಯ ಖಾರವಾಗಿಯೇ ಪ್ರತಿಕ್ರಿಯಿಸಿದರು.

ದುಪ್ಪಟ್ಟಾವನ್ನು ಸ್ವಾಮೀಜಿಗಳ ಶಿರವಸ್ತ್ರಕ್ಕೆ ಹೋಲಿಸಿಲ್ಲ

ಸಿದ್ದರಾಮಯ್ಯ ಹೇಳಿಕೆ ಸಮರ್ಥಿಸಿಕೊಂಡ ಡಾ.ಯತೀಂದ್ರ ಸಿದ್ದರಾಮಯ್ಯ



ಮೈಸೂರು,ಮಾ.26(ಆರ್‌ಕೆ)–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದುಪ್ಪಟ್ಟಾವನ್ನು ಸ್ವಾಮೀಜಿಗಳ ಶಿರವಸ್ತ್ರಕ್ಕೆ ಹೋಲಿಸಿ ಹೇಳಿಕೆ ನೀಡಿಲ್ಲ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು ತಲೆ ಮೇಲೆ ಬಟ್ಟೆ ಹಾಕುವುದು ತಪ್ಪಲ್ಲ ಎಂದು ಹೇಳುವಾಗ ಜನಸಾಮಾನ್ಯರಿಗೆ ಅರ್ಥವಾಗಲಿ ಎಂದು ಸಿದ್ದರಾಮಯ್ಯ ಆ ರೀತಿ ಹೇಳಿದ್ದಾರೆಯೇ ಹೊರತು ದುಪ್ಪಟ್ಟಾವನ್ನು ಸ್ವಾಮೀಜಿಗಳ ಶಿರವಸ್ತ್ರಕ್ಕೆ ಹೋಲಿಸಿಲ್ಲ ಎಂದು ಸಮರ್ಥಿಸಿಕೊಂಡರು. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ತಲೆ ಮೇಲೆ ಬಟ್ಟೆ ಹಾಕುವುದು ತಪ್ಪೇ ಎಂದು ಹೇಳಿದ್ದಾರೆಯೇ ಹೊರತು ಸ್ವಾಮೀಜಿಗಳಿಗೆ ಅವಮಾನ ಮಾಡುವ ರೀತಿಯಲ್ಲಿ ಸಿದ್ದರಾಮಯ್ಯನವರು ಹೇಳಿಕೆ ನೀಡಿಲ್ಲ. ಹಿಜಾಬ್ ಬದಲು ದುಪ್ಪಟ್ಟಾಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಅದನ್ನು ವಿಧಾನಸಭೆಯಲ್ಲೂ ಅವರು ಹೇಳಿದ್ದರು. ಅದರಲ್ಲಿ ತಪ್ಪೇನಿದೆ ಎಂದು ಡಾ.ಯತೀಂದ್ರ ಪ್ರಶ್ನಿಸಿದರು.

ದುಪ್ಪಟ್ಟಾದ ಬಗ್ಗೆ ಮಾತನಾಡುವಾಗ ಹಿಂದೂ, ಜೈನ ಮಹಿಳೆಯರು ತಲೆಯ ಮೇಲೆ ಬಟ್ಟೆ ಹಾಕಿಕೊಳ್ಳುತ್ತಾರೆ. ನಮ್ಮ ನಾಯಕಿ ಇಂದಿರಾ ಗಾಂಧಿ ತಲೆಯ ಮೇಲೆ ಸೆರಗು ಹಾಕುತ್ತಿದ್ದರು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಎಲ್ಲಾ ಧರ್ಮಗಳಲ್ಲೂ ತಲೆಯ ಮೇಲೆ ಬಟ್ಟೆ ಹಾಕುವ ಸಂಸ್ಕೃತಿ ಇದೆ ಎಂಬುದನ್ನು ತಿಳಿಸಿದ್ದಾರೆ. ಹಿಜಾಬ್ ಮತ್ತು ಸ್ವಾಮೀಜಿಗಳ ಕಾವಿ ಒಂದೇ ಎಂದು ಅವರು ಹೇಳಿಲ್ಲ, ಇದನ್ನು ವಿವಾದ ಮಾಡುತ್ತಿರುವುದೇಕೇ ಎಂದು ಡಾ.ಯತೀಂದ್ರ ಪ್ರಶ್ನಿಸಿದರು.

ಅರ್ಜಿ ಆಹ್ವಾನ

ಮೈಸೂರು,ಮಾ.26–ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ಜೀವಜಲ ಯೋಜನೆಯಡಿ ಲಿಂಗಾಯತ ಸಮುದಾಯ ಪ್ರವರ್ಗ–3ಬಿಗೆ ಒಳಪಡುವ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿದಾರರು ಕನಿಷ್ಠ 2 ಹಾಗೂ ಗರಿಷ್ಠ 5 ಎಕರೆ ಜಮೀನು ಹೊಂದಿದ್ದು, ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿಲ್ಲದೆ ಇರುವ ಸಣ್ಣ ಹಾಗೂ ಅತಿ ಸಣ್ಣ ರೈತರಾಗಿದ್ದು, ವಾರ್ಷಿಕ ವರಮಾನ 40,000 ರೂ.ಗಳ ಮಿತಿಯಲ್ಲಿರಬೇಕು. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಮಾಹಿತಿಗೆ www.dbcdc.karnataka.gov.in, ದೂ.ಸಂ.080–22865522, 0821–2341194 ಸಂಪರ್ಕಿಸಿ.




ಬೆಂಗಳೂರಿನ ಮಂಗನಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಬೆಸ್ಕಾಂ ಕಂಪನಿ ಟ್ರಾನ್ಸ್‌ಫಾರ್ಮರ್ ಸ್ಫೋಟದಲ್ಲಿ ನಿಧನರಾದ ಶಿವರಾಜು ಮತ್ತು ಮಗಳಾದ ಚೈತನ್ಯ ಕುಟುಂಬದ ಸದಸ್ಯರಿಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಸಾಂತ್ವನ ಹೇಳಿ, ವೈಯಕ್ತಿಕ ಧನಸಹಾಯ ಮಾಡಿದರು. ಈ ವೇಳೆ ಶ್ರೀನಿವಾಸ್, ಮಂಜುನಾಥ್, ಬಾಬು, ಮುನಿಯಪ್ಪ, ಪುಟ್ಟಪ್ಪ ಇನ್ನಿತರರು ಉಪಸ್ಥಿತರಿದ್ದರು.

ಕೈಲಾಸಮೂರ್ತಿಗೆ ಪಿಹೆಚ್.ಡಿ



ಮೈಸೂರು,ಮಾ.26–ಡಾ.ವಾಸುದೇವಮೂರ್ತಿ ಮಾರ್ಗದರ್ಶನದಲ್ಲಿ ಕೆ.ಕೈಲಾಸಮೂರ್ತಿ ಜಾನಪದ ವಿಷಯದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು ಯೋಗಿ ನಾರೇಯಣ ಯತೀಂದ್ರರ ಜಯಂತಿ ಆಚರಣೆ



ಮೈಸೂರು, ಮಾ.26– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಾ.27ರಂದು ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ)ಅನ್ನು ಮಧ್ಯಾಹ್ನ 12.30ಕ್ಕೆ ಕಲಾಮಂದಿರ ಆವರಣದಲ್ಲಿ ಆಯೋಜಿಸಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಾರ್ಯಕ್ರಮದಲ್ಲಿ ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು ಹಾಗೂ ಮುಖ್ಯ ಅತಿಥಿಗಳಾಗಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಪ್ರತಾಪ್‌ಸಿಂಹ, ಸುಮಲತಾ ಅಂಬರೀಶ್ ಹಾಗೂ ಗಣ್ಯರು ಪಾಲ್ಗೊಳ್ಳುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾಜಿ ಶಾಸಕರೂ ಆದ 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತ ವಾಸು ಅವರನ್ನು ಡಿಸಿಸಿ ಕಾರ್ಯದರ್ಶಿ ಹಾಗೂ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ, ಸಾಹುಕಾರ ಹುಂಡಿ ಗೋಪಾಲಗೌಡ ಅಭಿನಂದಿಸಿ, ಶುಭಾಶಯ ಕೋರಿದರು.



ಬ್ರಹ್ಮಿಭೂತ ಶ್ರೀ ವಾಸುದೇವ ಮಹಾರಾಜ ಫೌಂಡೇಶನ್ ವತಿಯಿಂದ ಶ್ರೀ ವಾಸುದೇವ ಮಹಾರಾಜರ ಜಯಂತಿ ಅಂಗವಾಗಿ ನೀಡಲಾದ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಯಾದ ಶಾಸನ ತಜ್ಞರಾದ ಡಾ. ವಸುಂಧರ ಹಾಗೂ ಫಿಲಿಯೋಜಾ ದಂಪತಿಗೆ ಅವರ ಸ್ವಗೃಹದಲ್ಲಿ ಗೌರವಿಸಲಾಯಿತು. ಚಿತ್ರದಲ್ಲಿ ಸಂಸ್ಥೆಯ ಅಧ್ಯಕ್ಷ ನಾಗೇಂದ್ರಬಾಬು, ಸಾಹಿತಿ ಡಾ. ಕೆ.ಲೀಲಾಪ್ರಕಾಶ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಥೆಯ ಸಂಚಾಲಕ ಎನ್.ಅನಂತ ಹಾಗೂ ಪ್ರಕಾಶ್ ಅವರನ್ನು ಕಾಣಬಹುದು.

ದಿವ್ಯ ರಮೇಶ್‌ಗೆ ಪಿಹೆಚ್.ಡಿ



ಮೈಸೂರು, ಮಾ.26–ಡಾ.ಜಮುನ ಪ್ರಕಾಶ್ ಮಾರ್ಗದರ್ಶನದಲ್ಲಿ ಆಹಾರ ವಿಜ್ಞಾನ ಮತ್ತು ಪೋಷಣೆ ವಿಷಯದಲ್ಲಿ ದಿವ್ಯ ರಮೇಶ್ ಮಂಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಪಿ.ಜ್ಞಾನಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿಯೇ ವಿದ್ಯಾರ್ಥಿಗಳ ಭವಿಷ್ಯದ ದಿಕ್ಸೂಚಿ




ಮೈಸೂರು, ಮಾ.26– ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ಹತ್ತನೇ ತರಗತಿ ಎಂಬುದು ಅತ್ಯಂತ ಮಹತ್ವಪೂರ್ಣವಾದ ಪ್ರಮುಖ ಘಟ್ಟವಾಗಿದ್ದು, ಇದು ವಿದ್ಯಾರ್ಥಿಗಳ ಭವಿಷ್ಯದ ದಿಕ್ಸೂಚಿಯಾಗಿರುವುದರಿಂದ ಈ ಹಂತದಲ್ಲಿ ವಿದ್ಯಾರ್ಥಿಗಳು ಎಲ್ಲೂ ಎಡವದೆ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಿ ಉತ್ತಮ ಫಲಿತಾಂಶ ಹೊಂದಬೇಕೆಂದು ಸಾಹಿತಿ ಬನ್ನೂರು ಕೆ.ರಾಜು ಕರೆ ನೀಡಿದ್ದಾರೆ.

ನಗರದ ರೈಲ್ವೆ ಕಾರ್ಯಾಗಾರದ ಸರ್ಕಾರಿ ಪ್ರೌಢಶಾಲೆ ಮತ್ತು ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಂಯುಕ್ತ ಆಶ್ರಯದಲ್ಲಿ ರೈಲ್ವೆ ಕಾರ್ಯಾಗಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಪರೀಕ್ಷಾರ್ಥಿಗಳಿಗೆ ಶುಭಹಾರೈಕೆ ಮತ್ತು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ಸಾಮಾನ್ಯವಾಗಿ ಪರೀಕ್ಷೆ ಎಂದರೆ ಅದರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎಂದರೆ ಬಹಳಷ್ಟು ವಿದ್ಯಾರ್ಥಿಗಳು ಆತಂಕಕ್ಕೊಳಗಾಗಿ ಭಯಗೊಳ್ಳುವುದರಿಂದ ಅವರು ಎಷ್ಟೇ ಚೆನ್ನಾಗಿ ಓದಿದ್ದರೂ ವಿಫಲರಾಗುವ ಅಪಾಯವಿರುತ್ತದೆ. ಮೊದಲು ವಿದ್ಯಾರ್ಥಿಗಳು ಆತಂಕ, ಭಯದಿಂದ ಹೊರಬಂದು ಮಾನಸಿಕವಾಗಿ ಸದೃಢರಾಗಿ ಧೈರ್ಯವಾಗಿ ಪರೀಕ್ಷೆಯನ್ನು ಬರೆಯಬೇಕೆಂದರು.

ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಮಾತನಾಡಿ, ಭವಿಷ್ಯದಲ್ಲಿ ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಕಲಿತ ಶಾಲೆಯನ್ನು, ಕಲಿಸಿದ ಗುರುಗಳನ್ನು, ತಂದೆ–ತಾಯಿಗಳನ್ನು ವಿದ್ಯಾರ್ಥಿಗಳು ಯಾವತ್ತೂ ಮರೆಯಬಾರದೆಂದು ಕಿವಿಮಾತು ಹೇಳಿದರು.

ಇದೇ ವೇಳೆ 'ಅಭ್ಯಾಸ ಕೈದೀವಿಗೆ' ಎಂಬ ವಿಶೇಷವಾದ ಉಪಯುಕ್ತ ಪುಸ್ತಕವನ್ನು ಬರೆದಿರುವ ಶಿಕ್ಷಕ ಎನ್.ನಾಗರಾಜು ಅವರನ್ನು ಅಭಿನಂದಿಸಲಾಯಿತು. ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಶಿಕ್ಷಣ ತಜ್ಞ ಎ.ಸಂಗಪ್ಪ, ಮುಖ್ಯ ಶಿಕ್ಷಕಿ ಎಲ್.ಲತಾ, ಶಿಕ್ಷಕರಾದ ಕೆ.ಎಂ.ಮಹೇಶ್, ಎನ್.ನಾಗರಾಜು, ಪಿ.ನಾಗಲಿಂಗಪ್ಪ, ಕುಮಾರ್, ಜಿ.ರವಿ, ವಿನುತಾ ಬಗರೆ, ವಿ.ಲೀಲಾವತಿ, ನೂರ್ ಸಲ್ಮಾಬಾನು ಮುಂತಾದವರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.03.2022 ಭಾನುವಾರ, ಮಳೆ ನಕ್ಷತ್ರ: ಉಭಾ 18.03.2022 ರಿಂದ 30.03.2022
ಶ್ರೀ ಪ್ಲವನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ
ತಿಥಿ: ದಶಮಿ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಅನ್ವೇಷಣಾ ಸೇವಾ ಟ್ರಸ್ಟ್ :** ಸಾಧಕರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಅಧ್ಯಕ್ಷತೆ : ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಪ್ರಶಸ್ತಿ ಪುರಸ್ಕೃತರು : ಶಿಕ್ಷಣ ತಜ್ಞ ಪ್ರೊ. ಕೆ.ವಿ. ಅಯ್ಯಣ್ಣ, ಸುಜಯ ಕಾಂತಮ್ಮಣ್ಣಿ, ಪ್ರೊ. ನೀ. ಗಿರಿಗೌಡ, ಲಯನ್ ವೆಂಕಟೇಶ್, ಸಿ. ಬಸವರಾಜು, ಲಕ್ಷ್ಮೀ ಕಿಶೋರ್, ಪ್ರಶಸ್ತಿ ಪ್ರದಾನ : ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಡಾ. ವಿದ್ಯಾಶಂಕರ್, ಮುಖ್ಯ ಅತಿಥಿಗಳು : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಅಧ್ಯಕ್ಷ ಡಾ.ಬಿ.ಆರ್. ನಟರಾಜ ಜೋಯಿಸ್, ಟ್ರಸ್ಟ್ ಸಂಸ್ಥಾಪಕ ಅಮರನಾಥ ರಾಜೇ ಅರಸ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ

■ **ಶ್ರೀ ವೇದವಿದ್ಯಾ ಪ್ರಸಾರಿಣೀ ಸಭಾ :** ನಮಾಮಿ ನಾರಾಯಣಂ ಆಚಾರ್ಯ ಸ್ಮರಣೆ, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥರು, ಮುಖ್ಯ ಅಭ್ಯಾಗತರು : ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಸ್ಥಾಪಕರಾದ ಶ್ರೀ ಭಾಷ್ಯಂ ಸ್ವಾಮೀಜಿ, ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ದಿವಾಕರ ಹೆಗಡೆ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ ಮಾಲೀಕ ಸುಬ್ರಹ್ಮಣ್ಯ, ಡಾ. ಕೆ.ಎನ್. ಶ್ರೀರಂಗರಾಮಾನುಜ ಆಚಾರ್ಯ, ಡಾ. ಶೆಲ್ವಪಿಳ್ಳೈ ಅಯ್ಯಂಗಾರ್, ಶಾಸಕ ಎಸ್.ಎ. ರಾಮದಾಸ್, ವಿಧಾನಪರಿಷತ್ ಮಾಜಿ ಸದಸ್ಯ ಗೋ. ಮಧುಸೂದನ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಿ.ವಿ. ಕೇಶವಮೂರ್ತಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಪ್ರೊ. ಪಿ. ಜಯರಾಮಯ್ಯ ಅಭಿಮಾನಿಗಳ ಬಳಗ ಮತ್ತು ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ :** ನುಡಿ ನಮನ ಕಾರ್ಯಕ್ರಮ, ಸಾನ್ನಿಧ್ಯ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಅಧ್ಯಕ್ಷತೆ : ನಿವೃತ್ತ ವಿಶೇಷ ಕಾರ್ಯದರ್ಶಿ ಡಾ. ಪಿ. ಬೋರೇಗೌಡ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ವಿಶ್ರಾಂತ ಕುಲಪತಿಗಳಾದ ಪ್ರೊ. ಎನ್.ಎಸ್.ರಾಮೇಗೌಡ, ಪ್ರೊ. ಕೆ.ಎಸ್. ರಂಗಪ್ಪ, ಪ್ರೊ. ಕೆ. ಭೈರಪ್ಪ, ಪ್ರೊ. ಎಂ.ಕೆ. ಸೂರಪ್ಪ, ತುಮಕೂರು ವಿವಿ ಕುಲಪತಿ ಪ್ರೊ. ವೈ.ಎಸ್. ಸಿದ್ದೇಗೌಡ, ಪ್ರಸಾರಾಂಗ ವಿಶ್ರಾಂತ ನಿರ್ದೇಶಕ ಪ್ರೊ.ಕೆ.ಟಿ. ವೀರಪ್ಪ, ಪ್ರೊ ಪಿ. ಜಯಶ್ರೀ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘ :** ಪ್ರತಿಭಾ ಪುರಸ್ಕಾರ, ಸಮಾಜ ಸೇವಕರಿಗೆ ಸನ್ಮಾನ, ಸಾನ್ನಿಧ್ಯ : ಭಗೀರಥ ಪೀಠದ ಡಾ. ಪುರುಷೋತ್ತಮಾನಂದಪುರಿ ಮಹಾಸ್ವಾಮೀಜಿ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಭಗೀರಥ ಮಹರ್ಷಿ ಭಾವಚಿತ್ರ ಅನಾವರಣ : ಮಾಜಿ ಸಚಿವ ಸಿ. ಪುಟ್ಟರಂಗಶೆಟ್ಟಿ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಮಹದೇವಶೆಟ್ಟಿ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ

■ **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ :** ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಮೈಸೂರು ರಂಗಭೂಮಿ ಅಂದು–ಇಂದು–ಮುಂದು ನಾಟಕ, ವಿಚಾರ ಸಂಕಿರಣ, ಸಂವಾದ ಮತ್ತು ಸನ್ಮಾನ, ಉದ್ಘಾಟನೆ: ನಾಟಕಕಾರ ಪ್ರೊ.ವೇಣುಗೋಪಾಲ್, ಅಧ್ಯಕ್ಷತೆ: ರಂಗಚಿಂತಕ ಪ್ರೊ.ಮೀರಾಮೂರ್ತಿ, ವಿಷಯ ಮಂಡನೆ: ಗೋವಿಂದೇಗೌಡ, ವೆಂಕಟರಾಜು, ಡಿ.ನಾಗೇಂದ್ರಕುಮಾರ್, ಸನ್ಮಾನಿತರು: ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ಸರೋಜ ಹೆಗ್ಗಡೆ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ:** ಕೆಎಸ್‌ಐಸಿ ಮೈಸೂರು ಸಿಲ್ಕ್ ನೂತನ ಮಳಿಗೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ. ಕೆ.ಸಿ. ನಾರಾಯಣಗೌಡ, ಅಧ್ಯಕ್ಷತೆ : ಕೆಎಸ್‌ಐಸಿ ಅಧ್ಯಕ್ಷ ಎಸ್.ಆರ್. ಗೌಡ, ಸ್ಥಳ: ಕಾಳಿದಾಸ ರಸ್ತೆ, ಸಿಎಫ್‌ಟಿಆರ್‌ಐ ರೆಸಿಡೆನ್ಷಿಯಲ್ ಕಾಂಪ್ಲೆಕ್ಸ್ ಎದುರು, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ಖೇಲೋ ಮಾಸ್ಟರ್ ಗೇಮ್ಸ್ ಫೌಂಡೇಷನ್:** ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಸ್ನಾತಕೋತ್ತರ ಕ್ರೀಡಾ ಮಂಡಳಿ ಅಧ್ಯಕ್ಷ ಪ್ರೊ.ಎಸ್.ಶ್ರೀಕಂಠಸ್ವಾಮಿ, ಮುಖ್ಯ ಅತಿಥಿಗಳು: ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಅಂತಾರಾಷ್ಟ್ರೀಯ ಹಿರಿಯ ಕ್ರೀಡಾಪಟು ಎಂ.ಪಿ.ಚಂದ್ರಶೇಖರ್, ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್. ಸ್ಥಳ: ಮಾನಸ ಒಳಾಂಗಣ ಕ್ರೀಡಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ದಲಿತ ಸಂಘರ್ಷ ಸಮಿತಿ :** ಜಾತಿ ದೌರ್ಜನ್ಯ ಪ್ರಕರಣಗಳು ಮತ್ತು ಪರಿಹಾರಗಳು ಕುರಿತು ಜಾಗೃತಿ ಕಾರ್ಯಕ್ರಮ, ಉದ್ಘಾಟನೆ : ಡಾ. ಬಿ.ಟಿ. ಕವಿತಾ, ಆಶಯ ನುಡಿ : ಡಾ. ಸಂತೋಷ್ ನಾಯಕ್, ವಿಚಾರ ಮಂಡನೆ : ಡಾ. ಎಸ್. ಗುರುಸ್ವಾಮಿ, ಅಧ್ಯಕ್ಷತೆ : ದಸಂಸ ಜಿಲ್ಲಾ ಸಂಚಾಲಕ ಸಿ. ಉಮಾಮಹದೇವ, ಸ್ಥಳ: ಬುದ್ಧವಿಹಾರ, ಅಶೋಕ ವೃತ್ತ, ಸಂಜೆ 5ಕ್ಕೆ.

■ **ಶ್ರೀ ನಿಮಿಷಾಂಬಾ ನೃತ್ಯ ಶಾಲೆ :** ಮಾನಸ ಆರ್. ಅಭಿಷೇಕ್ ಅವರ ಭರತನಾಟ್ಯ ರಂಗಪ್ರವೇಶ, ಸ್ಥಳ : ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ರಾಗವೈಭವ :** ವಿದ್ವಾನ್ ಅಭಿಷೇಕ್ ರಘುರಾಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಹೆಚ್.ಎಂ. ಸ್ಮಿತಾ (ವಯೋಲಿನ್), ವಿದ್ವಾನ್ ಪತ್ರಿ ಸತೀಶ್ ಕುಮಾರ್ (ಮೃದಂಗ), ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ವೇದಾಂತ ಪರಿಭಾಷಾ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ :** ಜಿಲ್ಲಾ ಕಾನೂನು ಘಟಕ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ಎಸ್.ಆರ್. ಬನ್ನೂರ್ ಮಠ್, ಅಧ್ಯಕ್ಷತೆ : ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಘಟಕದ ಹಿರಿಯ ಉಪಾಧ್ಯಕ್ಷ ಎನ್. ತಿಪ್ಪಣ್ಣ, ಮುಖ್ಯ ಅತಿಥಿಗಳು : ನಿವೃತ್ತ ಲೋಕಾಯುಕ್ತ ಸುಭಾಷ್ ಬಿ.ಆಡಿ, ಶಾಸಕ ಈಶ್ವರ ಬಿ. ಖಂಡ್ರೆ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಕಿರಿಯ ರೆಪರ್ಟರಿ ಕಲಾವಿದರಿಂದ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ : ಆರ್. ನಾಗೇಶ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ವಿಶ್ವ ರಂಗಭೂಮಿ ದಿನಾಚರಣೆ, ಉಪಸ್ಥಿತರು : ರಾಷ್ಟ್ರೀಯ ನಾಟಕ ಶಾಲೆ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹನೂರು ಚೆನ್ನಪ್ಪ, ವಿಶ್ವ ರಂಗಭೂಮಿ ಸಂದೇಶ ವಾಚನ : ವಿಜಯಲಕ್ಷ್ಮಿ ಮಂಜುನಾಥ್, ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ : ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಸರೋಜ ಹೆಗ್ಗಡೆ, ಸಂಜೆ 6ಕ್ಕೆ; ಸಂಜೆ 7ಕ್ಕೆ ಜಿಪಿಐಈಆರ್ ತಂಡದಿಂದ ಕರುಳ ತೆಪ್ಪದ ಮೇಲೆ ನಾಟಕ ಪ್ರದರ್ಶನ, ನಿರ್ದೇಶನ : ಎಂ.ಪಿ. ಹರಿದತ್ತ, ಸ್ಥಳ: ಕಿರುರಂಗ ಮಂದಿರ.

■ **ನಟನರಂಗಶಾಲೆ :** ವಿಶ್ವ ರಂಗಭೂಮಿ ದಿನದ ಅಂಗವಾಗಿ ಗುರುದೇವ ರವೀಂದ್ರನಾಥ ಟ್ಯಾಗೋರರ 'ರಕ್ತ ಕರಬಿ' ನಾಟಕ ಆಧಾರಿತ 'ಕೆಂಪು ಕಣಗಿಲೆ' ನಾಟಕ ಪ್ರದರ್ಶನ, ಕನ್ನಡಕ್ಕೆ ರೂಪಾಂತರ : ಸುಧಾ ಆಡುಕಳ, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ನಿರಂತರ ಫೌಂಡೇಶನ್ :** ನಿರಂತರ ರಂಗ ಉತ್ಸವ, ಮೌನೇಶ್ ಬಡಿಗೇರ ರಚಿಸಿರುವ ರಂಗಭೂಮಿ, ಉಡುಪಿ ಅಭಿನಯಿಸುವ ವಿ.ಶಾಂ.ಕೇ ನಾಟಕ ಪ್ರದರ್ಶನ, ವಿನ್ಯಾಸ ಮತ್ತು ನಿರ್ದೇಶನ : ಮಂಜುನಾಥ ಎಲ್. ಬಡಿಗೇರ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿಂದು

■ **ಶ್ರೀ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ :** ಬ್ರಹ್ಮ ರಥೋತ್ಸವ, ಬೆಳಗ್ಗೆ ಶ್ರೀಯವರ ಉತ್ಸವ, ಸಂಜೆ ಕಾಶಿಯಾತ್ರಾ ಉತ್ಸವ, ಸಂಬಂಧ ಮಾಲಾಪೂರ್ವಕ, ಶ್ರೀರುಕ್ಮಿಣೀ ಸತ್ಯಭಾಮಾ ಸಹಿತ ಶ್ರೀ ಹಿಮವದ್ ಗೋಪಾಲಸ್ವಾಮಿಯವರ ದಿವ್ಯ ಕಲ್ಯಾಣೋತ್ಸವ, ಸ್ಥಳ: ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ–ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎಂ.ಎಸ್.ಲಕ್ಷ್ಮೀಶ ಮತ್ತು ಶಾಂತಲಾ ವಟ್ಟಂ, ವ್ಯಾಖ್ಯಾನ– ಡಾ.ಮ.ರಾಮಕೃಷ್ಣ, 7.15 ಕಾದಂಬರಿ ವಿಹಾರ–ಎಸ್.ಎಲ್.ಭೈರಪ್ಪನವರ 'ದೂರ ಸರಿದರು' ಕಾಂದಬರಿಯ ಬಾನುಲಿ ಓದು. ಪ್ರಸ್ತುತಿ–ಉಮೇಶ್ ಎಸ್.ಎಸ್., 9.00 ಭವಿಷ್ಯದ ಬೆರಗು–ನವದೆಹಲಿಯ ವಿಜ್ಞಾನ್ ಪ್ರಸಾರ್ ಹಾಗೂ ತಂತ್ರವಿದ್ಯಾಮಂಡಲಿ ಸಹಯೋಗದಲ್ಲಿ ವಿಜ್ಞಾನ ಸರಣಿ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ–ಸ್ಟಿರಾಯ್ಡ್ ಉಪಯೋಗ ಕುರಿತು ಡಾ.ರೇಖಾ ವಿ. ಭಟ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳಮಂಟಪ–ಮಾನಸ ಸರೋವರ ಪುಷ್ಕರಿಣಿ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.45 ಜನಪದ ಸಂಗೀತ –ಜಯಮ್ಮ ಮತ್ತು ತಂಡ, 1.20 ಭಾವಗೀತೆ–ಎಸ್.ಶಾರದ, ಸುನಂದ ದಿಲೀಪ್, ವೃಂದಗಾನ, 2.35 ಚಲನಚಿತ್ರ ಧ್ವನಿವಾಹಿನಿ, 3.40 ಯಕ್ಷಗಾನ ತಾಳಮದ್ದಲೆ, ಪ್ರಸಂಗ–ವಿದ್ಯುನ್ಮತಿ ಕಲ್ಯಾಣ, ಪ್ರಸ್ತುತಿ– ಹೇರಂಜೆ ನೀಲಾವರ ಲಕ್ಷ್ಮೀನಾರಾಯಣ ರಾವ್ ಮತ್ತು ಬಳಗದವರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿನಮ್ಮ ಸಂವಿಧಾನ, ಪರಿಚಯಿಸುತ್ತಾರೆ ಡಾ.ಸುಧಾಕರ ಹೊಸಳ್ಳಿ, 7.00 AIR Nxt programme, 9.00 ಕೃಷಿರಂಗ–ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಸುಷ್ಮಾ ವಾಜಪೇಯಿ–ಗಾಯನ, 11.00 ಸವಿನೆನಪು

ಒಂದೂವರೆ ತಿಂಗಳಲ್ಲಿ ಚಾಮುಂಡಿ ಬೆಟ್ಟದ ನಂದಿ ವಿಗ್ರಹ ಸಂರಕ್ಷಣೆ ಕಾರ್ಯ ಆರಂಭ




● ಪುರಾತತ್ವ ಇಲಾಖೆ ಸೂಚನೆ ಮೇರೆಗೆ ಶಿಲ್ಪಿ ಅರುಣ್ ಯೋಗಿರಾಜ್ ಸ್ಥಳ ಪರಿಶೀಲನೆ ● ಕೊಬ್ಬರಿ, ಕೊಬ್ಬರಿ ಎಣ್ಣೆ ಬಳಸಿ ಸಂರಕ್ಷಣೆ
● ಮೊದಲಿನಂತೆ ಕಪ್ಪು ಬಣ್ಣದಲ್ಲಿ ಕಂಗೊಳಿಸಲಿದೆ ನಂದಿ ವಿಗ್ರಹ

ಮೈಸೂರು, ಮಾ.26(ಜಿಎ)– ಬಿರುಕು ಕಾಣಿಸಿಕೊಂಡು ತನ್ನ ನೈಜತೆಯನ್ನು ಕಳೆದುಕೊಂಡಿರುವ ಚಾಮುಂಡಿ ಬೆಟ್ಟದ ಏಕಶಿಲಾ ನಂದಿ ವಿಗ್ರಹ ಸಂರಕ್ಷಣೆಯ ಕಾರ್ಯ ಒಂದೂವರೆ ತಿಂಗಳಲ್ಲಿ ಆರಂಭವಾಗಲಿದ್ದು, ಅದು ಮೊದಲಿನಂತೆ ಕಪ್ಪು ಬಣ್ಣದಲ್ಲೇ ಕಂಗೊಳಿಸಿ ಸುಂದರವಾಗಿ ಕಾಣಲಿದೆ.

ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ನಂದಿ ವಿಗ್ರಹದ ರಕ್ಷಣೆ ಕಾರ್ಯಕ್ಕೆ ಮುಂದಾಗಿದೆ. ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವಿಗ್ರಹದ ಸ್ಥಿತಿಗತಿಗಳ ಬಗ್ಗೆ ಮಾಹಿತಿ ನೀಡಲು ತಿಳಿಸಿದ್ದು, ಅದರಂತೆ ಅವರು ಸಹ ಎರಡು ಬಾರಿ ವಿಗ್ರಹದ ಸಂಪೂರ್ಣವಾಗಿ ವೀಕ್ಷಿಸಿ ಕೆಲ ಸಲಹೆಗಳನ್ನು ನೀಡಿದ್ದಾರೆ.

ನಂದಿ ವಿಗ್ರಹವನ್ನು ಕೃಷ್ಣ ಶಿಲೆಯಲ್ಲಿ ನಿರ್ಮಾಣ ಮಾಡಿದ್ದರೆ, ಯಾವುದೇ ಬಿರುಕು ಕಾಣಿಸಿ ಕೊಳ್ಳುತ್ತಿರಲಿಲ್ಲ. ಇಲ್ಲಿ ಬಳಸಿರುವುದು ಕಾಡುಗಲ್ಲು. ಆದ್ದರಿಂದ 300 ರಿಂದ 400 ವರ್ಷಗಳ ನಂತರ ಬಿರುಕು ಕಾಣಿಸಿಕೊಳ್ಳುತ್ತಿದೆ ಎಂದು ಶಿಲ್ಪಿ ಅರುಣ್ ಯೋಗಿರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಅಧಿಕಾರಿಗಳು ಮತ್ತು ಶಿಲ್ಪಿ ಅರುಣ್ ಯೋಗಿರಾಜ್ ನಂದಿ ವಿಗ್ರಹವನ್ನು ಪರಿಶೀಲಿಸುತ್ತಿರುವುದು.

ಈ ಹಿಂದೆ ಜಿಲ್ಲಾಧಿಕಾರಿಗಳಾಗಿದ್ದ ಅಭಿರಾಮ್ ಜಿ. ಶಂಕರ್ ಅವರ ಅವಧಿಯಲ್ಲಿ ಒಂದು ಬಾರಿ ನಂದಿ ವಿಗ್ರಹವನ್ನು ಪರಿಶೀಲನೆ ನಡೆಸಿದ್ದೆ. ನಂತರ ಅವರು ವರ್ಗಾವಣೆಯಾದರು. ಆ ಕೆಲಸ ಅರ್ಧದಲ್ಲಿಯೇ ನಿಂತು ಹೋಗಿತ್ತು. ಎರಡು ತಿಂಗಳ ಹಿಂದೆ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತರಾದ ಬಿ.ಆರ್. ಪೂರ್ಣಿಮಾ ಸಂಪರ್ಕಿಸಿ ನೀಡಿದ ಸುಚನೆ ಮೇರೆಗೆ ಎರಡನೇ ಬಾರಿ ಸ್ಥಳಕ್ಕೆ ಭೇಟಿ ನೀಡಿ ವಿಗ್ರಹವನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದೇನೆ. ವಿಗ್ರಹದ ಕೆಲ ಭಾಗಗಳಲ್ಲಿ ಬಿರುಕುಗಳಿವೆ. ಅವುಗಳನ್ನು ಮುಚ್ಚುವುದರೊಂದಿಗೆ ಸಂಪೂರ್ಣ ವಿಗ್ರಹದ ಸಂರಕ್ಷಣೆಯನ್ನು ಮಾಡಬೇಕಿದೆ ಎಂದು ಈಗಾಗಲೇ ಮಾಹಿತಿಯನ್ನು ನೀಡಲಾಗಿದ್ದು, ಕಾರ್ಯದ ಆದೇಶ ಬರಬೇಕಿದೆ ಎಂದರು.

> ನಂದಿ ವಿಗ್ರಹ ಸಂರಕ್ಷಣೆಯ ವಿಚಾರವಾಗಿ ಈಗಾಗಲೇ ಚಾಮುಂಡಿಬೆಟ್ಟದವರ ಜೊತೆ ಚರ್ಚೆ ನಡೆಸಲಾಗಿದ್ದು, ಅವರೇ ಇದರ ಸಂಪೂರ್ಣ ವೆಚ್ಚವನ್ನು ಭರಿಸಲಿದ್ದಾರೆ. ಅದರ ಅಂದಾಜು ವೆಚ್ಚವನ್ನು ಪಟ್ಟಿ ಮಾಡಲು ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ತಿಳಿಸಲಾಗಿದ್ದು, ಅವರು ಅದರ ಕಾರ್ಯದಲ್ಲಿದ್ದಾರೆ. ಮುಂದಿನ ಒಂದೂವರೆ ತಿಂಗಳ ಒಳಗೆ ಕಾರ್ಯಾದೇಶ ದೊರೆತು ಸಂರಕ್ಷಣೆ ಕಾರ್ಯ ಆರಂಭವಾಗಲಿದೆ.
>
> **ಬಿ.ಆರ್. ಪೂರ್ಣಿಮಾ,** ಆಯುಕ್ತರು, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ

ವೈಜ್ಞಾನಿಕವಾಗಿ ಸಂರಕ್ಷಣೆ : ನಂದಿ ವಿಗ್ರಹಕ್ಕೆ ಬಳಸಿರುವ ಕಲ್ಲು 300 ರಿಂದ 400 ವರ್ಷಕ್ಕಿಂತ ಹಳೆಯದಾಗಿದ್ದು, ಮಳೆ, ಗಾಳಿ, ಬಿಸಿಲು ಮತ್ತು ತೇವಾಂಶದಿಂದ ಈ ರೀತಿ ಬಿರುಕು ಕಂಡು ಬಂದಿದೆ. ಮೊದಲು ಬಿರುಕು ಬಿಟ್ಟಿರುವ ಭಾಗಗಳನ್ನು ಯಾವುದೇ ಕೆಮಿಕಲ್ ಬಳಸದೆ ವೈಜ್ಞಾನಿಕವಾಗಿ ಸಂರಕ್ಷಣೆ ಮಾಡಲಾಗುತ್ತದೆ.

ಕೊಬ್ಬರಿ ಎಣ್ಣೆ ಬಳಕೆ : ವಿಗ್ರಹದ ಕೆಲ ಭಾಗದಲ್ಲಿ ಸಣ್ಣ ಸಣ್ಣ ರಂಧ್ರಗಳು ಕಾಣಿಸುತ್ತಿದ್ದು, ಅವುಗಳು ಸಹ ವಾತಾವರಣದ ವೈಪರೀತ್ಯದಿಂದ ಆಗಿವೆ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಮೊದಲು ಕೊಬ್ಬರಿ ಎಣ್ಣೆಯನ್ನು ವಿಗ್ರಹದ ಎಲ್ಲಾ ಭಾಗಗಳಿಗೆ ಹಚ್ಚಲಾಗುತ್ತದೆ. ನಂತರ ಒಣ ಕೊಬ್ಬರಿಯನ್ನು ಸುಟ್ಟು ಕಾರ್ಬನ್ ಪುಡಿ ಮಾಡಿ ಅದನ್ನು ಸಂಪೂರ್ಣ ವಿಗ್ರಹಕ್ಕೆ ಲೇಪಿಸಲಾಗುತ್ತದೆ. ಇದರಿಂದ ಮೊದಲಿನ ನಂದಿಯಂತೆ ಕಪ್ಪು ಬಣ್ಣದಲ್ಲಿ ನೋಡಬಹುದು. ಈ ಶಿಲೆಗಳಿಗೆ ಹಿಂದಿನ ಕಾಲದಲ್ಲಿಯೂ ಇದೇ ಮಾರ್ಗವನ್ನು ಅನುಸರಿಸಲಾಗುತಿತ್ತು. ನಂದಿ ವಿಗ್ರಹಕ್ಕೆ ಮಸ್ತಾಕಾಭಿಷೇಕ ಮಾಡುವ ಮೂಲಕ ವಿಗ್ರಹವನ್ನು ಸಂರಕ್ಷಿಸಿಕೊಳ್ಳಬಹುದು ಎಂದು ಶಿಲ್ಪಿ ಅರುಣ್ ಯೋಗಿರಾಜ್ ತಿಳಿಸಿದರು.

2019ರಲ್ಲಿ ನಂದಿ ವಿಗ್ರಹದಲ್ಲಿ ಮೊದಲ ಬಾರಿ ಬಿರುಕು ಕಾಣಿಸಿಕೊಂಡಿತ್ತು ತದ ನಂತರ ಪಾರಂಪರಿಕ ತಜ್ಞರ ಶಿಫಾರಸ್ಸಿನ ಮೇರೆಗೆ ವಿಗ್ರಹದಲ್ಲಿ ಬಿರುಕು ಬಿಟ್ಟಿರುವ ಭಾಗಗಳಿಗೆ ಅರಾಲ್ಡೈಡ್‌ನೊಂದಿಗೆ ಸಣ್ಣ ಸಣ್ಣ ಕಲ್ಲಿನ ಪುಡಿ ಮಿಶ್ರಣ ಮಾಡಿ ಲೇಪಿಸಲಾಗಿತ್ತು ಆದರೆ ಪರಿಸರದಲ್ಲಿ ಆಗುತ್ತಿರುವ ಹವಮಾನ ವೈಪರೀತ್ಯದಿಂದ ಮತ್ತೆ ಬಿರುಕು ಕಂಡಿದ್ದು, ಸಂಬಂಧಪಟ್ಟ ಆಧಿಕಾರಿಗಳು ನಂದಿ ವಿಗ್ರಹ ರಕ್ಷಣೆ ಮಾಡಲು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿತ್ತು.

ಆರ್‌ಟಿಓ ಕಚೇರಿ ತೆರಿಗೆ ವಂಚನೆ ಪ್ರಕರಣ ಸಿಐಡಿ ತನಿಖೆಗೆ

ಪರಿಷತ್‌ನಲ್ಲಿ ಸಿ.ಎನ್.ಮಂಜೇಗೌಡರಿಗೆ ಸಾರಿಗೆ ಸಚಿವ ಶ್ರೀರಾಮುಲು ಉತ್ತರ





ಬೆಂಗಳೂರು, ಮಾ.26–ಆರ್‌ಟಿಓ ಕಚೇರಿಗಳಲ್ಲಿ ನಡೆದಿರುವ ತೆರಿಗೆ ವಂಚನೆ ಪ್ರಕರಣವನ್ನು ಸಿಐಡಿ ತನಿಖೆಗೆ ಒಳಪಡಿಸಲಾಗುವುದು ಎಂದು ಸಾರಿಗೆ ಸಚಿವ ಶ್ರೀರಾಮುಲು ಅವರು ವಿಧಾನಪರಿಷತ್‌ನಲ್ಲಿ ಘೋಷಿಸಿದರು.

ಜೆಡಿಎಸ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರಶ್ನೆಗೆ ಉತ್ತರಿಸಿದ ಸಾರಿಗೆ ಸಚಿವ ಶ್ರೀರಾಮುಲು ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುತ್ತಿರುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಮಂಜೇಗೌಡರು ಆಡಿ, ರೇಂಜ್ ರೋವರ್, ಬಿಎಂಡಬ್ಲ್ಯು ಸೇರಿದಂತೆ 224 ಮಾದರಿಯ ಐಷಾರಾಮಿ ಕಾರುಗಳಿಗೆ ಜೀವಿತಾವಧಿ ತೆರಿಗೆ ಪಾವತಿಸಿಕೊಳ್ಳದೇ ಆರ್‌ಟಿಓ ಅಧಿಕಾರಿಗಳು ನೂರಾರು ಕೋಟಿ ರೂ.ಗಳನ್ನು ಲಪಟಾಯಿಸಿದ್ದಾರೆ ಎಂದು ರಾಜ್ಯದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ವರದಿಯಾಗಿದೆ. ಈ ಸಂಬಂಧ ತನಿಖೆಗೆ ನೇಮಿಸಲಾಗಿದ್ದ ಸಾರಿಗೆ ಇಲಾಖೆ ಅಧಿಕಾರಿಗಳನ್ನೊಳಗೊಂಡ ಸಮಿತಿಯೇ ಬೆಂಗಳೂರಿನ ಕೋರಮಂಗಲ ಆರ್‌ಟಿಓ ಕಚೇರಿಯಲ್ಲಿ ಇಂತಹ ಸರಣಿಯ 95 ಸಾವಿರ ಕಾರುಗಳು ನೋಂದಣಿಯಾಗಿರುವ ಬಗ್ಗೆ ವರದಿ ನೀಡಿದೆ. 2015ರ ಏಪ್ರಿಲ್‌ನಿಂದ 2021ರ ನವೆಂಬರ್ 30ರವರೆಗೆ ಸುಮಾರು 20 ಲಕ್ಷಕ್ಕೂ ಮೇಲ್ಪಟ್ಟ ಕಾರುಗಳ ತೆರಿಗೆ ಪಾವತಿಯನ್ನು ಪರಿಶೀಲಿಸಲಾಗಿದೆ. ಹಾಗಾದರೆ ಈ ಅವಧಿಯಲ್ಲಿ ಸರ್ಕಾರಕ್ಕೆ ವಂಚನೆಯಾಗಿರುವ ತೆರಿಗೆಯ ಮೌಲ್ಯವೆಷ್ಟು? ಎಂದು ಪ್ರಶ್ನಿಸಿದರು.



ಪೊಲೀಸರಿಗೆ ಪಿ–ಕ್ಯಾಪ್ ನೀಡಬೇಕು ಎಂದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಸಿ.ಎನ್. ಮಂಜೇಗೌಡ ಮನವಿ ಮಾಡಿದ ಹಿನ್ನೆಲೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಪಿ–ಕ್ಯಾಪ್ ಧರಿಸಿಕೊಂಡು, ಪರಿಶೀಲಿಸಿದ ನಂತರ ಇಲಾಖೆಯಲ್ಲಿ ಪಿ–ಕ್ಯಾಪಿನ ಬಗ್ಗೆ ಮಾತನಾಡಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಚಿನ್ನದ ಕಾರ್ ಟ್ಯಾಕ್ಸಿ: ಬುಕ್ ಮಾಡೋಕೆ 7 ಲಕ್ಷ ರೂ.!

ಬೆಂಗಳೂರು, ಮಾ. 26– ಬೆಂಗಳೂರಿನ ರಸ್ತೆಗಳಲ್ಲಿ ವಿದೇಶಿ ಕಾರುಗಳಿಗೆ ಬರವಿಲ್ಲ. ಅದರಲ್ಲೂ ರೋಲ್ಸ್ ರಾಯ್ಸ್ ಕಾರುಗಳ ಓಡಾಟವನ್ನು ಜನರು ನೋಡಿಯೇ ಇರುತ್ತಾರೆ. ಆದರೀಗ ಹೊಸ ಮಾದರಿಯ ರೋಲ್ಸ್ ರಾಯ್ಸ್ 'ಫ್ಯಾಂಟಮ್' ಕಾರು ಬೆಂಗಳೂರಿನ ರಸ್ತೆಗಳಲ್ಲಿ ಆಕರ್ಷಣೆಯಾಗುತ್ತಿದೆ. ಏಕೆಂದರೆ ಈ ಕಾರು ಗೋಲ್ಡ್ ಪ್ಲೇಟೆಡ್ ಆಗಿದೆ. ಜನರು ಈ ಕಾರ್ ಜೊತೆಗೆ ಸೆಲ್ಫಿ ತೆಗೆಸಿಕೊಳ್ಳಲು ಮುಗಿಬೀಳುತ್ತಿದ್ದಾರೆ. ಈ ಕಾರಿನ ಮಾಲೀಕ ಬಾಬಿ ಚೆಮ್ಮನೂರ್ ಅವರು ಆಭರಣ ವ್ಯಾಪಾರದಲ್ಲಿ ತೊಡಗಿದ್ದಾರೆ. ಜನರ ಎಕ್ಸೈಟ್‌ಮೆಂಟ್ ಕಂಡು ಅವರೂ ಉತ್ಸುಕರಾಗಿದ್ದಾರೆ.




ಬೆಂಗಳೂರಿನ ಕೋರಮಂಗಲದಲ್ಲಿ ಅವರ ಹೊಸ ಆಭರಣ ಮಳಿಗೆ ಉದ್ಘಾಟನೆಗೊಳ್ಳುತ್ತಿದೆ. ಮಳಿಗೆಯಲ್ಲಿ ಈ ಚಿನ್ನದ ಕಾರು ಆಕರ್ಷಣೆಯಾಗಲಿದೆ. ಕಾರಿನಿಂದಾಗಿ ಜನರು ತಮ್ಮ ಮಳಿಗೆಯತ್ತ ಬರುವಂತಾಗಲಿ ಎನ್ನುವ ಆಸೆ ಅವರದು.

ಈ ಚಿನ್ನದ ಕಾರನ್ನು ಜನರು ಕೂಡಾ ಅನುಭವಿಸಬೇಕು ಎನ್ನುವ ಬಾಬಿ ಅವರು ಈ ಕಾರಣಕ್ಕೇ ತಮ್ಮ ಚಿನ್ನದ ಕಾರನ್ನು ಟ್ಯಾಕ್ಸಿಯಾಗಿ ಮಾರ್ಪಾಡು ಮಾಡಿದ್ದಾರೆ. ಜನರು 7 ಲಕ್ಷ ರೂ. ಕೊಟ್ಟು ಈ ಕಾರನ್ನು ಬುಕ್ ಮಾಡಬಹುದಾಗಿದೆ.

ಸಿಎಂ ಬೊಮ್ಮಾಯಿ ಟ್ವಿಟ್ಟರ್ ಖಾತೆ ಹ್ಯಾಕ್

ಬೆಂಗಳೂರು, ಮಾ. 26– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧಿಕೃತ ಟ್ವಿಟ್ಟರ್ ಖಾತೆಯಾದ @ಸಿಎಂ ಆಫ್ ಕರ್ನಾಟಕ ಕೆಲವು ನಿಮಿಷಗಳ ಕಾಲ ಹ್ಯಾಕ್ ಆಗಿತ್ತು. ಇಂದು ಬೆಳಗ್ಗೆ 6 ಗಂಟೆಯಿಂದ 6.18 ರವರೆಗೆ 18 ನಿಮಿಷಗಳ ಕಾಲ ಟ್ವಿಟ್ಟರ್ ಖಾತೆ ಹ್ಯಾಕ್ ಹಾಗಿರುವ ಬಗ್ಗೆ ಟ್ವೀಟಿಗರು ಅನುಮಾನ ವ್ಯಕ್ತಪಡಿಸಿದ್ದರು.



ನೂರಕ್ಕೂ ಹೆಚ್ಚು ಟ್ವೀಟ್‌ಗಳನ್ನು ಮಾಡಿ ಹ್ಯಾಕ್ ಆಗಿರುವ ಬಗ್ಗೆ ಸಿಎಂ ಟ್ವೀಟ್ ಫಾಲೋವರ್ಸ್ ಮಾಹಿತಿ ಹಂಚಿಕೊಂಡಿದ್ದರು.

ಅಲ್ಲದೇ ಇತ್ತೀಚೆಗೆ ಖಾತೆ ತೆರೆದವರ ಪ್ರೊಫೈಲ್ ಸೇರಿದಂತೆ ಹಲವರನ್ನು ಟ್ಯಾಗ್ ಮಾಡಲಾಗಿತ್ತು ಇದನ್ನು ಗಮನಿಸಿದಾಗ ಹ್ಯಾಕ್ ಆಗಿರುವ ಬಗ್ಗೆ ಅನುಮಾನ ಬಂದಿದೆ. ತಕ್ಷಣ ಕಾರ್ಯಪ್ರವೃತ್ತರಾದ ಸಿಎಂ ಕಚೇರಿಯ ಸೋಷಿಯಲ್ ಮೀಡಿಯಾ ಟೀಂ, ಎಲ್ಲ ಟ್ವೀಟ್‌ಗಳನ್ನು ಅಳಿಸಿಹಾಕಿ ಖಾತೆಯನ್ನು ಸರಿಪಡಿಸಿದೆ.

ಹಿರಿಯ ಕಲಾವಿದ ಶಿವಲಿಂಗಪ್ಪನವರಿಗೆ ಸನ್ಮಾನ

ಮೈಸೂರು, ಮಾ.26(ಜಿಎ)– ಮೈಸೂರಿನ ಶಂಕರಮಠದ ರಸ್ತೆಯಲ್ಲಿರುವ ಶ್ರೀ ನಟರಾಜ ಸಭಾ ಭವನದಲ್ಲಿ ಕಲಾವಿದ ಎಲ್.ಶಿವಲಿಂಗಪ್ಪ–75 ಅಭಿನಂದನಾ ಸಮಿತಿ ವತಿಯಿಂದ ಹಿರಿಯ ಕಲಾವಿದ ಎಲ್. ಶಿವಲಿಂಗಪ್ಪ ಅವರನ್ನು 75ನೇ ಜನ್ಮದಿನದ ಅಂಗವಾಗಿ ಶನಿವಾರ ಸಂಜೆ ಸನ್ಮಾನಿಸಲಾಯಿತು.

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಅವರು ಸಮಗ್ರ ಸಾಹಿತ್ಯ ಕೃತಿಗಳ ಅನಾವರಣ ಹಾಗೂ 75ರ ಸವಿಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಹಾಗೂ ಚಿತ್ರ ಮತ್ತು ಶಿಲ್ಪಕಲಾಕೃತಿಗಳ ಪ್ರದರ್ಶನವನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಮ. ಅರ್ಕಸಾಲಿ ಅವರು ಉದ್ಘಾಟಿಸಿದರು.

ನಂತರ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಮಾತನಾಡಿ, ಶಿವಲಿಂಗಪ್ಪ ಅವರು ಮೈಸೂರು ಹಾಗೂ ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಅವರಿಗಿರುವ ವಿದ್ವತ್ ನೋಡಿದರೆ ರಾಷ್ಟ್ರ ಮಟ್ಟದಲ್ಲಿ ಅವರ ಹೆಸರು ಬೆಳಗಬೇಕು. ಕಲಾಕೃತಿಗಳ ರಚನೆಗೆ ಶ್ರದ್ಧೆ ಬೇಕು, ಹಾಗೂ ಅವರ ವಿದ್ಯೆಗೆ ಬೆಲೆ ಸಿಗಬೇಕು. ಶಿಲ್ಪಕಲಾಕೃತಿಗಳ ರಚನೆಯ ಜೊತೆಗೆ 40 ಕೃತಿಗಳನ್ನು ಕೂಡ ಪ್ರಕಟಿಸಿರುವುದು ಮೆಚ್ಚಬೇಕಾದ ಅಂಶ. ಅವರ ಕಲಾಸೇವೆ ಇದೇ ರೀತಿ ಮುಂದುವರೆಯಲಿ ಎಂದರು.




ಇದೇ ವೇಳೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಮ. ಅರ್ಕಸಾಲಿ ಮಾತನಾಡಿ, ನಾಡಿನ ಹಿರಿಯ ಕಲಾವಿದರಲ್ಲಿ ಒಬ್ಬರಾದ ಶಿವಲಿಂಗಪ್ಪ ಅವರು ತಮ್ಮ ಕಲಾಕೃತಿಗಳ ಮೂಲಕವೇ ಹೆಸರು ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಹಿಂದಿನ ಕಾಲದಲ್ಲಿ ರಾಜಾಶ್ರಯದಲ್ಲಿ ಕಲಾವಿದರಿಗೆ ಪೋಷಣೆ ದೊರೆಯುತ್ತಿತು. ಇತ್ತೀಚಿನ ಕಾಲದಲ್ಲಿ ಇವರನ್ನು ಗುರುತಿಸುವವರೆ ಇಲ್ಲ. ಆದರೆ ಇಂದು ಎಲ್.ಶಿವಲಿಂಗಪ್ಪ–75 ಅಭಿನಂದನಾ ಸಮಿತಿ ಅವರನ್ನು ಅಭಿನಂದಿಸುತ್ತಿರುವುದು ಸಂತಸದ ವಿಚಾರವಾಗಿದೆ. ಮುಂದಿನ ದಿನಗಳಲ್ಲಿ ನಾಡಿನಲ್ಲಿರು ಇನ್ನಿತರ ಸಂಘ–ಸಂಸ್ಥೆಗಳು ಇಂತಹ ಕಲಾವಿದರನ್ನು ಗುರುತಿಸಿ ಗೌರವಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಕರ್ನಾಟಕ ರಾಜ್ಯ ಮುಕ್ತಕ ಸಾಹಿತ್ಯ ಅಕಾಡೆಮಿ ಗೌರವಾಧ್ಯಕ್ಷ ಎಸ್. ರಾಮಪ್ರಸಾದ್, ನಗರಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ಶರಣ ಮಹದೇವಪ್ಪ, ನಾಟಕ ಅಕಾಡೆಮಿ ಮಾಜಿ ಸದಸ್ಯ ಬಿ.ಎಂ. ರಾಮಚಂದ್ರ ಅಭಿನಂದನಾ ಸಮಿತಿಯ ಶ್ರೀಕಂಠಸ್ವಾಮಿ, ಎಂ. ಚಂದ್ರಶೇಖರ್, ಡಾ.ಜಮುನಾರಾಣಿ ಮಿರ್ಲೆ, ಶ್ರೀಕಂಠ ಮೂರ್ತಿ ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

ನಗರದ ಕೆಲವೆಡೆ ನೀರು ಸರಬರಾಜು ವ್ಯತ್ಯಯ

ಮೈಸೂರು, ಮಾ.26–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅಮೃತ್ ಯೋಜನೆಯಡಿ ಕೊಳವೆ ಮಾರ್ಗದ ಲಿಂಕಿಂಗ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.29 ಮತ್ತು 30ರಂದು ನಗರದ ಕೆಲವು ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವುಂಟಾಗಲಿದೆ.



ನೀರು ಪೂರೈಕೆಯಲ್ಲಿ ವ್ಯತ್ಯಯವಾಗುವ ಪ್ರದೇಶಗಳು: ವಾರ್ಡ್ ನಂ.1ರಿಂದ 7, ವಾರ್ಡ್ ನಂ. 20, 23, 38, ವಾರ್ಡ್ ನಂ.42 ರಿಂದ 45, ವಾರ್ಡ್ ನಂ. 47 ಮತ್ತು ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲು, ಮೇಟಗಳ್ಳಿ, ಲೋಕನಾಯಕ ನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕ ನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1 ಮತ್ತು 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರ ವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳು.

ಶಕ್ತಿಧಾಮದಿಂದ ಮಹಿಳೆ ನಾಪತ್ತೆ

ಮೈಸೂರು, ಮಾ.26–ಮೈಸೂರಿನ ಶಕ್ತಿಧಾಮ ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರದಿಂದ ಮಹಿಳೆ ನಾಪತ್ತೆಯಾಗಿರುವ ಬಗ್ಗೆ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. 2020 ಸೆ.25ರಂದು ಕೆ.ಆರ್.ಠಾಣೆ ಪೊಲೀಸರು ಅನ್ನಪೂರ್ಣ(26) ಎಂಬ ಈ ಮಹಿಳೆಯನ್ನು ಯಾರೂ ಸಂಬಂಧಿಕರು ಇಲ್ಲವೆಂದು ಹೇಳಿ ಈ ಪುನರ್ವಸತಿ ಕೇಂದ್ರಕ್ಕೆ ಸೇರಿಸಿದ್ದು, ಅಂದಿನಿಂದ ಕೆಲಸ–ಕಾರ್ಯ ಮಾಡಿಕೊಂಡಿದ್ದಳು ಎನ್ನಲಾಗಿದೆ.



ಮಾ.22ರಂದು ಬೆಳಗ್ಗೆ 7.30 ಗಂಟೆ ಸಮಯದಲ್ಲಿ ಶಕ್ತಿಧಾಮ ಗೇಟ್ ಮುಂದೆ ಕಸ ಗುಡಿಸುವ ನೆಪದಲ್ಲಿ ಹೊರಗೆ ಬಂದು ಓಡಿ ಹೋಗಿದ್ದಾಳೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದು, ಈಕೆ ಮೂಕಿ ಮತ್ತು ಕಿವುಡಿಯಾಗಿದ್ದಾಳೆ ಎನ್ನಲಾಗಿದೆ. ಈಕೆಯ ಬಗ್ಗೆ ಸುಳಿವು ಸಿಕ್ಕವರು ದೂ: 0821–2418319, 2418519, 9480802242 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿ ಸಾವು

ಮೈಸೂರು,ಮಾ.26–ಶ್ರೀರಂಗಪಟ್ಟಣ ರೈಲು ನಿಲ್ದಾಣದ ಬಳಿಯ ಫ್ಲೈಓವರ್ ಬ್ರಿಡ್ಜ್‌ನ ರೈಲ್ವೆ ಹಳಿ ಹತ್ತಿರ ಅಪರಿಚಿತ ವ್ಯಕ್ತಿಯೊಬ್ಬರು ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾರೆ. ಸುಮಾರು 40ರಿಂದ 45 ವರ್ಷದ ಈ ವ್ಯಕ್ತಿ ಕೆಂಪು, ಬಿಳಿ–ಗ್ರೇ ಬಣ್ಣದ ಚೆಕ್ಸ್ ತುಂಬು ತೋಳಿನ ಶರ್ಟ್, ಗ್ರೇ ಕಲರ್ ಪ್ಯಾಂಟ್ ಧರಿಸಿದ್ದು, ವಾರಸುದಾರರು ಮೈಸೂರು ರೈಲ್ವೆ ಪೊಲೀಸ್ ಠಾಣೆ (0821–2516579) ಸಂಪರ್ಕಿಸುವುದು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ, ನನಗೆ ರಾತ್ರಿ ಒಂದು ಕನಸು ಬಿದ್ದಿತ್ತು. ಅದ್ರಲ್ಲಿ ನೀವು ನಂಗೆ ವಜ್ರದ ಉಂಗುರ ಕೊಡಿಸ್ತಾ ಇದ್ರಿ ಗೊತ್ತಾ!

ಗಂಡ : ಅರೆ, ನನಗೂ ಅದೇ ಕನಸು ಬಿದ್ದಿತ್ತು ಮಾರಾಯ್ತಿ! ಆದ್ರೆ, ಕೊನೆಯಲ್ಲಿ ಅದ್ರ ಬಿಲ್ ಅನ್ನು ನಿಮ್ಮ ಅಪ್ಪ ಕೊಟ್ರು!

ಮೈಸೂರು ಮಿತ್ರ

ಭಾನುವಾರ, 27 ಮಾರ್ಚ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು, ಪಡೆದ ಅವಕಾಶವನ್ನು ಉಪಯೋಗಿಸಿಕೊಳ್ಳುವವನೇ ಗೆಲ್ಲುವವನು... !! –ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ವೈರತ್ವ ನಾಶಕ್ಕೆ ವಾತ್ಸಲ್ಯವೇ ಮದ್ದು

ನಿಮ್ಮ ಪತ್ರಗಳು

ತಗಡೂರು ಗ್ರಾಪಂನಲ್ಲಿ ಸ್ವಚ್ಛತೆ ಮಾಯ

ಮಾನ್ಯರೆ,



ನಂಜನಗೂಡು ತಾಲೂಕಿನ ತಗಡೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಸ್ವಚ್ಛತೆ ಮಾಯವಾಗಿದ್ದು, ಎಲ್ಲೆಲ್ಲೂ ಕಸದ ರಾಶಿ, ಮಲ ಮೂತ್ರ ತ್ಯಾಜ್ಯಗಳೇ ತುಂಬಿ ರೋಗ ರುಜಿನ ಭೀತಿಯಲ್ಲಿ ಜನರು ವಾಸಿಸುವಂತಾಗಿದೆ.

ಡಾ.ಯತೀಂದ್ರ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣಾ ಕ್ಷೇತ್ರಕ್ಕೆ ಸೇರುವ ತಗಡೂರು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲೂ ಕಸದ ರಾಶಿ, ಮಲಮೂತ್ರಗಳ ತ್ಯಾಜ್ಯ, ಸ್ವಚ್ಛತೆ ಕಾಣದ ಚರಂಡಿಗಳು ಇದೇ ಪರಿಸ್ಥಿತಿಯಲ್ಲಿದೆ. ಕೊಳೆತ ಕಸದ ರಾಶಿಯಿಂದ ಗಬ್ಬು ವಾಸನೆ ಬರುತ್ತಿದ್ದು, ಜನರು ಮೂಗುಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಪಂನಲ್ಲಿ ಶೌಚಾಲಯ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದ್ದರೂ ಸಹ ಗ್ರಾಮಗಳಲ್ಲಿ ಬಯಲೇ ಶೌಚಾಲಯವಾಗಿದೆ.

–ತಗಡೂರು ಗ್ರಾಮಸ್ಥರು, ನಂಜನಗೂಡು ತಾ.

ಇನ್ನು ಸುಂದರ ಹೆಬ್ಬಾಳು ಹೆಬ್ಬಾಗಿಲು, ಡಾ. ಸುಧಾಮೂರ್ತಿ ಹೆಸರಿನ ರಸ್ತೆ ಮಾಡಬಹುದಿತ್ತು!



ಮಾನ್ಯರೆ,

ಮೈಸೂರಲ್ಲಿ ಮೇಟಗಳ್ಳಿ ಪೊಲೀಸ್ ಠಾಣೆ ಮುಂದಿನಿಂದ ಸೂರ್ಯ ಬೇಕರಿವರೆಗಿನ ರಸ್ತೆಯನ್ನು ಡಾ. ಸುಧಾಮೂರ್ತಿ ರಸ್ತೆ ಎಂದು ನಾಮಕರಣ ಮಾಡಲಾಗಿದೆ. ಇದು ಸ್ವಾಗತಾರ್ಹ ಸಂಗತಿ. ಈ ರಸ್ತೆ ಆರಂಭದಲ್ಲೇ 'ಹೆಬ್ಬಾಳು ಹೆಬ್ಬಾಗಿಲು' ಆರ್ಚ್ ಮಾಡಲಾಗಿದ್ದು, ಇದೂ ಸುಂದರವಾಗಿದೆ. ಆದರೆ ಕೆಲವು ವರ್ಷದ ಹಿಂದೆಯೇ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯಾಧಿಕಾರಿಗಳು, ಒತ್ತುವರಿ ಆಗಿರುವ ಜಾಗವನ್ನು ತೆರವುಗೊಳಿಸುವಂತೆ ಮೈಸೂರು ನಗರ ಪಾಲಿಕೆ ವಲಯ ಅಧಿಕಾರಿಗಳಿಗೆ ಪತ್ರ ಬರೆದಿದ್ದರು. ಆದರೆ ಈ ಬಗ್ಗೆ ನಗರ ಪಾಲಿಕೆ ಅಧಿಕಾರಿಗಳು ಏನೂ ಕ್ರಮ ಕೈಗೊಳ್ಳಲಿಲ್ಲ. ಹಾಗಾಗಿ ಒಂದು ವೇಳೆ ಒತ್ತುವರಿ ತೆರವು ಮಾಡಿದ್ದರೆ ಹೆಬ್ಬಾಗಿಲು ಹಾಗೂ ರಸ್ತೆ ಇನ್ನೂ ಸುಂದರವಾಗಿ ನಿರ್ಮಾಣಗೊಳ್ಳುತ್ತಿತ್ತು.

–ರಾಮಕೃಷ್ಣ, ಹೆಬ್ಬಾಳು, ಮೈಸೂರು.

ಪೊಲೀಸ್ ಇಲಾಖೆಯಲ್ಲಿ ಆರ್ಡರ್ಲಿ ಪದ್ಧತಿ ಕೊನೆಯಾಗಲಿ

ಮಾನ್ಯರೆ,

ಹಿರಿಯ ಪೊಲೀಸ್ ಅಧಿಕಾರಿಗಳ ನಿವಾಸದಲ್ಲಿ ಪೊಲೀಸರನ್ನು ಜೀತದಾಳುಗಳಂತೆ, ಅಮಾನವೀಯ ರೀತಿಯಲ್ಲಿ ದುಡಿಸಿಕೊಳ್ಳುತ್ತಿರುವ ಆರ್ಡರ್ಲಿ ಪದ್ಧತಿಯನ್ನು ತೆಗೆದು ಹಾಕಬೇಕೆಂದು ವಿಧಾನಪರಿಷತ್ತಿನಲ್ಲಿ ಬಿಜೆಪಿ ಸದಸ್ಯ ಅಯನೂರು ಮಂಜುನಾಥ್ ಆಗ್ರಹಪಡಿಸಿರುವುದು ಸ್ವಾಗತಾರ್ಹವಾಗಿದೆ. ಹಲವಾರು ದಶಕಗಳಿಂದ ಈ ಕೆಟ್ಟ ಪದ್ಧತಿ ಪೊಲೀಸ್ ಇಲಾಖೆಯಲ್ಲಿ ಹಾಸುಹೊಕ್ಕಾಗಿರುವುದು ದುರ್ದೈವದ ಸಂಗತಿಯಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ಕೈಕೆಳಗಿನ ಪೊಲೀಸ್ ಪೇದೆಗಳಿಂದ ಬಟ್ಟೆ ಒಗೆಸುವುದು, ಕಸ ಗುಡಿಸುವುದು, ಚಪ್ಪಲಿ ಹೊಲೆಸಿಕೊಂಡು ಬರುವಂತೆ ಹೇಳುವುದು, ತಮ್ಮ ಮಕ್ಕಳನ್ನು ಶಾಲೆಗೆ ಬಿಟ್ಟು ಬರುವುದು... ಸೇರಿದಂತೆ ಹಲವಾರು ಕಾರ್ಯಗಳಿಗೆ ಹಚ್ಚಲಾಗುತ್ತದೆ ಎಂದು ದೂರಿದೆ. ಅತ್ಯಂತ ಕೆಟ್ಟ ಭಾಷೆ ಬಳಸುತ್ತಾರೆ ಎಂಬ ಮಾತು ಇದೆ. ಇದೊಂದು ಗುಲಾಮಗಿರಿಯಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ, ಸ್ವತಃ ಪೊಲೀಸ್ ಇಲಾಖೆಯಲ್ಲಿಯೇ ಇಂತಹ ವ್ಯವಸ್ಥೆ ಇರುವುದು ದುಃಖದ ಸಂಗತಿಯಾಗಿದೆ. ಜನರ ಹಕ್ಕುಗಳನ್ನು ರಕ್ಷಿಸಬೇಕಾದ ಪೊಲೀಸ್ ಇಲಾಖೆಯಲ್ಲಿಯೇ ಈ ರೀತಿಯ ಅಮಾನವೀಯ ಪದ್ಧತಿ ಇರುವುದು ನಿಜಕ್ಕೂ ತಲೆತಗ್ಗಿಸಬೇಕಾದ ವಿಚಾರ. ಒಳ್ಳೆ ಸಂಬಳ ಮತ್ತು ಭತ್ಯೆಗಳನ್ನು ಪಡೆಯುವ ಹಿರಿಯ ಪೊಲೀಸ್ ಅಧಿಕಾರಿಗಳು ಬೇಕಾದರೆ ತಮ್ಮ ಮನೆ ಕೆಲಸ ಮಾಡಲು ಬೇರೆಯವರನ್ನು ಸಂಬಳ ಕೊಟ್ಟು ಕೆಲಸಕ್ಕೆ ಇಟ್ಟುಕೊಳ್ಳಲಿ. ಮಾನ್ಯ ಮುಖ್ಯಮಂತ್ರಿಗಳು ಈ ಪದ್ಧತಿಯನ್ನು ರದ್ದುಗೊಳಿಸುವ ದಿಟ್ಟ ನಿರ್ಧಾರ ಕೈಗೊಳ್ಳಲಿ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಹೊರೆ

ಮಾನ್ಯರೆ,

ದಿನನಿತ್ಯದ ಅಗತ್ಯ ವಸ್ತುಗಳಾದ ಗ್ಯಾಸ್, ಡೀಸೆಲ್, ಪೆಟ್ರೋಲ್ ಹಾಗೂ ಇನ್ನಿತರ ವಸ್ತುಗಳ ಬೆಲೆ ಒಂದು ತಿಂಗಳಿಂದ ನಿರಂತರವಾಗಿ ಏರಿಕೆ ಆಗುತ್ತಿದೆ. ಏಪ್ರಿಲ್ ತಿಂಗಳಿಂದ ವಿದ್ಯುತ್ ಬೆಲೆಯೂ ಏರಿಕೆ ಆಗಲಿದೆ ಎಂಬ ಮಾತಿದೆ ಈಗಾಗಲೇ ಕೊರೊನಾದಿಂದ ಜನರ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟಿದ್ದು, ಈಗ ತಾನೇ ಚೇತರಿಸಿಕೊಳ್ಳುತ್ತಿದ್ದಾರೆ. ಇಂತಹ ಸಮಯದಲ್ಲಿ ದರ (ಬೆಲೆ) ಏರಿಕೆ ಸರಿಯಾದ ಕ್ರಮವಲ್ಲ. ಇದರಿಂದ ಸಾರ್ವಜನಿಕರ ಅದರಲ್ಲೂ ಜನಸಾಮಾನ್ಯರ ಜೀವನ ನಿರ್ವಹಣೆ ತುಂಬಾ ಕಷ್ಟದಾಯಕವಾಗುತ್ತದೆ. ಕೂಲಿ ಮಾಡುವವರು ಹೇಗೆ ಜೀವನ ಮಾಡುತ್ತಾರೆ. ಈಗಾಗಲೇ ಲಕ್ಷಾಂತರ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದರೂ ಉದ್ಯೋಗವಿಲ್ಲದೆ, ನಿರುದ್ಯೋಗಿಗಳಾಗಿ, ಜಿಗುಪ್ಸೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಿರುದ್ಯೋಗಿ ಯುವಕ–ಯುವತಿಯರು, ವಿದ್ಯಾರ್ಥಿಗಳ ಭವಿಷ್ಯಕ್ಕೆ ಸರ್ಕಾರ ರೂಪುರೇಷೆ ನಿರ್ಧರಿಸುವ ಅಗತ್ಯವಿದೆ. ಇವರ ಬದುಕಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಈಗಾಗಲೇ ಏರಿಕೆಯಾಗಿರುವ ದಿನ ಬಳಕೆ ಪದಾರ್ಥಗಳ ಬೆಲೆಯನ್ನು ಇಳಿಸಲು ಸರ್ಕಾರ ಚಿಂತನೆ ಮಾಡಲಿ.

–ನಾಗೇಶ್ ಕೆ, ಮಾನಸಗಂಗೋತ್ರಿ

'ಪರಮಾರ್ಥ ಪಥ'

ಮಾನ್ಯರೆ,

'ರಾನಡೆಗಳ ಅಭೂತಪೂರ್ವ ಕೊಡುಗೆಗಳು' (ಇತಿಹಾಸದ ಪುಟಗಳು, ಅಂಕಣ ಬರಹ, ಮಾ. 18).

'ಗುರುದೇವ್' ಆರ್.ಡಿ. ರಾನಡೆಯವರು 'ಪಾತ್ ವೇ ಟು ಗಾಡ್ ಇನ್ ಕನ್ನಡ ಲಿಟರೇಚರ್' ಎಂಬ ಪುಸ್ತಕವನ್ನೂ ಬರೆದಿದ್ದಾರೆ. ಅದು 'ಕನ್ನಡದಲ್ಲಿ ಪರಮಾರ್ಥ ಪಥ' ಎಂದು ಅನುವಾದಗೊಂಡಿದೆ. ('ಪರಮಾತ್ಮ ಪಥ' ಎಂದೂ ಆಗಬಹುದು!) ಒಟ್ಟಿನಲ್ಲಿ ಇಬ್ಬರು ರಾನಡೆಯವರೂ ಪಥಪ್ರವರ್ತಕರು, ಅಸಾಮಾನ್ಯರು. (ತಿಲಕರಂತೆ ಕಾಣುತ್ತಾರೆ, ಅಲ್ಲವೆ?)

– ಸಿಪಿಕೆ, ಮೈಸೂರು.

ಹೆಸರಾಂತ ಅರ್ಥಶಾಸ್ತ್ರಜ್ಞೆ ಶ್ರೀಮತಿ ದೇವಕಿ ಜೈನ್ ಸಂದರ್ಶನ

ಮೈಸೂರು ನನ್ನ ಹೃದಯಕ್ಕೆ ಹತ್ತಿರವಾಗಿದೆ...

ಹೆಸರಾಂತ ಮಹಿಳಾ ಅರ್ಥಶಾಸ್ತ್ರಜ್ಞೆ, ಪದ್ಮಭೂಷಣ ದೇವಕಿ ಜೈನ್ ಕಳೆದ ವಾರಾಂತ್ಯ ಮೈಸೂರಿಗೆ ಖಾಸಗಿ ಭೇಟಿ ನೀಡಿದ್ದರು. ಅವರು ಮೈಸೂರು ಸಂಸ್ಥಾನದಲ್ಲಿ ಸಚಿವರಾಗಿದ್ದ ಎಂ.ಎ.ಶ್ರೀನಿವಾಸನ್ ಅವರ ಹೆಮ್ಮೆಯ ಸುಪುತ್ರಿ. ಸಂವಿಧಾನ ರಚನಾ ಸಭೆಯ ಸದಸ್ಯರಾಗಿ (1947–48) ಅವರು ಗ್ವಾಲಿಯರ್ ರಾಜ ಮನೆತನವನ್ನು ಪ್ರತಿನಿಧಿಸಿದ್ದರು. ಶ್ರೀನಿವಾಸನ್‌ರವರು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಕಾಲದಲ್ಲಿ (1918 ರಿಂದ ಆರಂಭ) ಮೈಸೂರು ಸಂಸ್ಥಾನದ ನಾಗರಿಕ ಸೇವೆಯಲ್ಲಿ ಮಹತ್ವಪೂರ್ಣ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಕಮಿಷನರ್ ಆಗಿ ಸಹ ಅವರು ಕಾರ್ಯ ನಿರ್ವಹಿಸಿದ್ದರು.

1933 ರಲ್ಲಿ ಜನ್ಮ ತಾಳಿದ ಶ್ರೀಮತಿ ದೇವಕಿ ಜೈನ್‌ರವರು, ಮೈಸೂರು ಮತ್ತು ಬೆಂಗಳೂರಿನಲ್ಲಿ ತಮ್ಮ ಬಾಲ್ಯದ ದಿನಗಳನ್ನು ಕಳೆದರು. 1953ರಲ್ಲಿ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಿಂದ ಗಣಿತ ಮತ್ತು ಅರ್ಥಶಾಸ್ತ್ರ ವಿಷಯದಲ್ಲಿ ಪದವಿ ಪಡೆದರು.

ಇವರು ಮೈಸೂರು ವಿಶ್ವವಿದ್ಯಾನಿಲಯದಿಂದ ಮೂರು ಚಿನ್ನದ ಪದಕ ಪಡೆದರು. ಮೇಲ್ಕಂಡ ಕಾಲೇಜು ಆಗ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿತ್ತು. ಹೆಸರಾಂತ ತಮಿಳು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಶ್ರೀಮತಿ ದೇವಕಿ ಜೈನ್, ಗಾಂಧಿಮಾರ್ಗದ ಕಾರ್ಯಕರ್ತ ಲಕ್ಷ್ಮೀ ಚಂದ್ ಜೈನ್ ಅವರನ್ನು ವಿವಾಹವಾದರು. ತನ್ಮೂಲಕ ಜಯಪ್ರಕಾಶ್ ನಾರಾಯಣ್, ವಿನೋಬ ಭಾವೆ, ನೆಲ್ಸನ್ ಮಂಡೇಲಾ, ದೇಸ್ಮಂಡ್ ಟುಟು, ಅಮಾರ್ತ್ಯ ಸೇನ್, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ನಾಯಕರು ಮತ್ತು ವಿದ್ವಾಂಸರನ್ನು ಭೇಟಿಯಾಗುವ ಅವಕಾಶವನ್ನು ಅವರು ಪಡೆದರು. ಅರ್ಥಶಾಸ್ತ್ರದ ಹೆಸರಾಂತ ವಿದ್ವಾಂಸರಾದ ಶ್ರೀಮತಿ ದೇವಕಿ ಜೈನ್, ದೇಶದಲ್ಲಿ ಮಹಿಳಾ ಚಳುವಳಿಗೆ ಬೇರುಮಟ್ಟದಿಂದ ಹೊಸ ರೂಪ ನೀಡುವಲ್ಲಿ ವಿಶೇಷವಾದ ಪಾತ್ರ ವಹಿಸಿದ್ದಾರೆ. ಸಮಾಜದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಹೋರಾಡುತ್ತಿರುವ ಸಂಘ ಸಂಸ್ಥೆಗಳ ಜೊತೆ ಒಡನಾಟ ಹೊಂದಿದ್ದು, ಈ ತಾರತಮ್ಯವನ್ನು ಹೋಗಲಾಡಿಸಲು ಅವರು ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ.

ಅವರ ಕೊಡುಗೆಗಳನ್ನು ಪರಿಗಣಿಸಿ ಅವರಿಗೆ 2006ರಲ್ಲಿ ದೇಶದ ಪ್ರತಿಷ್ಠಿತ ನಾಗರಿಕ ಪ್ರಶಸ್ತಿಯಾದ 'ಪದ್ಮ ಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಎನ್‌ಡಿಟಿವಿ ಖ್ಯಾತಿಯ ಶ್ರೀನಿವಾಸನ್ ಜೈನ್ ಅವರ ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬರು. ಶ್ರೀಮತಿ ದೇವಕಿ ಜೈನ್ ಅವರು ಶ್ರೀನಿವಾಸನ್ ಜೈನ್ ಅವರೊಂದಿಗೆ ಮೈಸೂರಿಗೆ ಬಂದಿದ್ದಾರೆ. ಮೈಸೂರಿನ ಮೆಟ್ರೋಪೋಲ್ ಹೋಟೆಲಿನಲ್ಲಿ ತಂಗಿದ್ದ ಅವರು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಸದಸ್ಯರೊಂದಿಗೆ ತಮ್ಮ ಅನುಭವ; ಅನಿಸಿಕೆಗಳನ್ನು ಹಂಚಿಕೊಂಡರು. ದೇವಕಿ ಜೈನ್‌ರವರು 'ಮೈಸೂರು ಮಿತ್ರ' ಪ್ರತಿನಿಧಿಯೊಡನೆ, ಮೈಸೂರಿನ ಬಗ್ಗೆ ತಮಗಿರುವ ಒಲವನ್ನು ಹಂಚಿಕೊಂಡು, ತಮ್ಮ ಆತ್ಮಕಥೆ "The Brass Notebook" ನೆನಪಿಗೆ ತಂದುಕೊಂಡರು. ಈ ಕೃತಿಯು, ಮರಾಠಿ, ಹಿಂದಿ, ತಮಿಳು, ಮಲಯಾಳಂ ಭಾಷೆಗಳಲ್ಲದೆ ಕನ್ನಡ ಭಾಷೆಗೂ ಅನುವಾದಗೊಂಡಿದೆ. ದೇವಕಿ ಜೈನ್ ಅವರ ಸಂದರ್ಶನದ ಆಯ್ದ ಭಾಗ ನಮ್ಮ ಓದುಗರಿಗೆ.....

ಬಿ.ಸಿ. ತಿಮ್ಮಯ್ಯ

ಮೈಸೂರು ಮಿತ್ರ: ನಿಮ್ಮ ಮೈಸೂರು ಭೇಟಿಯ ಉದ್ದೇಶವೇನು?

ದೇವಕಿ ಜೈನ್ : ನಮ್ಮ ಕುಟುಂಬದ ಮೂಲವಾದ ತಿರುನಾರಾಯಣಪುರಂಗೆ (ಮೇಲುಕೋಟೆ) ನಾವು ಹೊರಟಿದ್ದೆವು. ನಮ್ಮ ಮುತ್ತಾತನವರು ಇದೇ ಊರಿನವರು. ನನ್ನ ಸಹೋದರ ಎಂ.ಎಸ್.ರಾಜನ್‌ರವರು ಇಲ್ಲಿ ಸಂಸ್ಕೃತ ಅಕಾಡೆಮಿ ಮತ್ತು ಲೈಬ್ರರಿ ಸ್ಥಾಪಿಸಿದ್ದಾರೆ. ಅವರ ಕೊಡುಗೆಗಳನ್ನು ನೋಡಬೇಕೆನಿಸಿತು. ಮೇಲುಕೋಟೆ, ನಮ್ಮ ಮನೆ ಹಾಗೂ ಯತಿವರ್ಯರಾದ ರಾಮಾನುಜಾಚಾರ್ಯ ಇತ್ಯಾದಿಗಳ ಬಗ್ಗೆ ನಮಗೆ ಭಾವನಾತ್ಮಕವಾದ ಸಂಬಂಧವಿದೆ. ನನ್ನ ತಾಯಿಯವರ ಅಜ್ಜ ಇಲ್ಲಿಯೇ ಉದ್ಯೋಗದಲ್ಲಿದ್ದರು.

ಮಿತ್ರ: ನಿಮ್ಮ ತಂದೆಯವರು ಮೈಸೂರಿನಲ್ಲಿ ದೋಬಿ ಘಾಟ್ ಮತ್ತು ಅಗ್ರಹಾರಗಳ (ಕಡಿಮೆ ವೆಚ್ಚದ ಮನೆಗಳು) ಪರಿಕಲ್ಪನೆ ಹೊಂದಿದ್ದರು.

ದೇವಕಿ ಜೈನ್: ಅವರ ಮಗಳೆನಿಸಿಕೊಳ್ಳಲು ನನಗೆ ಹೆಮ್ಮೆಯೆನಿಸುತ್ತದೆ. ವಾಸ್ತವವಾಗಿ, ನವದೆಹಲಿಯ ಪ್ರಕಾಶಕರೊಬ್ಬರು, ನಮ್ಮ ತಂದೆಯವರ ಆತ್ಮಕಥೆ "Of the Raj, Maharaja's and Me" ಎಂಬುದನ್ನು ಪುನಃ ಮುದ್ರಿಸುತ್ತಿದ್ದಾರೆ. ಇದರ ಕನ್ನಡ ಅನುವಾದಕ್ಕೆ ನಾನು ಧನ ಸಹಾಯ ಮಾಡಬೇಕೆಂದಿದ್ದೇನೆ. ಏಕೆಂದರೆ ಕನ್ನಡಿಗರು ಇದನ್ನು ಓದಬೇಕೆಂಬುದು ನನ್ನ ಅಪೇಕ್ಷೆಯಾಗಿದೆ.

ಮಿತ್ರ ಮೈಸೂರಿನಲ್ಲಿ ನಿಮ್ಮ ಸ್ಮರಣೀಯ ಸಂಗತಿಗಳಾವುವು?

ದೇವಕಿ ಜೈನ್: ನಾನು ಇದನ್ನು ನನ್ನ ಆತ್ಮಕಥೆಯಲ್ಲಿ ಬರೆದಿದ್ದೇನೆ. ಇಲ್ಲಿ ನಾನು, ನಮ್ಮ ತಂದೆಯವರು ಮೈಸೂರು ನಗರಸಭೆಯ ಅಧ್ಯಕ್ಷರಾಗಿದ್ದನ್ನು ಸ್ಮರಿಸಿದ್ದೇನೆ. ಮೈಸೂರಿನ ಅರಮನೆಗೆ ಸಾಗುವ ದಾರಿಯಲ್ಲಿ ಸಿಗುವ ಕಮಾನಿನ ಅಂಚಿನಲ್ಲಿದ್ದ "ಬಾಂಬೆ ಹೌಸ್" ಎಂಬ ಮನೆಯಲ್ಲಿ ನಾವಿದ್ದೆವು. ನನಗೆ ಜ್ಞಾಪಕ ಇರುವ ಹಾಗೆ ನಮ್ಮ ತಂದೆಯವರು ಪರಿ ವೀಕ್ಷಣೆಗಾಗಿ ಬೆಳಗಿನ ವೇಳೆ ಕುದುರೆಯ ಮೇಲೆ ಸಂಚರಿಸುತ್ತಿದ್ದರು. ಕುದುರೆ ಸವಾರಿಯಿಂದ ಬಂದ ಮೇಲೆ ನನಗೆ ಕಾಣಿಕೆ ರೂಪದ ಆತಿಥ್ಯ ಅನ್ನುವ ರೀತಿಯಲ್ಲಿ ನನ್ನನ್ನು ತಂದೆಯವರು ಕುದುರೆಯ ಮೇಲೆ ಕೂರಿಸಿ ಕೊಂಡು ಉದ್ಯಾನವನದವರೆಗೆ ಸವಾರಿ ಮಾಡಿಸುತ್ತಿದ್ದರು ಅಲ್ಲಿ ನಾನು ಇಳಿಯುತ್ತಿದ್ದೆ ಅಲ್ಲಿಂದ ಮುಂದೆ ಅಪ್ಪ ಕುದುರೆ ಸವಾರಿ ಮುಂದುವರೆಸುತ್ತಿದ್ದರು.

ನನಗೆ, ಕುದುರೆ ಮತ್ತು ಅರಮನೆ ವಿಶೇಷವೆನಿಸಿದ್ದವು. ಏಕೆಂದರೆ, ಪ್ರತಿಯೊಂದು ಕಾರ್ಯಕ್ರಮಕ್ಕೂ ನಾವು ಅರಮನೆಗೆ ಹೋಗುತ್ತಿದ್ದೆವು. ಈಗ ನಾವು ಅರಮನೆಗೆ ಹೋಗಿ, ಅದನ್ನು ಹೊರಗಡೆಯಿಂದ ನೋಡಿದೆವು. ದಸರಾ ಹಬ್ಬದ ಸಂದರ್ಭದಲ್ಲಿ ನಮ್ಮ ತಾಯಿಯವರು ಸಿಂಗರಿಸಿಕೊಳ್ಳುತ್ತಿದ್ದದ್ದನ್ನು ನಾನು ಜ್ಞಾಪಕಕ್ಕೆ ತಂದುಕೊಳ್ಳುತ್ತೇನೆ. ನನ್ನ ಜ್ಞಾಪಕಕ್ಕೆ ಬರುವ ಬೇರೆ ವಿಷಯಗಳೆಂದರೆ ಶಾಲೆಗೆ ನಾವು ಟಾಂಗಾದಲ್ಲಿ (ಕುದುರೆಗಾಡಿ) ಹೋಗುತ್ತಿದ್ದೆವು. ಇವೆಲ್ಲವೂ ತುಂಬಾ ಸಂತೋಷದಾಯಕವಾದ ಸಂಗತಿಗಳಾಗಿವೆ. ಕಳೆದ ವಾರಾಂತ್ಯದಲ್ಲಿ ನಾನು ದೇವರಾಜ ಮಾರುಕಟ್ಟೆಗೆ ಹೋಗಿದ್ದೆ. ಅದು ನಾನು ಮಗುವಾಗಿದ್ದಾಗ ಹೇಗೆ ಇತ್ತೋ ಈಗಲೂ ಸಹ ಹಾಗೆಯೇ ಇದೆ. ಇಲ್ಲಿ ನಮ್ಮ ತಾಯಿಯವರು ತರಕಾರಿಗಳನ್ನು ಕೊಂಡುಕೊಳ್ಳುತ್ತಿದ್ದರು.



ಅರ್ಥಶಾಸ್ತ್ರಜ್ಞೆ ಹಾಗೂ ಲೇಖಕಿ ಪದ್ಮಭೂಷಣ ದೇವಕಿ ಜೈನ್ ಅವರನ್ನು ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಸದಸ್ಯರು ಅಭಿನಂದಿಸಿದರು. ಈ ವೇಳೆ ಟ್ರಸ್ಟ್ ಸದಸ್ಯೆ ಕಿಟ್ಟಿ ಮಂದಣ್ಣ (ಎಡ ತುದಿ), ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್‌ನ ಅಧ್ಯಕ್ಷೆ ಶ್ರೀಮತಿ ಶುಭಾ ಸಂಜಯ್ ಅರಸ್, ಟ್ರಸ್ಟ್‌ನ ಕಾರ್ಯದರ್ಶಿ ಥಂಕಮ್ ಪಣಕಲ್ ಮತ್ತು ಬುಕ್ ಕ್ಲಬ್‌ನ ಸದಸ್ಯೆ ಶ್ರೀಮತಿ ಮೀನಾ ಜೋಷಿ ಉಪಸ್ಥಿತರಿದ್ದಾರೆ.

ಮಿತ್ರ ನಿಮ್ಮ ತಂದೆಯವರ ವ್ಯಕ್ತಿತ್ವದ ಬಗ್ಗೆ ಸ್ವಲ್ಪ ಹೇಳ್ತೀರಾ?

ದೇವಕಿ ಜೈನ್: ನಮ್ಮ ತಂದೆಯವರು ಅಸಾಧಾರಣ ಬುದ್ಧಿವಂತರು. ನಾವು ಅತೀ ಬುದ್ಧಿವಂತರಾಗಿದ್ದಂತಹ ಗಣಿತಜ್ಞ ರಾಮಾನುಜ ಅವರ ಬಗ್ಗೆ ಮಾತನಾಡುತ್ತೇವೆ. ಅಂತಹವರಲ್ಲಿ ಸಾಧಾರಣ ಜನರಿಗಿಂತ ಮತ್ಯಾವುದೋ ಒಂದು ವಿಶೇಷತೆ ಇರುತ್ತದೆ. ಅವರು ಕೇವಲ ಆಡಳಿತಗಾರ ಮಾತ್ರವಾಗಿರಲಿಲ್ಲ ಮೈಸೂರಿಗೆ ಹತ್ತಿರದಲ್ಲಿದ್ದ "ಗೇಮ್ ಸ್ಯಾಂಚ್ಯುರಿ"ಯನ್ನು ಅವರು ಪುನಶ್ಚೇತನಗೊಳಿಸಿದರು. ಅವರು ಬಹುಮುಖ ವ್ಯಕ್ತಿತ್ವದ ಪ್ರತಿಭೆಯಾಗಿದ್ದರು ಹಾಗೂ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿದ್ದರು. ಅವರ ಹೃದಯವು ಕಾರ್ಮಿಕರಿಗಾಗಿ ಮಿಡಿಯುತ್ತಿತ್ತು ಕಾರ್ಯಾರ್ಥವಾಗಿ ಎಲ್ಲೇ ಹೋದರೂ, ಕೆಲಸಗಾರರಿಗಾಗಿ ಅವರು ಏನಾದರೂ ಮಾಡುತ್ತಿದ್ದರು. ಅವರ ಪ್ರತಿಯೊಂದು ಹೆಜ್ಜೆಯೂ ಕ್ರಿಯಾಶೀಲತೆಯಿಂದ ಕೂಡಿತ್ತು. ಅಭಿವೃದ್ಧಿಯ ವಿಚಾರಕ್ಕೆ ಬಂದಾಗ ಅವರು ಯಾವಾಗಲೂ ಸೃಜನಶೀಲತೆಯಿಂದ ಯೋಚಿಸುತ್ತಿದ್ದರು.

ಹಲವಾರು ವರ್ಷಗಳ ಹಿಂದೆ ಯುವರಾಜರಿಗಾಗಿ ಖ್ಯಾತ ಸಂಗೀತ ವಿದುಷಿ ಎಂ.ಎಸ್.ಸುಬ್ಬಲಕ್ಷ್ಮಿ ಮೈಸೂರು ಅರಮನೆಗೆ ಬಂದಿದ್ದರು. ಮೈಸೂರಿನ ನಗರ ಸಭೆಯ ಅಧ್ಯಕ್ಷರಾಗಿದ್ದ ನಮ್ಮ ತಂದೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಮ್ಮ ತಂದೆಯವರು, ಸುಬ್ಬಲಕ್ಷ್ಮಿಯವರನ್ನು ತಮ್ಮ ತಾಯಿಯವರನ್ನು ಭೇಟಿ ಮಾಡಲು ಮನೆಗೆ ಆಹ್ವಾನಿಸಿದರು ಹಾಗೂ ಸುಬ್ಬಲಕ್ಷ್ಮಿಯವರು ನಮ್ಮ ತಾಯಿಗಾಗಿ ಹಾಡಿದರು.

ಆಗ ಸುಬ್ಬಲಕ್ಷ್ಮಿಯವರಿಗೆ 19 ಇಲ್ಲಾ 20 ವರ್ಷ ಇರಬಹುದು. ಇದಾದ ನಂತರ ಸುಬ್ಬಲಕ್ಷ್ಮಿಯವರು ನಮ್ಮ ಕುಟುಂಬದ ಒಳ್ಳೆಯ ಸ್ನೇಹಿತರಾದರು ಹಾಗೂ ನಮ್ಮ ತಂದೆಯವರಿಗೆ 100 ವರ್ಷ ತುಂಬಿದಾಗ ಸುಬ್ಬಲಕ್ಷ್ಮಿಯವರು ನಮ್ಮ ತಂದೆಯವರನ್ನು ಭೇಟಿ ಮಾಡಿದ್ದರು. ನಾನು ಅವರ ಸ್ನೇಹಿತೆಯಾಗಿಬಿಟ್ಟೆ. ನಾನು ಅವರ ಜೊತೆ ಇರಲು ಚೆನ್ನೈಗೆ ಹೋಗಿ ಬರುತ್ತಿದ್ದೆ ನಮ್ಮ ತಂದೆಯವರು ಸಂಗೀತ ಮತ್ತು ನೃತ್ಯವನ್ನು ತುಂಬಾ ಇಷ್ಟಪಡುತ್ತಿದ್ದರು. ಅವರು ಓರ್ವ ರಸಿಕ ಹಾಗೂ ಬಹುಮುಖ ವ್ಯಕ್ತಿತ್ವವುಳ್ಳವರಾಗಿದ್ದರು.

ಮಿತ್ರ: ನೀವು ಮೈಸೂರಿಗೆ ಎಷ್ಟು ಬಾರಿಗೊಮ್ಮೆ ಭೇಟಿ ನೀಡುತ್ತೀರಿ?

ದೇವಕಿ ಜೈನ್: ಮೈಸೂರಿಗೆ ಭೇಟಿ ನೀಡುವುದು ನನಗೆ ಬಹಳ ಇಷ್ಟ ಆದರೆ ಹೆಚ್ಚು ಬಾರಿ ಭೇಟಿ ನೀಡಲು ಸಾಧ್ಯವಾಗಿಲ್ಲ. ಕಡೆಯ ಬಾರಿ ಭೇಟಿ ನೀಡಿ 10 ವರ್ಷವಾಯಿತು. ಮೈಸೂರು ಎಂದರೆ ನನಗೆ ತುಂಬಾ ಇಷ್ಟ ಹೆಚ್ಚು ಬಾರಿ ಭೇಟಿ ನೀಡದಿದ್ದರೂ ಮೈಸೂರು ನನ್ನ ಹೃದಯಕ್ಕೆ ಹತ್ತಿರವಾಗಿದೆ. ನನ್ನ ಪುಸ್ತಕ "The Brass Note book" ಕನ್ನಡ ಭಾಷೆಗೆ ಅನುವಾದಗೊಂಡಿದ್ದು, ಅದರ ಹೆಸರು "ಹಿತ್ತಾಳೆ ಬಣ್ಣದ ಪುಸ್ತಕ" ಎಂಬುದಾಗಿದೆ. ದೇವಕಿ ಜೈನ್ ಬದುಕಿನ ಪುಟಗಳು; ಈ ಪುಸ್ತಕವು ಕೋಡಿಬೆಟ್ಟು ರಾಜಲಕ್ಷ್ಮಿ ಅವರಿಂದ ಅನುವಾದಗೊಂಡಿದೆ. ಅನುವಾದಕ್ಕೆ ಸಿಗುತ್ತಿರುವ ಪ್ರತಿಕ್ರಿಯೆ ಬಹಳ ಚೆನ್ನಾಗಿದೆ ಎಂದು ತಿಳಿಸಿದರು.

ಮೈಸೂರು ಪುಸ್ತಕ ಕ್ಲಬ್ಬುಗಳ ಜೊತೆ ಸಂವಾದ



ಮೈಸೂರು ಪುಸ್ತಕ ಕ್ಲಬ್ಬುಗಳು, ದೇಶದ ಪ್ರಖ್ಯಾತ ಸ್ವತಂತ್ರ ಪ್ರಕಾಶನ ಸಂಸ್ಥೆಯಾದ "ಸ್ಪೀಕಿಂಗ್ ಟೈಗರ್ ಬುಕ್ಸ್" ಸಹಯೋಗದೊಂದಿಗೆ ಶ್ರೀಮತಿ ದೇವಕಿ ಜೈನ್ ಅವರ ಪುಸ್ತಕವಾದ 'The Brass Note' ಬಗ್ಗೆ ಆನ್‌ಲೈನ್ ಸಂವಾದ ಕಾರ್ಯಕ್ರಮ ಶ್ರೀಮತಿ ದೇವಕಿ ಜೈನ್ ತಂಗಿದ್ದ ನಗರದ ಮೆಟ್ರೋಪೋಲ್ ಹೋಟೆಲ್‌ನಲ್ಲಿ ಏರ್ಪಡಿಸಲಾಗಿತ್ತು. ಇಲ್ಲಿ ಶ್ರೀಮತಿ ದೇವಕಿ ಜೈನ್‌ರವರು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟಿನ ಹಿತಾಸಕ್ತರ ಜೊತೆ ಮಾತುಕತೆ ನಡೆಸಿದರು. ಈ ಸಂವಾದದಲ್ಲಿ ಅವರು ತಮ್ಮ ಅನುಭವ, ಹಾಗೂ ಪುಸ್ತಕದ ಬಗ್ಗೆ ಸ್ವಾರಸ್ಯಕರವಾಗಿ ಮಾತನಾಡಿದರು.

ನನ್ನ ಮಗ ಸ್ವಸಾಮರ್ಥ್ಯದಿಂದ ಪತ್ರಕರ್ತನಾದ

ದೇವಕಿ ಜೈನ್ ಅವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಅವರ ಹಿರಿಯ ಮಗ ಗೋಪಾಲ್ ಜೈನ್‌ರವರು ಸುಪ್ರೀಂಕೋರ್ಟಿನಲ್ಲಿ ಹಿರಿಯ ವಕೀಲರಾಗಿದ್ದಾರೆ. ಕಿರಿಯ ಮಗ ಶ್ರೀನಿವಾಸನ್ ಜೈನ್, ಎನ್‌ಡಿಟಿವಿ ಸಮೂಹ ಸಂಪಾದಕರಾಗಿದ್ದಾರೆ. ಅವರು ಅದೆಷ್ಟೋ ಸತ್ಯ ಸಂಗತಿ ಒಳಗೊಂಡ ವರದಿಗಳನ್ನು ನಿರೂಪಿಸಿದ್ದಾರೆ. ಅದೇ ರೀತಿ ತನಿಖಾ ಪ್ರದರ್ಶನಗಳನ್ನು ನೀಡಿದ್ದಾರೆ. ತಮ್ಮ ಪುತ್ರ ಶ್ರೀನಿವಾಸನ್ ಜೈನ್, ಸುಪ್ರಸಿದ್ಧ ಟಿವಿ ನಿರೂಪಕರಾಗಿರುವುದರ ಬಗ್ಗೆ ಕೇಳಿದಾಗ, ದೇವಕಿ ಜೈನ್ ಹೇಳುತ್ತಾರೆ "ಇವೆಲ್ಲಾ ನಾವು ವ್ಯವಸ್ಥೆ ಮಾಡಿದ್ದಲ್ಲ. ವಾಸು (ಶ್ರೀನಿವಾಸನ್ ಜೈನ್) ಸ್ವಯಂ ತಾನೇ ಪತ್ರಕರ್ತನಾಗಿ ಬೆಳೆದ. ಅವರ ತಂದೆಯ ಹಾಗೆ ಅವನೂ ಕೂಡ ಸಂಕೋಚ ಸ್ವಭಾವದವನು. ಅವನೆಂದಿಗೂ ಪ್ರದರ್ಶನದ ಗೊಂಬೆಯಾಗುವುದಿಲ್ಲ. ಇದೇ ನಮಗೆ ಅತ್ಯಂತ ಮುಖ್ಯವಾಗಿ ಬೇಕಾಗಿರುವುದು. ವಾಸು ತುಂಬಾ ಆದರದ ಮತ್ತು ಸ್ನೇಹಜೀವಿಯಾಗಿದ್ದಾನೆ. ಇದು ನನಗೆ ತುಂಬಾ ಸಂತೋಷ ನೀಡುತ್ತದೆ. ಟಿವಿ ಕಾರ್ಯಕ್ರಮಗಳಲ್ಲಿ ಅವನು ಸಂಪಾದಿಸಿರುವ ಕೌಶಲ್ಯತೆ ಅವನಿಗೆ ರಕ್ತಗತವಾಗಿ ಬಂದಿದೆ. ಕೆಲವೊಂದು ಬಾರಿ ಕೆಲವು ವೈಶಿಷ್ಟ್ಯತೆಗಳು ವಂಶವಾಹಿನಿಯಿಂದ ಬಂದಿರುತ್ತದೆ. ಕೆಲವು ವೇಳೆ ನಡತೆಗಳನ್ನು ಗಮನಿಸುವ ಮೂಲಕ ಇಂತಹ ಕೌಶಲ್ಯಗಳನ್ನು ಪಡೆಯಬಹುದು.



ಶ್ರೀನಿವಾಸನ್ ಜೈನ್

ವಾಸುರವರ ತಂದೆಯ ಅಜ್ಜ ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ದೆಹಲಿಯ ಅತ್ಯಂತ ಜನಪ್ರಿಯ ಪತ್ರಿಕೆಯ ಸಂಪಾದಕರಾಗಿದ್ದರು. ಈ ಪತ್ರಿಕೆಯ ಹೆಸರು "ಅರ್ಜುನ್". ಅವರೊಬ್ಬ ಹೆಸರಾಂತ ಸಂಪಾದಕ ಮತ್ತು ಬರಹಗಾರರಾಗಿದ್ದರು. ವಾಸ್ತವವಾಗಿ, ವಾಸು ಕುಟುಂಬದ ಎರಡು ಕಡೆಯವರೂ ಅಂದರೆ ನಮ್ಮ ತಂದೆಯ ತಂದೆ ಹಾಗೂ ವಾಸುರವರ ತಂದೆಯ ತಂದೆ ಇವರು ಬರವಣಿಗೆಯಲ್ಲಿ ಹಾಗೂ ಪ್ರಕಾಶನ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ನನಗನ್ನಿಸುವ ಹಾಗೆ ಇದೊಂದು ವಂಶವಾಹಿನಿಯ ಮೂಲಕ ಬಂದಿರುವ ಉಡುಗೊರೆಯಾಗಿದೆ.

ಶ್ರೀನಿವಾಸನ್ ಜೈನ್ ಅವರನ್ನು ಯಾವ ರೀತಿ ಬೆಳೆಸಲಾಯಿತು ಎಂಬುದರ ಬಗ್ಗೆ ಕೇಳಿದರೆ, ದೇವಕಿ ಜೈನ್ ಹೇಳುತ್ತಾರೆ, "ಸುದೈವವಶಾತ್, ಅವನು ಬೆಳೆಯುತ್ತಿರುವ ಸಂದರ್ಭದಲ್ಲಿ, ನಮ್ಮಲ್ಲಿ ಹಣ ಇರಲಿಲ್ಲ. ಆದ್ದರಿಂದ ಅವನು ದುಂದುವೆಚ್ಚದ ಜೀವನ ಶೈಲಿಗೆ ಮಾರುಹೋಗಲಿಲ್ಲ. ಶಾಲೆಯ ಯೂನಿಫಾರಂ ಅನ್ನು ಇನ್ನಿತರರಿಂದ ಪಡೆದುಕೊಳ್ಳುವಂತಹ ಪರಿಸ್ಥಿತಿಯಿಂದ ಬೆಳೆದು ಬಂದ. ಆದ್ದರಿಂದ ನನ್ನ ಮಕ್ಕಳು ಕೆಲವೊಮ್ಮೆ ಸೌಕರ್ಯ, ಸೌಲಭ್ಯಗಳ ಹೊರತಾಗಿರುವುದು ಹೇಗೆ ಎಂಬುದನ್ನು ಮೈಗೂಡಿಸಿಕೊಂಡರು. ಇದೇ ವಾಸುವಿನ ವಿಶ್ವಾಸಾರ್ಹತೆಗೆ ನೀಡಿದ ಕೊಡುಗೆಯಾಗಿದೆ. ಆದ್ದರಿಂದ ಆತನಿಗೆ ಶ್ರೀಮಂತರ ಹುಡುಗ ಎಂಬ ಭಾವನೆ ಬರಲಿಲ್ಲ. ಜನರು ಈಗ ಅವನನ್ನು ಹೊಗಳುವುದನ್ನು ಕಂಡು ನನಗೆ ತುಂಬಾ ಸಂತೋಷವಾಗುತ್ತದೆ. ತನ್ನ ಕೆಲಸದಲ್ಲಿ ಆತ ಯಾವಾಗಲೂ ಪ್ರಾಮಾಣಿಕನಾಗಿರುತ್ತಾನೆ.

ಎಂ.ಎ.ಶ್ರೀನಿವಾಸನ್: ಕಡಿಮೆ ಬೆಲೆ ಮನೆ ರೂವಾರಿ

ದೇವಕಿ ಜೈನ್‌ರವರ ತಂದೆಯಾದ ಮಂಡ್ಯಮ್ ಎ.ಶ್ರೀನಿವಾಸನ್ ಮೈಸೂರು ರಾಜ ಸಂಸ್ಥಾನದಲ್ಲಿ ಮೈಸೂರು ನಗರಸಭೆಯ ಅಧ್ಯಕ್ಷ ಸ್ಥಾನ, ಮೈಸೂರು ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (ಆಗಿನ ಸಿಐಟಿಬಿ ಹಾಗೂ ಈಗಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ –(ಮುಡಾ)) ಸೇರಿದಂತೆ ಹಲವಾರು ಪ್ರಮುಖ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು.

ಹಾಳು ಹಂಪಿಯಲ್ಲಿ ಭೋಜನ ಶಾಲೆ ನಿರ್ಮಿಸಿದ ಮಾದರಿಯಲ್ಲಿ, ಮೈಸೂರಿನಲ್ಲಿ ದೋಬಿ ಘಾಟ್ ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದರು. ಹಳೆಯ ಕಾಲದ ಅಗ್ರಹಾರಗಳಿಂದ ಸ್ಫೂರ್ತಿ ಪಡೆದು ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಾಣ ಮಾಡಿದರು. ಇದೊಂದು ವಿಸ್ತೃತ ಹಾಗೂ ಮಾದರಿಯಾದ ಗೃಹ ಯೋಜನೆಯಾಗಿ ಮೈಸೂರಿನಲ್ಲಿ ಜಾರಿಗೆ ಬಂತು. ಇನ್ನೂ ಹಲವಾರು ಪ್ರಮುಖ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಎಂ.ಎ.ಶ್ರೀನಿವಾಸನ್‌ರವರು ಬಡಜನರಿಗಾಗಿ ಕಡಿಮೆ ವೆಚ್ಚದ ಮಾದರಿ ಮನೆಗಳನ್ನು ನಿರ್ಮಾಣ ಮಾಡಿದರು. ಈ ಮನೆಗಳನ್ನು ಚತುರ್ಭುಜ ರಸ್ತೆ ಸಂಧಿಸುವ ಕರೋಹಟ್ಟಿ (ಈಗಿನ ರಾಮಾನುಜ ರಸ್ತೆ)ಯಲ್ಲಿ 1931ರಲ್ಲಿ ನಿರ್ಮಿಸಿದರು. ಈ ಮನೆಯನ್ನು ಕಡಿಮೆ ಬಾಡಿಗೆ ದರದಲ್ಲಿ ನೀಡುವ ಮೂಲಕ ಮಂಜೂರುದಾರರು, 20 ವರ್ಷಗಳ ನಂತರ ತಾವೇ ಮಾಲೀಕರಾಗುವ ಅವಕಾಶ ನೀಡಲಾಯಿತು. ಈ ಬಡಾವಣೆಯನ್ನು 1938ರಲ್ಲಿ ಯುವರಾಜ ಕಂಠೀರವ ನರಸರಾಜ ಒಡೆಯರ್ ಅವರು ಉದ್ಘಾಟಿಸಿದರು. ಎಂ.ಎ.ಶ್ರೀನಿವಾಸನ್‌ರವರ ಸೇವಾ ಕಾರ್ಯಗಳನ್ನು ಗುರುತಿಸಿ ಈ ಬಡಾವಣೆಗೆ ಶ್ರೀನಿವಾಸನ್ ಅಗ್ರಹಾರ ಎಂದು ಹೆಸರಿಡಲಾಯಿತು.





ಎಂ.ಎ.ಶ್ರೀನಿವಾಸನ್, ಸರ್ ಮಿರ್ಜಾ ಇಸ್ಮಾಯಿಲ್ ಅವರೊಂದಿಗೆ ಕುದುರೆ ಸವಾರಿ



ಮೈಸೂರಿಗೆ ಇತ್ತೀಚೆಗೆ ಭೇಟಿ ನೀಡಿದ್ದ ಹೆಸರಾಂತ ಅರ್ಥಶಾಸ್ತ್ರಜ್ಞೆ, ದೇವಕಿ ಜೈನ್ ಅವರು ತಮ್ಮ ತಂದೆ ಎಂ.ಎ.ಶ್ರೀನಿವಾಸನ್ ಅವರ ಹೆಸರನ್ನು ನಾಮಕರಣ ಮಾಡಿರುವ ಮೈಸೂರಿನ ಚಾಮುಂಡಿಪುರಂನ 'ಎಂ.ಎ.ಶ್ರೀನಿವಾಸನ್ ಸರ್ಕಲ್'ಗೆ ಪುತ್ರ, ಎನ್‌ಡಿ ಟಿವಿ ಆ್ಯಂಕರ್ ಶ್ರೀನಿವಾಸನ್ ಜೈನ್ ಅವರೊಂದಿಗೆ ಭೇಟಿ ನೀಡಿ ಕೆಲವು ಅವಿಸ್ಮರಣೀಯ ಕ್ಷಣಗಳನ್ನು ಸಂತಸದಿಂದ ಕಳೆದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಸುಂದರ ಪ್ರಕೃತಿಯ ಮಡಿಲಲ್ಲಿರುವ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಶ್ರೀ ವೇಣುಗೋಪಾಲ ಸ್ವಾಮಿಯ ಬ್ರಹ್ಮ ರಥೋತ್ಸವ ಮಾ. 28ರಂದು ಜರುಗಲಿದ್ದು, ಈ ಜಾತ್ರೆಯ ತನ್ನಿಮಿತ್ತ ಕ್ಷೇತ್ರದ ಪರಿಚಯವಿದು.

ಪವಿತ್ರ ಶ್ರೀಕ್ಷೇತ್ರ
ಹಿಮವದ್ ಗೋಪಾಲಸ್ವಾಮಿ ಬೆಟ್ಟ

ಸೋಮಶೇಖರ್, ಗುಂಡ್ಲುಪೇಟೆ ಮೊ: 9845995426


ಕರುನಾಡಿನ ಪುರಾಣ ಪ್ರಸಿದ್ಧ ಧಾರ್ಮಿಕ ಮತ್ತು ಪ್ರವಾಸಿ ಕ್ಷೇತ್ರ ಹಿಮವದ್ ಗೋಪಾಲಸ್ವಾಮಿ ದೇವಾಲಯ ರಥೋತ್ಸವಕ್ಕೆ ಸಜ್ಜುಗೊಂಡಿದೆ. ಪ್ರತಿ ವರ್ಷದಂತೆ ಯುಗಾದಿ ವಾರ ಬಾಕಿ ಇರುವಂತೆ ಅಂದರೆ ಮಾ. 28ರಂದು ದೇವಾಲಯದಲ್ಲಿ ಜಾತ್ರೆ ನಡೆಯಲಿದ್ದು, ಈಗಾಗಲೇ ದೇವಾಲಯದ ಸುತ್ತಲಿನ ಆವರಣ(ರಥ ಸಾಗುವ ಸ್ಥಳ)ವನ್ನು ಸ್ವಚ್ಛಗೊಳಿಸಲಾಗಿದೆ. ದೇವಾಲಯಕ್ಕೆ ಕೆಂಪು, ಬಿಳಿ ಬಣ್ಣ, ದೇವಾಲಯದ ರಾಜಗೋಪುರ ಮತ್ತು ಪ್ರವೇಶದ್ವಾರ ಇತರೆ ಗೋಪುರಗಳಿಗೆ ಬಂಗಾರದ ಬಣ್ಣ ಬಳಿದು ಶೃಂಗರಿಸಲಾಗಿದೆ. ವಿವಿಧ ನವೀಕರಣ ಕಾಮಗಾರಿಗಳನ್ನು ಕೈಗೊಂಡಿದ್ದು, ದೇವಾಲಯ ಅಗತ್ಯ ಸೌಲಭ್ಯಗಳೊಂದಿಗೆ ಕಂಗೊಳಿಸುತ್ತಿದೆ.

ಮಾ.25ರಿಂದಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ಜರುಗುತ್ತಿದ್ದು, ಮಾ.31ರವರೆಗೆ ಬೆಟ್ಟದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿದೆ. ಮಾ.28ರಂದು ಬೆಳಗ್ಗೆ 11.30ರ ನಂತರ ಬ್ರಹ್ಮ ರಥೋತ್ಸವ ಜರುಗಲಿದೆ ಎಂದು ಪ್ರಧಾನ ಅರ್ಚಕ ಗೋಪಾಲಕೃಷ್ಣಭಟ್ (ಗೋಪಿ) ಮಾಹಿತಿ ನೀಡಿದರು. ಜಾತ್ರೆಯ ಹಿನ್ನೆಲೆಯಲ್ಲಿ ತಾಲೂಕಲ್ಲದೇ ರಾಜ್ಯದ ವಿವಿಧೆಡೆಗಳಿಂದ ಭಕ್ತರು ಆಗಮಿಸುವ ಕಾರಣ ರಥೋತ್ಸವ ಕಳೆಗಟ್ಟಲಿದೆ.

ಜಾತ್ರಾ ವಿಶೇಷ: ಯುಗಾದಿ ಹಬ್ಬಕ್ಕೂ ಮೊದಲು ಫಾಲ್ಗುಣ ಕೃಷ್ಣ ಶ್ರವಣ ಏಕಾದಶಿಯಂದು ರಥೋತ್ಸವ ನಡೆಯಲಿದ್ದು, ಲಕ್ಷಾಂತರ ಮಂದಿ ಭಕ್ತಾದಿಗಳು ಗೋಪಾಲ ಸ್ವಾಮಿ ದರ್ಶನ ಪಡೆಯುತ್ತಾರೆ. ಇಲ್ಲಿನ ರಥೋತ್ಸವದ ವಿಶೇಷವೇನೆಂದರೆ, ರಥವನ್ನು ಅರಣ್ಯದಲ್ಲಿ ಸಿಗುವ ಜವನದ ಅಂಬು ಕಟ್ಟಿ ಎಳೆಯುವುದು ಪ್ರತೀತಿ. ಇನ್ನು ರಥವನ್ನು ಶೃಂಗರಿಸಲು ಹಸಿರು ಹೂ ಗೊಂಚಲು, ಬಿದಿರು ಇತರೆ ಕಡ್ಡಿಗಳನ್ನು ಅರಣ್ಯದಿಂದ ತರಲಾಗುತ್ತದೆ. ತಾಲೂಕಿನ ಕಣ್ಣೇಗಾಲ, ಗೋಪಾಲಪುರ, ಕುಣಗಹಳ್ಳಿ, ಹೊನ್ನೇಗೌಡನಹಳ್ಳಿ, ದೇವರಹಳ್ಳಿ ಇತರೆ ಗ್ರಾಮಗಳ ಭಕ್ತರು ಈ ಕಾರ್ಯವನ್ನು ನೆರವೇರಿಸುತ್ತ ಬಂದಿದ್ದಾರೆ.

ಬೆಟ್ಟದಲ್ಲಿ ಸಿಗುವ ಬೊಂಬುಗಳು ಮತ್ತು ದಪ್ಪ ದಪ್ಪ ಹಂಬುಗಳನ್ನು ಮಾತ್ರ ಬಳಸಿ ರಥವನ್ನು ಕಟ್ಟುವುದು ಮತ್ತು ಎಳೆಯುವುದು ಇಲ್ಲಿನ ವಾಡಿಕೆ. ಅದರಂತೆ ಯಾವುದೇ ಹಗ್ಗಗಳನ್ನು ಇಲ್ಲಿ ಬಳಸುವುದಿಲ್ಲ. ದಪ್ಪ ದಪ್ಪ ಹಂಬುಗಳನ್ನು ಕಟ್ಟಿ ಎಳೆದರೆ ಮಾತ್ರ ರಥ ಮುಂದೆ ಸಾಗುತ್ತದೆ ಎಂಬುದು ಇಲ್ಲಿನ ಜನರ ನಂಬಿಕೆ. ನೂರಾರು ವರ್ಷಗಳ ಈ ನಂಬಿಕೆ ಇಂದಿಗೂ ಸಹ ಚಾಲ್ತಿಯಲ್ಲಿದೆ.

ಬೆಟ್ಟದ ವಿಶೇಷ: ವರ್ಷ ಪೂರ್ತಿ ದೇವಾಲಯದ ಗರ್ಭಗುಡಿಯಲ್ಲಿನ ಗೋಪಾಲ ಸ್ವಾಮಿಯ ಮೇಲೆ ಹಿಮ ಬೀಳುವುದರಿಂದ ಇದಕ್ಕೆ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂದು ಹೆಸರು ಬಂದಿದೆ. ದಟ್ಟವಾದ ಕಾಡಿನಿಂದ ಗೋಪಾಲಸ್ವಾಮಿ ಬೆಟ್ಟ ಸುತ್ತುವರಿದಿದೆ. ಇಲ್ಲಿ ವಿಧ-ವಿಧವಾದ ವೃಕ್ಷ ಸಂಪತ್ತಿದ್ದು, ಈ ಬೆಟ್ಟದ ಮತ್ತೊಂದು ವಿಶೇಷವೆಂದರೆ ಇಲ್ಲಿರುವ ಗಿಡಮೂಲಿಕೆಗಳು. ಈ ಅಪೂರ್ವ ಗಿಡಮೂಲಿಕೆಗಳ ಆಗರದಲ್ಲಿ ಕೊಲ್ಕತ್ತದ ಸಸ್ಯ ವಿಜ್ಞಾನಿ ಆರ್.ಎಲ್.ಬದ್ವಾರ್





(1936ರಲ್ಲಿ) 120 ಬಗೆಯ ಗಿಡಮೂಲಿಕೆಗಳನ್ನು ಸಂಗ್ರಹಿಸಿದ್ದರೆಂದು ಇತಿಹಾಸ ಹೇಳುತ್ತದೆ.

ಬೆಟ್ಟದ ಸುತ್ತ ಎಲ್ಲಿ ನೋಡಿದರೂ ಬೆಟ್ಟ-ಗುಡ್ಡಗಳು, ಕೆರೆಕಟ್ಟೆಗಳು, ಪೂರ್ವಕ್ಕೆ ತ್ರಿಯಂಬಕಾದ್ರಿ, ಪಶ್ಚಿಮಕ್ಕೆ ನೀಲಾದ್ರಿ, ಉತ್ತರಕ್ಕೆ ಮಂಗಳಾದ್ರಿ, ದಕ್ಷಿಣಕ್ಕೆ ಶಂಬರಾರಿಗಿರಿ, ಆಗ್ನೇಯಕ್ಕೆ ಹಂಸಾದ್ರಿ, ನೈರುತ್ಯಕ್ಕೆ ಗರುಡಾದ್ರಿ, ವಾಯುವ್ಯಕ್ಕೆ ಪಲ್ಲವ, ಈಶಾನ್ಯದಲ್ಲಿ ಮಲ್ಲಿಕಾರ್ಜುನಗಿರಿಗಳಿವೆ. ಇವುಗಳೊಂದಿಗೆ ಗದ್ದೆಹಳ್ಳದ ಗುಡ್ಡ, ವರಡೇಕಲ್ಲು ಗುಡ್ಡ, ಕೆಂಪನಾಯಕರ ದುರ್ಗ, ಬಂಡೀಕಲ್ ಬೆಟ್ಟ ಮೊದಲಾದ ಚಿಕ್ಕಪುಟ್ಟ ಬೆಟ್ಟಗಳಿವೆ.

ಬೆಟ್ಟವು ಸಮುದ್ರ ಮಟ್ಟಕ್ಕಿಂತ ಸುಮಾರು 4,769 ಅಡಿಗಳಷ್ಟು ಎತ್ತರದಲ್ಲಿದೆ. ದೇವಾಲಯದ ಸುತ್ತಮುತ್ತ ಸುಮಾರು 25 ಕಿ.ಮೀ. ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶವನ್ನು ಹೊಂದಿದೆ ಇದು ಬಂಡೀಪುರ ಹುಲಿ ಯೋಜನೆಯ ಸೂಕ್ಷ್ಮ ಪರಿಸರ ವಲಯದ ವ್ಯಾಪ್ತಿಗೆ ಒಳಪಟ್ಟಿದೆ.

ಗೋಪಾಲಸ್ವಾಮಿ ಬೆಟ್ಟದ ಧಾರ್ಮಿಕ ಮಹತ್ವ: ಗೋಪಾಲಸ್ವಾಮಿ ಬೆಟ್ಟವನ್ನು ಕಮಲಾಚಲಗಿರಿ, ಕಂಜಗಿರಿ, ಗೋವರ್ಧನ ಗಿರಿ ಎಂದು ಕರೆಯಲಾಗುತ್ತದೆ. ಪುರಾಣಗಳಲ್ಲಿ ಕಮಲಾಚಲ ಎಂಬ ನಾಮಾಂಕಿತವೇ ಹೆಚ್ಚು ಪ್ರಚಾರದಲ್ಲಿದ್ದು, ಹೂ ದಳಗಳಂತಿರುವ ಎಂಟು ಪರ್ವತಗಳಿಂದ ಸುತ್ತುವರಿದ ಕಮಲದ ಆಕೃತಿಯಲ್ಲಿ ಬೆಟ್ಟವು ಕಂಡು ಬರುವುದರಿಂದ ಈ ಹೆಸರೇ ಸೂಕ್ತವಾಗುದಾಗಿದೆ. ಈ ಬೆಟ್ಟವು ವರ್ಷದ ಬಹುಕಾಲ ಹಿಮದಿಂದ ಆವರಿಸಿಕೊಂಡಿರುವುದರಿಂದ ಇದನ್ನು ಹಿಮವದ್ ಗೋಪಾಲ ಸ್ವಾಮಿ ಬೆಟ್ಟ ಎನ್ನಲಾಗುತ್ತದೆ.

ಇಲ್ಲಿ ಮಾದಗಿತ್ತಿಯೊಬ್ಬಳು ಪ್ರತಿನಿತ್ಯರಾಗಿ ಬೀಸುತ್ತಾ ಹಾಡುತ್ತಿದ್ದಳಂತೆ, ಈಕೆಯ ಹಾಡನ್ನು ಕೇಳಿ ವಿಷ್ಣು ಪ್ರತ್ಯಕ್ಷನಾಗಿ ಏನು ವರ ಬೇಕು ಎಂದಾಗ ಆಕೆ ಈ ಬೆಟ್ಟಕ್ಕೆ ನನ್ನ ಹೆಸರಿಡಬೇಕು ಎಂದು ಬೇಡಿದಳು. ಅಂದಿನಿಂದ ಗೋಪಾಲಸ್ವಾಮಿ ಬೆಟ್ಟದ ಒಂದು ಭಾಗ ಮಾದಗಿತ್ತಿ ದುರ್ಗ ಎಂದು ಹೆಸರು ಪಡೆದಿದೆ. ಬೆಟ್ಟದ ಮೇಲೆ ಶ್ರೀ ವೇಣುಗೋಪಾಲ ಸ್ವಾಮಿಯ ದೇವಾಲಯವಿದ್ದು, ಇಲ್ಲಿ ಶ್ರೀ ಕೃಷ್ಣನು ನೆಲೆಸಿದ್ದಾನೆ ಎಂದು ಪ್ರತೀತಿ.

ಅಗಸ್ತ್ಯರು ವಿಂಧ್ಯ ಪರ್ವತದ ಬೆಳವಣಿಗೆಯನ್ನು ನಿಲ್ಲಿಸಿ, ದಕ್ಷಿಣ ದೇಶವನ್ನು ಪವಿತ್ರಗೊಳಿಸಲು ಹೊರಟರು. ಅವರು ಗೋಪಾಲಸ್ವಾಮಿ ಬೆಟ್ಟಕ್ಕೆ ಬಂದು ಸ್ವಾಮಿಯನ್ನು ಕುರಿತು ತಪಸ್ಸು ಮಾಡಿದರು. ಗೋಪಾಲಸ್ವಾಮಿ ಪ್ರತ್ಯಕ್ಷನಾದನು. ಅಗಸ್ತ್ಯರು ಸ್ವಾಮಿಯನ್ನು ಕಮಲಾಚಲಕ್ಕೆ ಬಂದು ನೆಲೆಸಬೇಕೆಂದು ಕೇಳಿಕೊಂಡರು. ಅಂತೆಯೇ ಗೋಪಾಲಸ್ವಾಮಿ ರುಕ್ಮಿಣಿ-ಸತ್ಯಭಾಮೆಯೊಂದಿಗೆ ಇಲ್ಲಿ ನೆಲೆಸಿದನು. ಈ ಅಗಸ್ತ್ಯರು ಉತ್ತರದ ಕಡೆಯಿಂದ ಬರುವಾಗ ಪುಣ್ಯನದಿ, ಪುಣ್ಯವೃಕ್ಷ, ಪುಣ್ಯಾರಣ್ಯ, ಪುಣ್ಯ ಆಶ್ರಮ ಮೊದಲಾದ ಪುಣ್ಯಕರವಾದ ವಸ್ತುಗಳನ್ನು ಈ ಕಮಲಾಚಲಕ್ಕೆ ತಂದರು. ಶ್ರೇಷ್ಠ ಋಷಿಗಳೆಲ್ಲ ಆಗಮಿಸಿದರು.

700 ವರ್ಷಗಳ ಪ್ರಾಚೀನ ದೇವಾಲಯ: ಸರಿ ಸುಮಾರು 700 ವರ್ಷಗಳ ಪ್ರಾಚೀನತೆಯ ಈ ದೇವಾಲಯ ಹೊಂದಿದ್ದು, ದೇವಾಲಯವನ್ನು ಪುರಾಣಕಾರರು ಅಗಸ್ತ್ಯರು ಸ್ಥಾಪಿಸಿದರು. ಆದರೆ ವಾಸ್ತವವಾಗಿ ಗೋಪಾಲಸ್ವಾಮಿಯ ಪ್ರತಿಷ್ಠಾಪನೆ ಮಾಧವ ದಣಾಯಕನಿಂದ ಆಯಿತು. ಈತ ಕ್ರಿ.ಶ. 1315ರಲ್ಲಿ ಗೋಪಾಲಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಿ ಬಲ್ಲಾಳ ದೇವರಸರಿಂದ ದತ್ತಿ ಬಿಟ್ಟನೆಂದು ಶಾಸನಗಳು ನಿರೂಪಿಸುತ್ತವೆ.

ಅಷ್ಟ ತೀರ್ಥ: ಗೋಪಾಲಸ್ವಾಮಿ ದೇವಾಲಯದ ಸುತ್ತ ಅನೇಕ ತೀರ್ಥಗಳಿವೆ. ಅವುಗಳಲ್ಲಿ ಹಂಸತೀರ್ಥ, ಬಭ್ರುತೀರ್ಥ, ಶಂಖ ತೀರ್ಥ, ಚಕ್ರತೀರ್ಥ, ಗಧಾ ತೀರ್ಥ, ಪದ್ಮ ತೀರ್ಥ, ಶಾರ್ಙ್ಗ ತೀರ್ಥ, ವನಮಾಲಿಕಾ ತೀರ್ಥ ಎಂಬ ಅಷ್ಟ ತೀರ್ಥಗಳು ಪ್ರಸಿದ್ಧ. ಪ್ರತಿಯೊಂದು ತೀರ್ಥಕ್ಕೂ ಪುರಾಣಗಳಲ್ಲಿ ಕಥೆಗಳಿವೆ. ಈ ಕಥೆಗಳು ತೀರ್ಥಗಳ ಮಹಿಮೆಯನ್ನು ತಿಳಿಸುವುದಲ್ಲದೇ ವಿಷ್ಣು ಪಾರಮ್ಯವನ್ನು ವಿವರಿಸುತ್ತದೆ. ದೇವಸ್ಥಾನದ ಪೂರ್ವಕ್ಕೆ ಸುಮಾರು ಅರ್ಧ ಮೈಲಿ ದೂರದಲ್ಲಿ ಹಂಸ ತೀರ್ಥವಿದೆ ಇಲ್ಲಿ ಮುಳುಗಿದ ಕಾಗೆಗಳು ಹಂಸವಾಗಿ ಹೊರಬಂದುದರಿಂದ ಇದು ಹಂಸ ತೀರ್ಥವಾಗಿದೆ. ಆ ಕಾರಣಕ್ಕಾಗಿ ಬೆಟ್ಟದಲ್ಲಿ ಒಂದು ಕಾಗೆಯೂ ಕಾಣ ಸಿಗುವುದಿಲ್ಲ.

ಬಭ್ರುವೆಂಬ ಬ್ರಾಹ್ಮಣ ಸ್ನಾನ ಮಾಡಿ ಕುಷ್ಠ ರೋಗವನ್ನು ಪರಿಹರಿಸಿಕೊಂಡ ಕೊಳವೇ ಬಭ್ರುತೀರ್ಥ. ಇದು ದೇವಾಲಯದ ಆಗ್ನೇಯದಲ್ಲಿದೆ. ಗೋಪಾಲಸ್ವಾಮಿ ಶಂಖ ಮತ್ತು ಗದೆಯನ್ನು ಇಟ್ಟ ತಾಣ ಶಂಖ ತೀರ್ಥ, ಗಧಾ ತೀರ್ಥಗಳಾದವು. ಇದು ದೇವಾಲಯದ ದಕ್ಷಿಣಕ್ಕಿದೆ. ಇಲ್ಲಿ ಸ್ನಾನ ಮಾಡಿದರೆ ಪಿಶಾಚತ್ವ ಹೋಗುವ್ಯದೆಂದು ನಂಬಿಕೆ. ದೇವಾಲಯದ ಪಶ್ಚಿಮಕ್ಕೆ ಗಧಾ ತೀರ್ಥ. ಕಂಬೋಜರಾಯನ ಮಗ ಇಲ್ಲಿ ಸ್ನಾನ ಮಾಡಿ ಕಳೆದು ಹೋಗಿದ್ದ ರಾಜ್ಯವನ್ನು ಮರಳಿ ಪಡೆದನೆಂಬುದು ಪುಣ್ಯ ಕಥೆ ಇದರೊಂದಿಗೆ ತೊಟ್ಟಿಲು ತೀರ್ಥ, ಪಾನಕದ ಕೊಳ ಮೊದಲಾದ 77 ತೀರ್ಥಗಳಿವೆ. ಮಕ್ಕಳಿಲ್ಲದವರು ತೊಟ್ಟಿಲು ತೀರ್ಥದಲ್ಲಿ ಸ್ನಾನ ಮಾಡಿದರೆ ಮಕ್ಕಳನ್ನು ಪಡೆಯುವರೆಂದು ಪ್ರತೀತಿ ಇದ್ದು. ಇಂದಿಗೂ ಸಹ ಮಕ್ಕಳಿದ ದಂಪತಿಗಳು ಹರಕೆ ಹೊತ್ತು ಪುಣ್ಯ ಸ್ನಾನ ಮಾಡಿ ಸ್ವಾಮಿ ಕೃಪೆಗೆ ಪಾತ್ರರಾಗಿ ಸಂತಾನವನ್ನು ಹೊಂದಿದ ಉದಾಹರಣೆಗಳಿವೆ. ಇದೇ ಆಧಾರದ ಮೇಲೆ ಗೋಪಾಲಸ್ವಾಮಿಯನ್ನು ಸಂತಾನ ಗೋಪಾಲಸ್ವಾಮಿ ಎಂದು ಕರೆಯುತ್ತಾರೆ.

ವಿಶೇಷ ಬಸ್ ಸೌಲಭ್ಯ

ಗುಂಡ್ಲುಪೇಟೆ ತಾಲೂಕಿನ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಪಟ್ಟಣದಿಂದ ಕೇವಲ 18 ಕಿ.ಮೀ. ಹಾಗೂ ಮೈಸೂರಿನಿಂದ 78 ಕಿ.ಮೀ. ದೂರದಲ್ಲಿದೆ. ದೇವಾಲಯಕ್ಕೆ ಕೇವಲ ಕೆಎಸ್‌ಆರ್‌ಟಿಸಿ ಬಸ್‌ಗಳ ಸೌಲಭ್ಯವಿದ್ದು ಯಾವುದೇ ರೀತಿಯ ದ್ವಿಚಕ್ರ ಮತ್ತಿತರೆ ಖಾಸಗಿ ವಾಹನಗಳಲ್ಲಿ ಬರುವ ಭಕ್ತಾದಿಗಳು ತಮ್ಮ ವಾಹನಗಳನ್ನು ಕಡ್ಡಾಯವಾಗಿ ಬೆಟ್ಟದ ತಪ್ಪಲಿನಲ್ಲಿರುವ ಅರಣ್ಯ ಇಲಾಖೆಯ ತನಿಖಾ ಠಾಣೆಯ ಮುಂಭಾಗದ ಪಾರ್ಕಿಂಗ್‌ನಲ್ಲಿ ನಿಲ್ಲಿಸಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿಯೇ ಬೆಟ್ಟದ ಮೇಲಿರುವ ದೇವಸ್ಥಾನಕ್ಕೆ ತೆರಳಬೇಕಾಗಿದೆ ಇದಕ್ಕಾಗಿ ಪಟ್ಟಣದ ಕೆಆರ್‌ಟಿಸಿ ಬಸ್ ಡಿಪೋನಿಂದ ವಿಶೇಷ ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಪ್ರತಿದಿನ ಬೆಳಗ್ಗೆ 8ರಿಂದಲೇ ಪಟ್ಟಣದ ಬಸ್ ನಿಲ್ದಾಣದಿಂದ ಬೆಟ್ಟಕ್ಕೆ ಬಸ್‌ಗಳ ಸಂಚಾರ ಆರಂಭವಾಗಲಿದೆ.


ಇಲ್ಲಿನ ಮುಖ್ಯ ದೇವಾಲಯ ಶ್ರೀವೇಣುಗೋಪಾಲಸ್ವಾಮಿಯದು. ಇದು ಅಷ್ಟ ತೀರ್ಥಗಳ ಮಧ್ಯೆ ನಿರ್ಮಾಣವಾಗಿದೆ. ಶಿಲ್ಪದ ರಚನೆಯಲ್ಲಿ ಈ ದೇವಾಲಯ ಆರಂಭದಲ್ಲಿ ಹೊಯ್ಸಳ ವಾಸ್ತುಶಿಲ್ಪವನ್ನು ಮೈಗೂಡಿಸಿಕೊಂಡು ಆ ಬಳಿಕ ವಿಜಯನಗರದ ವಾಸ್ತುಶಿಲ್ಪದ ಪ್ರಭಾವಕ್ಕೆ ಒಳಪಟ್ಟಿರುವಂತೆ ತೋರುತ್ತದೆ. ಈ ದೇವಾಲಯದ ಒಳಗೆ ಗರ್ಭಗುಡಿ, ಸುಕನಾಸಿ, ನವರಂಗಗಳಿವೆ. ನವರಂಗದ ಬಲಗಡೆ ಸುಗ್ರೀವನ ಮೂರ್ತಿ. ಇದರ ಸಮೀಪದಲ್ಲಿರುವ ಗುಡಿಯಲ್ಲಿ ರಾಮಾನುಜಾಚಾರ್ಯ ಮತ್ತು ಅಗಸ್ತ್ಯರ ವಿಗ್ರಹಗಳಿವೆ. ಅಷ್ಟದಳದ ಪೀಠದ ಮೇಲೆ ಶ್ರೀವೇಣುಗೋಪಾಲ ಸ್ವಾಮಿಯ ದಿವ್ಯ ಮನೋಹರ ವಿಗ್ರಹವಿದೆ. ನಾಲ್ಕು ಅಡಿ ಎತ್ತರದ ವೇಣುಗೋಪಾಲನ ಎಡದಲ್ಲಿ ರುಕ್ಮಿಣಿ ಸತ್ಯಭಾಮೆ ಮತ್ತು ಗೋವುಗಳ ಮಧ್ಯದಲ್ಲಿ ಕೊಳಲನ್ನು ನುಡಿಸುತ್ತಿರುವ ಭಂಗಿಯಲ್ಲಿ ಶ್ರೀಕೃಷ್ಣ ದರ್ಶನ ನೀಡುತ್ತಿದ್ದಾನೆ.

ಈ ಬೆಟ್ಟವು ಮೈಸೂರು ಮಹಾರಾಜರ ಆಡಳಿತಕ್ಕೆ ಒಳಪಟ್ಟಿತ್ತು. ಇಮ್ಮಡಿ ರಾಜ ಒಡೆಯರ್-ನಂಜರಾಜ ಒಡೆಯರ್ (1489) ದೇವರಾಜ ಒಡೆಯರ್ (1503) ಗೋವಣ್ಣ ಒಡೆಯರ್ (1504) ಮೊದಲಾದವರ ಆಳ್ವಿಕೆ ಇಲ್ಲಿತ್ತು ಎನ್ನಲಾಗುತ್ತದೆ.

ಗೋಪಾಲಸ್ವಾಮಿ ಬೆಟ್ಟ ಭಕ್ತರಿಗೆ ಮಾತ್ರವಲ್ಲ, ಕವಿಗಳಿಗೂ ಸ್ಫೂರ್ತಿಯ ಸೆಲೆ ಪ್ರವಾಸಿಗಳಿಗೆ ಕಣ್ಮನ ತಣಿಸುವ ಪ್ರಕೃತಿ ಸೌಂದರ್ಯ ನಿಬ್ಬೆರಗಾಗಿಸುವುದು ಖಂಡಿತ.

ಇಲ್ಲಿ ವರ್ಷ ಪೂರ್ತಿ ಹಿಮದಿಂದ ತಂಪಾಗಿರುವ ಶ್ರೀರುಕ್ಮಿಣೀ ಸತ್ಯಭಾಮ ಸಹಿತನಾಗಿ ಕೊಳಲು ನುಡಿಸುತ್ತಿರುವ ಭಂಗಿಯಲ್ಲಿ ನಿಂತಿರುವ ಹಿಮವದ್ ಗೋಪಾಲನಿಗೆ ವಾರದ ಎಲ್ಲಾ ದಿನಗಳಲ್ಲೂ ವಿಶೇಷ ಪೂಜಾ ಕೈಂಕರ್ಯಗಳನ್ನು ನಡೆಸಲಾಗುತ್ತದೆ. ಈ ದೇವಾಲಯಕ್ಕೆ ದೇಶ-ವಿದೇಶ ಮತ್ತು ರಾಜ್ಯ ಹಾಗೂ ನೆರೆ ರಾಜ್ಯಗಳ ವಿವಿಧ ಭಾಗಗಳಿಂದ ಸಾವಿರಾರು ಭಕ್ತಾದಿಗಳು ಆಗಮಿಸುತ್ತಾರೆ.

ವಾರ ಭವಿಷ್ಯ




27.03.2022ರಿಂದ 2.04.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ಮೀನ, ಚಂದ್ರ-ಮಕರ, ಕುಂಭ, ಮೀನ, ಕುಜ-ಮಕರ, ಬುಧ-ಮೀನ, ಗುರು-ಮಕರ, ಶುಕ್ರ-ಮಕರ, ಶನಿ-ಮಕರ, ರಾಹು-ವೃಷಭ ಮತ್ತು ಕೇತು-ವೃಶ್ಚಿಕ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಗ್ರಹಕೂಟಗಳು ಉತ್ತಮವಿರುವ ಪರಿಣಾಮ ಲಾಭದಾಯಕ ಅವಕಾಶಗಳು ನಿಮ್ಮ ಎದುರಿಗಿದೆ. ಕೈಜಾರದಂತೆ ನೋಡಿಕೊಳ್ಳಿ. ನಿಮ್ಮ ಜಾಣ್ಮೆಯಿಂದ ಗಂಭೀರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಗ್ರಹಗಳು ನಿಮ್ಮ ಬೆನ್ನಿಗಿದ್ದಾರೆ. ಶಿಕ್ಷಣ ಕ್ಷೇತ್ರ ಮತ್ತು ಕಲಾ ಕ್ಷೇತ್ರದಲ್ಲಿರುವವರಿಗೆ ಪರಿಶ್ರಮಕ್ಕೆ ತಕ್ಕ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ವಧು-ವರ ಅನ್ವೇಷಣೆ ಸಾಫಲ್ಯ ಹೊಂದುವುದು. ಸ್ನಾಯು ದೌರ್ಬಲ್ಯ ಕಾಡಬಹುದು. - ಶ್ರೀವಿಘ್ನೇಶ್ವರ ಪೂಜೆ, ಶುಭಸಂಖ್ಯೆ-1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಗುರು ಗ್ರಹದ ಕೃಪೆಯಿದೆ. ನಿಮ್ಮ ಜವಾಬ್ದಾರಿ ಹಾಗೂ ತಲುಪಬೇಕಾದ ಗುರಿಯನ್ನು ತಲಿಪುವಿರಿ. ಆರ್ಥಿಕ ಮುನ್ನಡೆ ಸಾಧಿಸುವಿರಿ. ಉತ್ತಮ ಜನರ ಸಂಪರ್ಕ ಸರಿಯಾದ ಸಮಯದಲ್ಲಿ ದೊರಕುವುದು, ಅದನ್ನು ಉತ್ತಮ ಕಾರ್ಯಕ್ಕಾಗಿ ಬಳಸಿಕೊಳ್ಳಿ. ಕೇತು-ರಾಹು ಬಾಧಕರಿದ್ದು, ವಿಷಾಹಾರ, ಸಾಂಕ್ರಾಮಿಕ ರೋಗಗಳಿಂದ ಎಚ್ಚರವಿರಿ. ನಿಮ್ಮ ಪ್ರೀತಿ ಪಾತ್ರರ ಅನಾರೋಗ್ಯದಿಂದ ಹೆಚ್ಚಿನ ಸಮಯ ಹಾಗೂ ಹಣ ವೆಚ್ಚವಾಗಬಹುದು. - ಶ್ರೀದೇವಿ ಪೂಜನ, ಶುಭಸಂಖ್ಯೆ-3.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದಾರಂಭಕ್ಕೆ ಧನ-ಧಾನ್ಯ ಲಾಭ. ಮಿತ್ರ ಜನರ ಸಂಪರ್ಕದಿಂದ ಹರುಷ. ಎಲ್ಲಾ ರಂಗಗಳಲ್ಲೂ ಪ್ರತಿಸ್ಪರ್ಧಿಗಳು ಇದ್ದೇ ಇರುತ್ತಾರೆ. ನೀವೆಷ್ಟೇ ಚತುರರಾದರೂ ಅದೃಷ್ಟದ ಆಟವೇ ಫೈನಲ್. ಹಣಕಾಸು, ಲೆಕ್ಕ-ಪತ್ರ ವಿಚಾರಗಳಲ್ಲಿ ಎಲ್ಲರನ್ನೂ ನಂಬಬೇಡಿ. ದುಷ್ಟಜನರ ಸಹವಾಸದಿಂದ ಸಂಕಷ್ಟಕ್ಕೆ ಗುರಿಯಾಗುವ ಸಾಧ್ಯತೆ. ನೆರೆಹೊರೆಯಲ್ಲಿ ಸ್ನೇಹಮಯವಾಗಿರಿ. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಭೇಟಿಯಿಂದ ಮನಃಶಾಂತಿ.
-ಶ್ರೀಲಕ್ಷ್ಮೀ ಅಷ್ಟಕ ಪಠಿಸಿ, ಶುಭಸಂಖ್ಯೆ-2.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಹೆಚ್ಚು ಹಣ ಕೈ ಸೇರಿದಂತೆ ಹೆಚ್ಚು ಖರ್ಚುಗಳೂ ಹುಟ್ಟಿಕೊಳ್ಳುತ್ತವೆ. ಕುಟುಂಬ ಸದಸ್ಯರಲ್ಲಿ ಸಾಮರಸ್ಯ ಕೆಡದಂತೆ ಎಚ್ಚರವಹಿಸಿ. ಮರ ಮುಟ್ಟು ಪೀಠೋಪಕರಣ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ ವಾಗುವುದು. ಉಚ್ಛ ಕುಜನಿಂದ ಭೂ ಸಂಬಂಧಿ ವ್ಯವಹಾರಗಳು ಭರಾಟೆಯಿಂದ ಸಾಗುವುದು. ಜನ್ಮ ಕೇತುವಿನ ಕಾರಣ ದುಷ್ಟ ಜನರ ಸಹವಾಸ ಉಂಟಾಗಲಿದೆ. ಜೂಜು-ಮದ್ಯಗಳಿಂದ ದೂರವಿದ್ದರೆ ಕ್ಷೇಮ. - ಶ್ರೀಸುಬ್ರಮಣ್ಯ ದರ್ಶನ, ಶುಭಸಂಖ್ಯೆ-9.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವೃತ್ತಿ ಜೀವನದಲ್ಲಿ ಹೊಸ ಬೆಳವಣಿಗೆಗಳು ಕಂಡು ಬರುವುದರಿಂದ ಹರ್ಷ. ಇದರ ಪರಿಣಾಮ ನಿಮ್ಮ ವೈಯಕ್ತಿಕ ವಿಷಯಗಳು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಹಣಕಾಸಿನ ವಿಚಾರದಲ್ಲಿ ಸುಧಾರಣೆ ಕಂಡು ಬರುವುದು. ಕೃಷಿಕ ವರ್ಗದವರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ. ಅಷ್ಟಮ ಶನಿ ಕಾರಣ ಆರೋಗ್ಯದ ಬಗ್ಗೆ ಗಮನವಿಡಿ. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಮಾರ್ಗ ಮಧ್ಯೆ ತೊಂದರೆ ಆದೀತು. - ಶ್ರೀಮನ್ನಾರಾಯಣ ಸ್ತುತಿ, ಶುಭಸಂಖ್ಯೆ-5.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಸಪ್ತಾಹದ ಆದಿಗೆ ಆದಾಯ ಚೆನ್ನಾಗಿದ್ದರೂ ಅದು ಅತ್ತಿತ್ತ ಹರಿದು ಹೋಗುತ್ತದೆ. ನಿಮಗೆ ಸಂಬಂಧ ಪಡದ ಕೆಲಸಗಳಿಗೆ ಕೈ ಹಾಕಿ ಪರಿತಾಪಪಡುವಿರಿ. ಸಮುದ್ರ ಜನ್ಯ ವಸ್ತು ವ್ಯಾಪಾರಿಗಳಿಗೆ ಉತ್ತಮ ಧನಲಾಭವಿದೆ. ಕೃಷಿ ಉಪಕರಣ ಏಜೆನ್ಸಿಗಳಿಗೆ ದೊಡ್ಡ ಆರ್ಡರ್ ದೊರೆಯುವ ಸಾಧ್ಯತೆ ಇದೆ. ಸರ್ಕಾರಿ ಕೆಲಸಗಳು ಅನುಕೂಲಕರವಾಗಿ ಸಾಗುವುದು. ವಾರದ ಕಡೆಗೆ ಮಾನಸಿಕ ಒತ್ತಡವೂ ಶಾರೀರಿಕ ಬಳಲಿಕೆಯೂ ಉಂಟಾಗುವುದು.
- ಶ್ರೀವಿಷ್ಣು ಸಹಸ್ರನಾಮ ಪಠಿಸಿ, ಶುಭಸಂಖ್ಯೆ-7.




ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಸಪ್ತಾಹದ ಆದಿಗೆ ಧನ- ಧಾನ್ಯ ಲಾಭ ಮೃಷ್ಟಾನ್ನ ಭೋಜನ, ಶ್ರೀಮತಿಯ ಸಾಂಗತ್ಯ ದೊರೆಯುವುದು. ನಿಮ್ಮ ಕಾರ್ಯ ಸ್ಥಳದಲ್ಲಿ ಅತಿಯಾದ ಒತ್ತಡವಿದ್ದಾಗ್ಯೂ ಕುಶಲಿಗಳಾದ ನೀವು ಸಮಯ ಸ್ಫೂರ್ತಿಯಿಂದ ನಿಭಾಯಿಸುವಿರಿ. ಆಸ್ತಿ ಕ್ರಯ- ವಿಕ್ರಯದಲ್ಲಿ ಆತುರ ಪಡಬೇಡಿ. ಹಣ ಕೈಗೆ ಬಂದರೂ ಅನ್ಯ ರೀತಿಯಲ್ಲಿ ಅಪವ್ಯಯವಾದೀತು. ಪಾರ್ಟನರ್‌ಶಿಪ್ ವ್ಯವಹಾರ ನಷ್ಟಕ್ಕೆ ಹೇತುವಾಗುವುದು. ಜೂಜು, ಕಾರ್ಡ್‌ನಿಂದ ದೂರವಿರಿ. - ಶ್ರೀದುರ್ಗಾಪರಮೇಶ್ವರಿ ದರ್ಶನ, ಶುಭಸಂಖ್ಯೆ-8.




ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಚಂದ್ರ ಗ್ರಹದ ಎಂಟ್ರಿಯಿಂದ ಹಸನ್ಮುಖರಾಗಿರುವಿರಿ. ಹೋಟೆಲ್, ಟ್ರಾವೆಲರ್ಸ್‌ರವರಿಗೆ ಉತ್ತಮ ಗ್ರಾಹಕರು ದೊರೆತು ಧನಾದಾಯದಲ್ಲಿ ಹೆಚ್ಚಳವಾಗಲಿದೆ. ಅತಿಥಿ ಜನರ ಸ್ವಾಗತಕ್ಕೆ ಸಜ್ಜಾಗಿರಿ. ಅವರ ಉಪಚಾರಕ್ಕೆ ಹೇರಳ ಧನವ್ಯಯವಾಗುವುದು. ಶುಭಗುರುವಿನ ಕಾರಣ ಮನೆಯಲ್ಲಿ ಮಂಗಳವಾದ್ಯ ಮೊಳಗಬಹುದು. ಬೆಳ್ಳಿ, ಬಂಗಾರ ವಸ್ತು ಸಂಗ್ರಹವೂ ಆದೀತು. ನಿಮ್ಮ ಹಾಗೂ ಮನೆಯಲ್ಲಿ ಹಿರಿಯರ ಆರೋಗ್ಯದ ಕಡೆ ಗಮನವಿರಲಿ.
- ಶ್ರೀ ಶಿವನಿಗೆ ಬಿಲ್ವ ಸಮರ್ಪಣೆ, ಶುಭಸಂಖ್ಯೆ-5.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಗ್ರಹಗಳ ಒಲುಮೆ ಶುಭವಾಗಿದೆ. ಅಂದುಕೊಂಡ ಕೆಲಸ ಕಾರ್ಯಗಳು ಕೈಗೂಡುವುದರಿಂದ ಸಂತೋಷ, ಸಂಪತ್ತು ಸೌಲಭ್ಯಗಳನ್ನು ಗಳಿಸುವುದರ ಜೊತೆಗೆ ಅನಾವಶ್ಯಕ ಖರ್ಚುಗಳು ಮಿತಿ ಮೀರಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಸಜ್ಜನರ ಪ್ರೇರಣೆಯಿಂದ ಪುಣ್ಯ ಕಾರ್ಯಾಚರಣೆ ಮಾಡಿ, ಜನ ಮನ್ನಣೆಯನ್ನು ಗಳಿಸುವಿರಿ. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. - ಶ್ರೀ ಮಾರುತಿ ಸೇವೆ, ಶುಭಸಂಖ್ಯೆ-6.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ಸಜ್ಜನರ ಸಹವಾಸ, ಸತ್ಕಾರ್ಯಗಳಲ್ಲಿ ಆಸಕ್ತಿ. ಹೊಸ ಜನರ ಪರಿಚಯ, ಅವರಿಂದ ನೂತನ ಯೋಜನೆಗಳಿಗೆ ಪ್ರೇರಣೆ. ವಿದ್ಯಾರ್ಜನೆಯಲ್ಲಿ ಮಹತ್ತರವಾದ ಸಾಧನೆಗೈಯುವಿರಿ. ರಾಜಕಾರಣಿಗಳಿಗೆ ಉತ್ತಮ ಸಮಯವಲ್ಲ. ಕಾನೂನು ತೊಡಕುಗಳು ಎದುರಾಗುವುದು. ಕೋರ್ಟ್ ವಿಚಾರಗಳು ನಿಮ್ಮ ಪರ ಇರದು. ವಾಹನ ನಿಧಾನವಾಗಿ ಚಲಿಸಿ, ಕ್ಷೇಮವಾಗಿ ಮನೆ ತಲುಪಿ. ಪ್ರವಾಸಿ ಸ್ಥಳಗಳಲ್ಲಿ 'ಸೆಲ್ಫಿ'ಗೀಳು ಬಿಟ್ಟರೆ ಒಳ್ಳೆಯದು.
- ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ, ಶುಭಸಂಖ್ಯೆ-1.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಮೊದಲಾರ್ಧ ಎಚ್ಚರಿಕೆಯಿಂದ ಇರಿ. ಅನಿರೀಕ್ಷಿತ ಖರ್ಚುಗಳೂ ಎದುರಾಗಬಹುದು. ಕುಟುಂಬದಲ್ಲಿ ಅಭಿಪ್ರಾಯ ಭೇದಗಳು ಬರದಂತೆ ಎಚ್ಚರಿಕೆ ವಹಿಸಬೇಕು. ವಾದ-ವಿವಾದಗಳು ನಿಮ್ಮ ಪ್ರಗತಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಿ. ವಾರ ಮಧ್ಯಾನಂತರ ನಿಮ್ಮ ಕೆಲಸ ಕಾರ್ಯಗಳು ಎಂದಿನಂತೆ ನಡೆಯುವುದು. ನೆನೆಗುದಿಗೆ ಬಿದ್ದ ಕಾರ್ಯ ಸುಗಮ ವಾಗಲಿದೆ. ಶ್ವಾಸ ಸಂಬಂಧಿ ಕಾಯಿಲೆ ಕಾಡ ಬಹುದು.
- ಶ್ರೀ ವೆಂಕಟೇಶ್ವರ ಉಪಾಸನೆ, ಶುಭಸಂಖ್ಯೆ-4.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಪ್ತಾಹದ ಪ್ರಾರಂಭಕ್ಕೆ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆಯನ್ನು ಕಾಣುವಿರಿ. ಮನೆಯಲ್ಲಿ ಹರ್ಷದಾಯಕ ವಾತಾವರಣ. ವಸ್ತ್ರ, ರೇಷ್ಮೆ, ಕ್ಷೀರೋತ್ಪನ್ನ ವ್ಯಾಪಾರಿಗಳಿಗೆ ಹೇರಳ ಧನಲಾಭ ಉಂಟಾಗಲಿದೆ. ಬೃಹತ್ ಹೂಡಿಕೆ ಯೋಜನೆಗಳನ್ನು ಕೊಂಚ ಸಮಯ ಮುಂದೆ ಹಾಕಿ. ಜಲಾಶಯಗಳ ಹತ್ತಿರ ಹುಡುಗಾಟ ಬೇಡ. ವಾರದ ಕಡೆಗೆ ಮನಸ್ಸು ದ್ವಂದ್ವ ನಿರ್ಣಯಗಳಿಂದ ಪರದಾಡಬೇಕಾಗಿತು.
- ಶ್ರೀ ಶಿವಾಷ್ಟಕ ಪಠಿಸಿ, ಶುಭಸಂಖ್ಯೆ-5.

ಮಕ್ಕಳ ಚಿತ್ರಕಥೆ

"ಹೊರಡುವ ಮೊದಲೇ ಚಿಲ್ಲರೆ ಎಣಿಸಿಕೊಂಡು ಹೋಗಬೇಕು....!"

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



1. ಕೇಶವ ಒಬ್ಬ ಪ್ರಾಮಾಣಿಕ ಬಾಲಕ. ಈ ಉತ್ತಮ ಗುಣಗಳಿಂದಲೇ ಮನೆ ಮತ್ತು ಶಾಲೆಯಲ್ಲಿ ಮೇಲಿಂದ ಮೇಲೆ ಅವನು ಪ್ರಶಂಸೆಗೆ ಪಾತ್ರನಾಗುತ್ತಿದ್ದ. ಅವನ ಪ್ರಾಮಾಣಿಕತೆಗೆ ಇದೊಂದು ನಿದರ್ಶನ.



2. ಹೀಗೆ ಅವನ ತಂದೆ ಅವನಿಗೆ ಒಂದು ದಿನ "ಸಕ್ಕರೆ ತೆಗೆದುಕೊಂಡು ಬಾ" ಎಂದು ಹೇಳಿ ಅವನ ಕೈಗೆ ನೂರರ ನೋಟೊಂದನ್ನು ನೀಡಿದ. ಕೇಶವ ಅಂಗಡಿಗೆ ಹೋದಾಗ ಸಂಜೆಗತ್ತಲಾಗಿತ್ತು.




3. ಅಂಗಡಿಯಿಂದ ಸಕ್ಕರೆ ಹಾಗೂ ಮಿಕ್ಕ ಹಣವನ್ನು ಪಡೆದು ಮನೆಗೆ ಹೊರಟ. ಆ ಹಣವನ್ನು ಹಾದಿಯಲ್ಲಿ ಎಣಿಸಿ ನೋಡಿದ. ಅಂಗಡಿಯಾತ ಕೊಟ್ಟಿದ್ದ ಹಣದಲ್ಲಿ 10 ರೂ. ಕಡಿಮೆ ಇತ್ತು. ಬಾಲಕ ಸೀದಾ ಅಂಗಡಿ ಕಡೆಗೆ ನಡೆದ.



4. ಅಂಗಡಿ ಮಾಲೀಕನಿಗೆ ಕೇಶವ "ನೋಡಿ, ನೀವು ಕೊಟ್ಟ ಹಣದಲ್ಲಿ ಹತ್ತು ರೂಪಾಯಿ ಕಡಿಮೆ ಇದೆ" ಎಂದ.



5. ಆಗ ಅಂಗಡಿಯವ ಕುಪಿತನಾಗಿ"ಅದಕ್ಕೆ ನಾನು ಜವಾಬ್ದಾರನಲ್ಲಾ......ಇಲ್ಲಿಂದ ಹೊರಡುವ ಮೊದಲೇ ಎಣಿಸಿಕೊಂಡು ಹೋಗಬೇಕು. ಈಗ ಅರ್ಧ ದಾರಿಗೆ ಹೋಗಿಬಂದರೆ ಹೇಗೆ ನಂಬುವುದು...???" ಎಂದು ಕೋಪದಿಂದ ಗದರಿಸಿದ.



6. ಮರುಕ್ಷಣ ಕೇಶವ ಮುಗುಳ್ನಗುತ್ತಾ "ನೀವು ಕೊಟ್ಟ ಹಣದಲ್ಲಿ ಹತ್ತು ರೂಪಾಯಿ ಹೆಚ್ಚಿಗೆ ಬಂದಿದೆ. ತಗೊಳ್ಳಿ...!" ಎಂದು ಹಣವನ್ನು ಅಂಗಡಿಯಾತನ ಕೈಗಿಟ್ಟ. ಅಂಗಡಿಯವ ಅಚ್ಚರಿಪಟ್ಟು ಸುಮ್ಮನೆ ಹುಡುಗನ ಮೇಲೆ ಹರಿಹಾಯ್ದದ್ದಕ್ಕೆ ಪಶ್ಚಾತ್ತಾಪ ಪಟ್ಟು ಕೇಶವನ ಪ್ರಾಮಾಣಿಕತೆಯನ್ನು ಕೊಂಡಾಡಿದ.

ಸ್ವಪಕ್ಷದ ಶಾಸಕರೊಂದಿಗೆ ಡಿ.ಸಿ.ತಮ್ಮಣ್ಣ ಜಂಟಿ ಸುದ್ದಿಗೋಷ್ಠಿ

ನಕಲಿ ರಸಗೊಬ್ಬರ ಮಾರಾಟ ತಡೆಗೆ ಒತ್ತಾಯ



ಮಂಡ್ಯ, ಮಾ.26–ಜಿಲ್ಲೆಯಲ್ಲಿ ನಕಲಿ ರಸಗೊಬ್ಬರ ಮಾರಾಟ ಹೆಚ್ಚಾಗುತ್ತಿದ್ದು, ಕೆಲವು ಅಧಿಕೃತ ಏಜೆಂಟರು ಸುಮಾರು 20 ಕೋಟಿ ರೂ. ಸಬ್ಸಿಡಿ ಹಣ ದುರ್ಬಳಕೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದ್ದು, ಕೂಡಲೇ ಸಹಕಾರಿ ಮತ್ತು ಕೃಷಿ ಇಲಾಖೆಯ ಉನ್ನತ ಅಧಿಕಾರಿಗಳಿಂದ ತನಿಖೆ ನಡೆಸಬೇಕು ಎಂದು ಮಾಜಿ ಸಚಿವ ಹಾಗೂ ಶಾಸಕ ಡಿ.ಸಿ.ತಮ್ಮಣ್ಣ ಒತ್ತಾಯಿಸಿದರು.

ಮದ್ದೂರು ತಾಲೂಕಿನ ಮಂಜುನಾಥೇಶ್ವರ ಫರ್ಟಿಲೈಸರ್ ಮತ್ತು ಸೋಮೇಶ್ವರ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ ಹೆಸರಿನಲ್ಲಿ ಲೈಸೆನ್ಸ್ ಪಡೆದಿರುವ ನಾಲ್ಕು ಮಂದಿ ಸರಬರಾಜುದಾರರು ಯೂರಿಯಾ, ರಸಗೊಬ್ಬರ ದುರ್ಬಳಕೆಯಲ್ಲಿ ತೊಡಗಿದ್ದು, ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ ಸರಬರಾಜು ಮಾಡಿದ್ದಾರೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಶಾಸಕರು ಆರೋಪಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಕಲಬೆರೆಕೆ ರಸಗೊಬ್ಬರ ಸರಬರಾಜು ಹಾಗೂ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದ್ದರೂ, ಸಂಬಂಧಿಸಿದ ಅಧಿಕಾರಿಗಳು ಕಣ್ಮುಚ್ಚಿ ಏಕೆ ಕುಳಿತ್ತಿದ್ದಾರೆ. ಪ್ರಕರಣದಲ್ಲಿ ಕೆಲವು ಕೃಷಿ ಇಲಾಖೆಯ ಅಧಿಕಾರಿಗಳೇ ಶಾಮೀಲಾಗಿದ್ದಾರೆ. ಆದ್ದರಿಂದ ಕೂಡಲೇ ನಕಲಿ ರಸಗೊಬ್ಬರ ಅವ್ಯವಹಾರ ಹಾಗೂ ರಸಗೊಬ್ಬರ ದುರ್ಬಳಕೆ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಈ ಸಂಬಂಧವಾಗಿ ಈಗಾಗಲೇ ಅಧಿವೇಶನದಲ್ಲಿ ಚರ್ಚಿಸಲಾಗಿದ್ದು, ಮುಂದಿನ ಸೋಮವಾರ ಶೂನ್ಯ ವೇಳೆಯಲ್ಲಿ ಸದರಿ ವಿಷಯ ಪ್ರಸ್ತಾಪಕ್ಕೆ ಸಮಯ ನೀಡಿದ್ದಾರೆ. ಅವ್ಯವಹಾರದ ಬಗ್ಗೆ ದಾಖಲಾತಿ ಸಮೇತ ಬಯಲು ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಲಾಗುವುದು ಎಂದರು. ಕಳೆದೊಂದು ವರ್ಷದಿಂದ ಜಿಲ್ಲೆಯ ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ಸೇರಿದಂತೆ ಇತರೆಡೆ ವ್ಯಾಪಕವಾಗಿ ನಕಲಿ ರಸಗೊಬ್ಬರ ಮಾರಾಟ ನಡೆಯುತ್ತಿದ್ದು, ಇದರ ನಿಯಂತ್ರಣಕ್ಕೆ ಸರ್ಕಾರ ಆಸಕ್ತಿ ತೋರಿಸಬೇಕು. ಮದ್ದೂರು ತಾಲೂಕಿನಲ್ಲಿ ಅಧಿಕೃತ ರಸಗೊಬ್ಬರ ಉತ್ಪಾದನೆ ಹಾಗೂ ಪೂರೈಕೆ ಪರವಾನಗಿಯನ್ನು ಒಂದೇ ಕುಟುಂಬದ ಮೂವರಿಗೆ ನೀಡಿರುವ ಹುನ್ನಾರವೇನು? ಎಂದು ಪ್ರಶ್ನಿಸಿದ ಅವರು, ಕಿರಿದಾದ ಜಾಗದಲ್ಲಿ ಸುಸಜ್ಜಿತ ಗೋದಾಮು ಇಲ್ಲದ ವ್ಯಕ್ತಿಗೆ ಪರವಾನಗಿ ನೀಡಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ನಕಲಿಗೊಬ್ಬರ ಮಾರಾಟ ಪ್ರಕರಣ ಸಂಬಂಧ ಸ್ಪಿಕ್ ರಾಸಾಯನಿಕ ಗೊಬ್ಬರ ಕಂಪನಿ ಪ್ರತಿನಿಧಿಗಳು ಏಕೆ ಪ್ರಕರಣ ದಾಖಲು ಮಾಡಿಲ್ಲ. ಇಫ್ಕೋ ರಸಗೊಬ್ಬರ ಕಂಪನಿಯ ಪ್ರತಿನಿಧಿ ಸುಳ್ಳು ದಾಖಲೆ ಸೃಷ್ಟಿಸಿ ವಿಎಸ್‌ಎಸ್‌ಎನ್‌ಬಿಗಳಿಗೆ ವಂಚನೆ ಪಟ್ಟ ಕಟ್ಟಿದ್ದರೂ ಈ ಸಂಬಂಧ ದೂರು ದಾಖಲಿಸಲು ಕೃಷಿ ಇಲಾಖೆ ಅಧಿಕಾರಿಗಳು ಏಕೆ ಮುಂದಾಗಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಕೂಡಲೇ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಪರವಾನಿಗಿ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಶಾಸಕರಾದ ಕೆ.ಸುರೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ರಾಮಚಂದ್ರು ಹಾಗೂ ಮುದಗಂದೂರು ಗ್ರಾಪಂ ಅಧ್ಯಕ್ಷ ಶಂಕರೇಗೌಡ ಉಪಸ್ಥಿತರಿದ್ದರು.

ಜುಲೈ ಮೊದಲ ವಾರದಿಂದಲೇ ಮೈಷುಗರ್ ಪುನರಾರಂಭ

ಜುಲೈ ಮೊದಲ ವಾರದಿಂದಲೇ ಮೈಷುಗರ್ ಕಾರ್ಖಾನೆ ಪುನರಾರಂಭಿಸಿ ಏಜೆನ್ಸಿ ಮೂಲಕ ಕಬ್ಬು ಅರೆಯಲು ಕ್ರಮ ವಹಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿದೆ ಎಂದು ಸುದ್ದಿಗೋಷ್ಠಿಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಮೈಷುಗರ್ ಕಾರ್ಖಾನೆ ಆರಂಭಗೊಳಿಸುವ ಸಂಬಂಧ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಆಯೋಜನೆಗೊಂಡಿದ್ದ ಸಭೆಯಲ್ಲಿ ಮೈಷುಗರ್ ವ್ಯಾಪ್ತಿಯ ಕಬ್ಬನ್ನು ನೋಂದಣಿ ಮಾಡಿಸಿಕೊಂಡು ಜುಲೈನಲ್ಲಿ ಕಾರ್ಖಾನೆ ಆರಂಭಿಸಿ ಕಬ್ಬು ನುರಿಯಲು ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದ್ದಾರೆ ಪ್ರಸ್ತ ಬಜೆಟ್‌ನಲ್ಲಿ ಘೋಷಣೆಯಾಗಿರುವ 50 ಕೋಟಿ ರೂ. ಅನುದಾನದಲ್ಲಿ 21 ಕೋಟಿ ರೂ. ಗಳ ವೆಚ್ಚದಲ್ಲಿ ಯಂತ್ರೋಪಕರಣದ ದುರಸ್ತಿ ಮಾಡಲು ಪೂನಾದ ಕಂಪನಿಯೊಂದು ತಿಳಿಸಿದ್ದು, ಕಬ್ಬು ನುರಿಸಲು ಟೆಂಡರ್ ನೀಡುವ ತೀರ್ಮಾನ ಕೈಗೊಳ್ಳಲಾಗಿದೆ. ಕಾರ್ಖಾನೆ ಆರಂಭವಾದ ನಂತರ ಸಾಧಕ–ಬಾಧಕಗಳ ಚರ್ಚೆ ನಡೆಯಲಿದೆ. ಅಲ್ಲದೆ ಮುಂದಿನ ದಿನಗಳಲ್ಲಿ ಕಾರ್ಖಾನೆಯ ಸುಸ್ಥಿತಿ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಮಂಡ್ಯ ತಹಸೀಲ್ದಾರ್ ಚಂದ್ರಶೇಖರ್ ಶಂ.ಗಾಳಿ ಅಮಾನತು

ಮಂಡ್ಯ, ಮಾ.26(ವಿನಯ್ ಕಾರೇಕುರ)– ಕರ್ತವ್ಯಲೋಪ ಹಿನ್ನೆಲೆಯಲ್ಲಿ ಮಂಡ್ಯ ತಹಸೀಲ್ದಾರ್ ಚಂದ್ರಶೇಖರ್ ಶಂ.ಗಾಳಿ ಅವರನ್ನು ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ.



ಲಂಚಕ್ಕೆ ಬೇಡಿಕೆ, ಪಡಿತರ ಅಕ್ಕಿ ಮೂಟೆಗಳ ನಾಪತ್ತೆ, ಕೋವಿಡ್ ನಿಯಮ ಉಲ್ಲಂಘಿಸಿ ಮಗನ ಬರ್ತ್ ಡೇ ಆಚರಣೆ ಸೇರಿ 13 ಕಾರಣ ನೀಡಿ ತಹಸೀಲ್ದಾರ್ ಅವರನ್ನು ಕಂದಾಯ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಎಸ್. ರಶ್ಮಿ ಅಮಾನತು ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಆದೇಶದ ಪ್ರತಿಯಲ್ಲಿ ಪ್ರಮುಖವಾಗಿ 13 ಅಂಶಗಳನ್ನು ಉಲ್ಲೇಖಿಸಿ, ಜಿಲ್ಲಾಧಿಕಾರಿ ಎಸ್.ಅಶ್ವಥಿ ಮಾ.8ರಂದು ನೀಡಿದ್ದ ಪ್ರಸ್ತಾವನೆ ಪರಿಗಣಿಸಲಾಗಿದೆ. ಚಂದ್ರಶೇಖರ್ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವ ಸಂಬಂಧ ದೋಷಾರೋಪಣಾ ಪಟ್ಟಿ ನೀಡಲಾಗಿದೆ.

ಅಮಾನತಿಗೆ ಕಾರಣಗಳು: ವಸತಿ ಗೃಹದ ವಿದ್ಯುತ್ ಬಾಕಿ ಮೊತ್ತ 9,493 ರೂ. ಪಾವತಿಸದೇ ಸುಳ್ಳು ಮಾಹಿತಿ ನೀಡಿ, ಚೆಸ್ಕಾಂ ಅಧಿಕಾರಿ ವಿರುದ್ಧ ಪೊಲೀಸರಿಗೆ ದೂರು ನೀಡಿ, ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು.

ಹಳೇಬೂದನೂರು ಗ್ರಾಮದಲ್ಲಿ ನಿವೇಶನ ಹಂಚಿಕೆ ಸಂಬಂಧ ಲಂಚಕ್ಕೆ ಬೇಡಿಕೆ ಇಟ್ಟಿರುವುದು. ಕೋವಿಡ್ ಮೂರನೇ ಅಲೆ ವೇಳೆ ಮಗನ ಜನ್ಮದಿನ ಆಚರಿಸಿ ನಿಯಮ ಉಲ್ಲಂಘನೆ. ಮೇಲಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡದೇ ಮನಬಂದಂತೆ ರಜೆ ಹಾಕಿರುವುದು. ಮಂಡ್ಯ ನಗರದ ಸ್ವರ್ಣಸಂದ್ರದಲ್ಲಿ ಸಂಗ್ರಹಿಸಿಟ್ಟಿದ್ದ 525ಕ್ಕೂ ಹೆಚ್ಚು ಪಡಿತರ ಅಕ್ಕಿ ಮೂಟೆ ನಾಪತ್ತೆಯಾದರೂ ದೂರು ದಾಖಲಿಸದಿರುವುದು. ಗುತ್ತಲು ಗ್ರಾಮದ ಸ.ನಂ. 54ರಲ್ಲಿ ಎ/11.21 ಗುಂಟೆ, ಸರ್ಕಾರಿ ಖರಾಬಿನ 0.30 ಗುಂಟೆ ಜಮೀನು ಸಂಬಂಧ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿದಂತೆ ಸರ್ಕಾರಿ ವಕೀಲರನ್ನು ಭೇಟಿ ಮಾಡಿ ಮಾಹಿತಿ ಒದಗಿಸದಿರುವುದು.

ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಆದೇಶ ಪಾಲಿಸದೇ ನ್ಯಾಯಾಂಗ ನಿಂದನೆ. ಪ್ರಕರಣ ದಾಖಲಾಗುವುದರ ಜೊತೆಗೆ ಮತ್ತೊಮ್ಮೆ ಅಫಿಡೆವಿಟ್ ಸಲ್ಲಿಸುವ ಸಂದರ್ಭ ಸೃಷ್ಟಿಸಿರುವುದು. ಚುನಾವಣಾ ಕರ್ತವ್ಯದ ಬಗ್ಗೆ ನಿರಾಸಕ್ತಿ ತೋರಿರುವುದು. ಸಕಾಲದಲ್ಲಿ ಭೂ ಕಂದಾಯದ ಅರ್ಜಿ ವಿಲೇವಾರಿ ಮಾಡದಿರುವುದು. ಎಸ್ಸಿ, ಎಸ್ಟಿ ಕಾಯ್ದೆ 1978ರಡಿ ಮಂಜೂರಾಗಿರುವ ಜಮೀನುಗಳ ನೋಂದಣಿ ಹಾಗೂ ಪರಭಾರೆ ನಿಯಂತ್ರಿಸುವ ಸಂಬಂಧ ತಂತ್ರಾಂಶದಲ್ಲಿ ಆಗಿರುವ ಸಮಸ್ಯೆ ಕುರಿತು ದೃಢೀಕರಣ ನೀಡುವ ಬಗ್ಗೆ ಕ್ರಮ ವಹಿಸಿಲ್ಲ. ಮುಟೇಷನ್ ಪ್ರಕರಣಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುತ್ತಿಲ್ಲ. ತಾಲೂಕು ಕಚೇರಿ ಕಾರ್ಯ ನಿರ್ವಹಣೆಯಲ್ಲಿ ಹಲವು ದೋಷ ಕಂಡುಬಂದಿರುವುದು. ಈ ಆರೋಪಗಳ ಹಿನ್ನೆಲೆಯಲ್ಲಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಾಗಾಗಿ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸದ್ಯ ಚಂದ್ರಶೇಖರ್ ಅವರ ಅಮಾನತಿನಿಂದ ತೆರವಾಗಿರುವ ಸ್ಥಾನಕ್ಕೆ ಕೆ.ಆರ್.ಪೇಟೆ ತಹಸೀಲ್ದಾರ್ ಶ್ವೇತಾ ಅವರನ್ನು ಹೆಚ್ಚುವರಿಯಾಗಿ ನೇಮಿಸಲಾಗಿದೆ.

ಕಾಲು ಜಾರಿ ನದಿಗೆ ಬಿದ್ದು ಯುವಕ ಸಾವು

ಶ್ರೀರಂಗಪಟ್ಟಣ, ಮಾ.26(ವಿನಯ್‌ಕಾರೇಕುರ)– ಆಕಸ್ಮಿಕವಾಗಿ ಕಾಲು ಜಾರಿ ಕಾವೇರಿ ನದಿಗೆ ಬಿದ್ದು ಯುವಕನೋರ್ವ ಮೃತಪಟ್ಟಿರುವ ಘಟನೆ ತಾಲೂಕಿನ ಮಂಡ್ಯದ ಕೊಪ್ಪಲಿನ ಕಾವೇರಿ ಬೋರೆ ದೇವಾಲಯದ ಬಳಿ ನಡೆದಿದೆ.

ಪಾಂಡವಪುರ ತಾಲೂಕಿನ ಟಿ.ಎಸ್ ಛತ್ರ ಗ್ರಾಮದ ನಿವಾಸಿ ಸಿದ್ದಪ್ಪ ಪುತ್ರ ರಮೇಶ್(26) ಮೃತ ಯುವಕ. ಕಾವೇರಿ ಬೋರೆ ದೇವಾಲಯಕ್ಕೆ ಕುಟುಂಬಸ್ಥರೊಂದಿಗೆ ಬಂದಿದ್ದ ಈ ಯುವಕ ನದಿಯಲ್ಲಿ ಇಳಿದಿದ್ದಾನೆ. ಈ ವೇಳೆ ಈಜಲು ಬರದೆ ನೀರಲ್ಲಿ ಮುಳುಗಿ ಸಾವನ್ನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅರಕೆರೆ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲಿಸಿದರು. ಶ್ರೀರಂಗಪಟ್ಟಣ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಟಿ.ಹೆಚ್.ಕೃಷ್ಣ ನೇತೃತ್ವದಲ್ಲಿ ಸಿಬ್ಬಂದಿ ಶ್ರೀಶೈಲ ಕುರಿ, ರವಿ.ಎಸ್, ಶಿವಾನಂದ ಒಂದು ಗಂಟೆ ಕಾಲ ಕಾರ್ಯಾಚರಣೆ ನಡೆಸಿ, ಶವವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಈ ಸಂಬಂಧ ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತದಲ್ಲಿ ಮನ್‌ಮುಲ್ ನಿರ್ದೇಶಕನಿಗೆ ಗಾಯ



ಮೇಲುಕೋಟೆ, ಮಾ.26– ಕಾರು ಹಾಗೂ ಸಾರಿಗೆ ಬಸ್ ಡಿಕ್ಕಿ ಸಂಭವಿಸಿ ಮನ್‌ಮುಲ್ ನಿರ್ದೇಶಕರೊಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ಪಾಂಡವಪುರ ತಾಲೂಕಿನ ಮೇಲುಕೋಟೆಯ ಕಣಿವೆಯ ಬಳಿ ನಡೆದಿದೆ.

ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರ ಗಂಭೀರವಾಗಿ ಗಾಯಗೊಂಡವರಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೇಲುಕೋಟೆ ಕಡೆಯಿಂದ ಬರುತ್ತಿದ್ದ ಸಾರಿಗೆ ಸಂಸ್ಥೆಗೆ ಸೇರಿದ ಒಪ್ಪಂದದ ಬಸ್ ಹಾಗೂ ಜಕ್ಕನಹಳ್ಳಿ ಕಡೆಯಿಂದ ತೆರಳುತ್ತಿದ್ದ ರಾಮಚಂದ್ರ ಅವರಿದ್ದ ಕಾರು ಮೇಲುಕೋಟೆ ಸಮೀಪ ಕಣಿವೆಯ ಬಳಿ ಮುಖಾಮುಖಿ ಡಿಕ್ಕಿಯಾಗಿದೆ. ಪರಿಣಾಮ ಕಾರು ಚಾಲಕ ಸೇರಿದಂತೆ ರಾಮಚಂದ್ರ ಅವರು ಕೂಡ ಗಂಭೀರವಾಗಿ ಗಾಯಗೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಸ್ಥಳೀಯ ಮುಖಂಡ ಬಲರಾಮೇಗೌಡ ಮತ್ತು ಶೇಖರ್ ಅಪಘಾತದಿಂದ ಗಾಯಗೊಂಡಿದ್ದ ರಾಮಚಂದ್ರ ಮತ್ತು ಚಾಲಕನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಮೇಲುಕೋಟೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಕಾರು ಮತ್ತು ಕೆಎಸ್‌ಆರ್‌ಟಿಸಿ ಬಸ್ ಅನ್ನು ವಶಕ್ಕೆ ಪಡಿದಿದ್ದಾರೆ. ಅಪಘಾತದ ರಭಸಕ್ಕೆ ರಾಮಚಂದ್ರ ಪ್ರಯಾಣಿಸುತ್ತಿದ್ದ ಕಾರು ನ ಜ್ಜುಗುಜ್ಜಾಗಿದೆ. ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗಿಲ್ಲ.

ಪತಿಯಿಂದ ಪತ್ನಿ ಹತ್ಯೆ

ಶ್ರೀರಂಗಪಟ್ಟಣ, ಮಾ.26(ವಿನಯ್‌ಕಾರೇಕುರ)– ದೊಣ್ಣೆಯಿಂದ ಹಲ್ಲೆ ನಡೆಸಿ ಪತ್ನಿಯ ಹತ್ಯೆ ಮಾಡಿರುವ ಪ್ರಕರಣ ತಾಲೂಕಿನ ಗಣಂಗೂರು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಪ್ರಭಾವತಿ(40) ಹತ್ಯೆಯಾದ ಪತ್ನಿ. ಚಂದ್ರಶೇಖರ್(46) ಹತ್ಯೆ ಆರೋಪಿ. ದಂಪತಿ ನಡುವೆ ಆರಂಭವಾದ ಕಲಹದ ವೇಳೆ ಪತ್ನಿ ಮೇಲೆ ಚಂದ್ರಶೇಖರ್ ದೊಣ್ಣೆಯಿಂದ ಹಲ್ಲೆ ಮಾಡಿದ್ದಾನೆ ಎನ್ನಲಾಗಿದೆ. ಇದರಿಂದ ಪ್ರಭಾವತಿ ಅವರಿಗೆ ಬಲವಾದ ಪೆಟ್ಟು ಬಿದ್ದು ಸಾವನ್ನಪ್ಪಿರಬಹುದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ, ಪರಿಶೀಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಪ್ರಭಾವತಿ ಪುತ್ರ ನಂಜುಂಡನ ದೂರಿನ ಮೇರೆಗೆ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಂಬಾಡಿಯಲ್ಲಿ ಇಂದು ಶ್ರೀ ಹಿರಿದೇವಮ್ಮ ಚೌಡೇಶ್ವರಿ ಜಾತ್ರೆ

ಪಾಂಡವಪುರ, ಮಾ. 26– ಪಾಂಡವಪುರ ತಾಲೂಕು ಕನ್ನಂಬಾಡಿ ಗ್ರಾಮದ ಶ್ರೀ ಹಿರಿದೇವಮ್ಮ ಚೌಡೇಶ್ವರಿ ಜಾತ್ರೆ ನಾಳೆ (ಮಾ. 27) ವಿಜೃಂಭಣೆಯಿಂದ ನಡೆಯಲಿದೆ.

ಮನುಷ್ಯ ಮರಣ ಹೊಂದಿ ಮತ್ತೆ ಹುಟ್ಟಿ ಬರುತ್ತಾನೆ, ಬಾಳೆ ನಾರಿನ ಬತ್ತಿಯೊಂದಿಗೆ ಎಳೆನೀರಿನಿಂದ ದೀಪಾ ಉರಿಯುತ್ತದೆ ಎಂಬ ಪ್ರತೀತಿ ಈ ಹಬ್ಬಕ್ಕಿದೆ. ಈ ದೀಪವು ಸತತವಾಗಿ 15 ದಿನ ಉರಿಯುತ್ತದೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಭಾನುವಾರ ಕಾವೇರಿ ನದಿಯಿಂದ ದೇವರ ವಿಗ್ರಹಗಳನ್ನು ಪೂಜೆ ಮಾಡಿ ಪಲ್ಲಕ್ಕಿಯಲ್ಲಿ ತರಲಾಗುತ್ತದೆ.

ಈ ವೇಳೆ ನದಿ ದಡದಲ್ಲೂ ತಂಬಿಟ್ಟು ಮತ್ತು ಬಾಳೆಹಣ್ಣು ಪ್ರಸಾದವಾಗಿ ನೀಡಲಾಗುತ್ತದೆ. ರಾತ್ರಿ ರಂಗ ಕುಣಿತ ಜಾತ್ರೆಗೆ ಮೆರಗು ನೀಡುತ್ತದೆ. ಮಧ್ಯರಾತ್ರಿಯಿಂದ ಬಲಿ ಬೀಳಲಿದ್ದು, ಮುಂಜಾನೆ ದೇವರ ವಿಗ್ರಹಗಳನ್ನು ಹೊತ್ತ ಗುಡ್ಡಪ್ಪನವರುಗಳು ಬಲಿ ಬಿದ್ದ ಮನುಷ್ಯನನ್ನು ನೋಡುತ್ತಾರೆ. ನಂತರ ಬಲಿರಂಗದ ಹತ್ತಿರಕ್ಕೆ ತಂದ ನಂತರ ಮತ್ತೇ ಬಲಿ ಬಿದ್ದ ಮನುಷ್ಯನನ್ನು ಬಲಿ ಕಲ್ಲು ಎಂಬಲ್ಲಿಗೆ ಕೊಂಡೊಯ್ದಾಗ ಆತನಿಗೆ ಮತ್ತೇ ಜೀವ ಬರುತ್ತದೆ ಎಂಬುದು ಪ್ರತೀತಿ. ಈ ಹಬ್ಬವನ್ನು ಎಲ್ಲಾ ಜಾತಿ, ಜನಾಂಗದವರೂ ಸೌಹಾರ್ದಯುತವಾಗಿ ಆಚರಿಸುತ್ತಾರೆ ಎಂದು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರೂ ಆದ ಪಾಂಡವಪುರ ತಾಲೂಕು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸದಸ್ಯ ಸುರೇಶ್ ಮತ್ತು ಗ್ರಾಪಂ ಮಾಜಿ ಸದಸ್ಯ ಕೆ.ಎನ್. ಪ್ರಕಾಶ್ ತಿಳಿಸಿದ್ದಾರೆ.

ನ್ಯಾಯ ಕೊಡಿಸುವ ಕೆಲಸಕ್ಕೆ ಬಂದವರು ಸನ್ಯಾಸಿಯಂತೆ ಪರಿತ್ಯಾಗ ಮಾಡಬೇಕು

ಉಚಿತ ತರಬೇತಿ ಕಾರ್ಯಾಗಾರ ಸಮಾರೋಪದಲ್ಲಿ ನ್ಯಾಯಾಧೀಶರಾದ ವಿರೂಪಾಕ್ಷಯ್ಯ ಕಿವಿಮಾತು



ಮೈಸೂರು, ಮಾ.26(ಎಂಕೆ)– ನೊಂದವರಿಗೆ ನ್ಯಾಯ ಕೊಡಿಸುವ ಕಾನೂನು ಕೆಲಸಕ್ಕೆಂದು ಬಂದ ಮೇಲೆ ಸನ್ಯಾಸಿಯಂತೆ ಎಲ್ಲವನ್ನೂ ಪರಿತ್ಯಾಗ ಮಾಡಬೇಕಾಗುತ್ತದೆ ಎಂದು ಮೈಸೂರಿನ ಎರಡನೇ ಪ್ರಧಾನ ಹೆಚ್ಚುವರಿ ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಹೆಚ್.ಎಂ. ವಿರೂಪಾಕ್ಷಯ್ಯ ಕಿವಿಮಾತು ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಮೈಸೂರು ವಕೀಲರ ಸಂಘ ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಸಂಯುಕ್ತಾಶ್ರಯದಲ್ಲಿ ನಡೆದ 'ಜಿಲ್ಲಾ ನ್ಯಾಯಾಧೀಶರ ಹುದ್ದೆ ಹಾಗೂ ಸರ್ಕಾರಿ ಸಹಾಯಕ ಅಭಿಯೋಜಕರ ಹುದ್ದೆಯ ಪರೀಕ್ಷೆಗಾಗಿ 10 ದಿನಗಳ ಉಚಿತ ತರಬೇತಿ ಕಾರ್ಯಾಗಾರದ' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಕೀಲರು, ನ್ಯಾಯಾಧೀಶರು ಒಟ್ಟಿಗೆ ಸೇರಿ ಕಾನೂನು ಕೆಲಸ ಮಾಡಬೇಕು. ಜೊತೆಗೆ ನಿರಂತರ ಓದುವ ಅಭ್ಯಾಸ ಇರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ವಿಶೇಷ ಅತಿಥಿಯಾಗಿ ಆಗಮಿಸಿದ್ದ ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ನ್ಯಾಯಾಂಗ ತರಬೇತಿ ಸಂಸ್ಥೆಯ ಉಪನ್ಯಾಸಕರು ಆದ ಎಸ್.ಆರ್.ಸೋಮಶೇಖರ್ ಮಾತನಾಡಿ, ಮೈಸೂರು ವಕೀಲರ ಸಂಘ ಹಾಗೂ ಲಾಗೈಡ್ ಹಮ್ಮಿಕೊಂಡಿರುವ ಉಚಿತ ಕಾರ್ಯಾಗಾರ ಶ್ಲಾಘನೀಯ ಕೆಲಸವಾಗಿದೆ. ಕಾರ್ಯಾಗಾರ ಉದ್ಘಾಟನೆ ವೇಳೆ ಇದ್ದಿದ್ದಕ್ಕಿಂತ ಸಮಾರೋಪ ಕಾರ್ಯಕ್ರಮದಲ್ಲಿ ಸಾಕಷ್ಟು ಮಂದಿ ವಕೀಲರು ಹಾಗೂ ಸಂಘ ಮತ್ತು ಲಾಗೈಡ್‌ನ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಇಂತಹ ಉಚಿತ ತರಬೇತಿ ಕಾರ್ಯಾ ಗಾರಗಳು ನಿರಂತರವಾಗಿ ನಡೆಯು ತ್ತಿರಲಿ ಎಂದು ಶುಭ ಕೋರಿದರು.

ವಕೀಲ ಹೆಚ್.ಜಿ.ಕೃಷ್ಣಮೂರ್ತಿ ಮಾತನಾಡಿ, ಯಾವುದೇ ಪ್ರತಿಫಲಾಕ್ಷೆಯಿಲ್ಲದೆ ಕಾರ್ಯಾಗಾರ ನಡೆಸಲಾಗಿದೆ. ಕೇವಲ ಕಾರ್ಯಾಗಾರ ಮಾತ್ರವಲ್ಲ. ಪ್ರತಿದಿನ ಊಟ ತಿಂಡಿ ಕಾಫಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಇದರಿಂದ ತುಂಬಾ ಅನುಕೂಲವಾಗಿದೆ. ಲಾ ಗೈಡ್‌ನ ವೆಂಕಟೇಶ್ ಅವರು, ಗ್ರಾಮೀಣ ಭಾಗದಿಂದ ಬಂದವರಾಗಿದ್ದು, ಶ್ರಮ ಜೀವಿ. ಈಗಾಗಿ ಅವರಿಗೆ ನಮ್ಮ ಕಷ್ಟಗಳ ಅರಿವಿದೆ. ಆದ್ದರಿಂದ ತಾವೇ ಖುದ್ದಾಗಿ ನಿಂತು ಮುತುವರ್ಜಿಯಿಂದ ಎಲ್ಲವನ್ನೂ ಮಾಡಿದ್ದಾರೆ. ಅವರು ನಮ್ಮ ವಕೀಲರ ಬಗ್ಗೆ ಹೊಂದಿರುವ ಕಾಳಜಿ ಅಪಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಸಂಪಾದಕರು ಹಾಗೂ ಹಿರಿಯ ವಕೀಲ ಹೆಚ್.ಎನ್ ವೆಂಕಟೇಶ್ ಅವರನ್ನು ಅಭಿನಂದಿಸಲಾಯಿತು. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್. ಉಮೇಶ್, ಹಿರಿಯ ವಕೀಲರಾದ ಎಂ.ಎಸ್. ಸಾವಿತ್ರಿ, ಎಂ.ಡಿ. ಹರೀಶ್ ಕುಮಾರ್ ಹೆಗ್ಡೆ, ಜಿ.ವಿ. ರಾಮಮೂರ್ತಿ, ಎಸ್.ಲೋಕೇಶ್, ಆರ್. ಗಿರಿಜೇಶ್ ಮತ್ತಿತರರು ಉಪಸ್ಥಿತರಿದ್ದರು.

ಕೊಲ್ಲೂರು ಮೂಕಾಂಬಿಕೆಯ 'ಸಲಾಂ' ಮಂಗಳಾರತಿ ರದ್ದಿಗೆ ಆಗ್ರಹ

ಉಡುಪಿ, ಮಾ.26–ಕೊಲ್ಲೂರು ಮೂಕಾಂಬಿಕೆ ದೇವಸ್ಥಾನದ 'ಸಲಾಂ' ಮಂಗಳಾರತಿಯನ್ನು ರದ್ದುಪಡಿಸುವಂತೆ ವಿಶ್ವ ಹಿಂದೂ ಪರಿಷತ್ ಮುಖಂಡರು ದೇವಸ್ಥಾನದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಮನವಿ ಮಾಡಿದ್ದಾರೆ.



ಧಾರ್ಮಿಕ ಸ್ಥಳಗಳಲ್ಲಿ ಮುಸ್ಲಿಂ ಬಾಂಧವರಿಗೆ ವ್ಯಾಪಾರಕ್ಕೆ ಅವಕಾಶ ನೀಡದಂತೆ ನಿರ್ಬಂಧ ಹೇರಿರುವ ಬೆನ್ನ ಹಿಂದೆಯೇ ಟಿಪ್ಪು ಹೆಸರಿನಲ್ಲಿ ನಡೆಯುತ್ತಿರುವ 'ಸಲಾಂ' ಮಂಗಳಾರತಿಯನ್ನು ರದ್ದುಪಡಿಸುವಂತೆ ಒತ್ತಾಯಿಸಿದ್ದು, ಅಧಿಕಾರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಕೊಲ್ಲೂರು ಮೂಕಾಂಬಿಕೆ ದೇವಸ್ಥಾನದಲ್ಲಿ ಪ್ರತಿದಿನ ರಾತ್ರಿ 8 ಗಂಟೆಗೆ ಈ ಮಂಗಳಾರತಿ ಮತ್ತು ಪೂಜೆ ನಡೆಯುತ್ತಿದೆ. ಇದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಟಿಪ್ಪು ಹೆಸರಿನಲ್ಲಿರುವ 'ಸಲಾಂ' ತೆಗೆದುಹಾಕಿ ಬರೀ ಮಂಗಳಾರತಿ ಮಾಡುವಂತಾಗಬೇಕು ಎಂದು ವಿಹೆಚ್‌ಪಿ ಸಲ್ಲಿಸಿರುವ ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ. 'ಸಲಾಂ' ಹೆಸರಿನ ಮಂಗಳಾರತಿಯಿಂದ ಹಿಂದೂ ಭಕ್ತರ ಮನಸ್ಸಿಗೆ ನೋವಾಗುತ್ತಿದೆಯಲ್ಲದೆ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುತ್ತಿರುವುದರಿಂದ ಇದನ್ನು ರದ್ದುಪಡಿಸಬೇಕು ಎಂದು ಮನವಿ ಪತ್ರದಲ್ಲಿ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ಅವರಿಗೆ ಮನವಿ ಸಲ್ಲಿಸಿದ್ದಾರೆ ಎನ್ನಲಾಗಿದೆ. ಇದೇ ವೇಳೆ ಮಾತನಾಡಿದ ವಿಹೆಚ್‌ಪಿ ಮುಖಂಡರು ಟಿಪ್ಪುವಿನ ಬಗ್ಗೆ ಟೀಕಾಪ್ರಹಾರ ನಡೆಸಿದರು.

ಯುಗಾದಿಗೆ; 600 ಹೆಚ್ಚುವರಿ ಬಸ್ ವ್ಯವಸ್ಥೆ

ಬೆಂಗಳೂರು: ಯುಗಾದಿ ಹಬ್ಬದ ಹಿನ್ನೆಲೆ ಪ್ರಯಾಣಿಕರಿಗೆ ಅನು ಕೂಲವಾಗಲೆಂದು ಸಾರಿಗೆ ಇಲಾಖೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿದೆ. KRSTC ಮಹತ್ವದ ಕ್ರಮ ಕೈಗೊಂಡಿದ್ದು, ಸುಮಾರು 600 ಹೆಚ್ಚುವರಿ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿದೆ. ಈ ಮೂಲಕ ಪ್ರಯಾಣಿಕರಿಗೆ ಸಿಹಿಸುದ್ದಿ ನೀಡಿದೆ. ಬೆಂಗಳೂರಿನಿಂದ ಧರ್ಮಸ್ಥಳ, ಸುಬ್ರಹ್ಮಣ್ಯ, ಮಂಗಳೂರು, ಮೈಸೂರು, ಶಿವಮೊಗ್ಗ, ತಮಿಳುನಾಡು ಹಾಗೂ ಕೇರಳ ಕಡೆಗೆ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ. ಆನ್ಲೈನ್ ಮೂಲಕ ಮುಂಗಡ ಟಿಕೆಟ್ ಬುಕ್ಕಿಂಗ್ ಸೌಲಭ್ಯ ಕಲ್ಪಿಸಲಾಗಿದೆ.


ಇಂದು ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಕಾನೂನು ಘಟಕ ಉದ್ಘಾಟನೆ

ಮೈಸೂರು, ಮಾ.26– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಕಾನೂನು ಘಟಕ ನಾಳೆ(ಮಾ.27) ಉದ್ಘಾಟನೆಗೊಳ್ಳಲಿದೆ.

ಮೈಸೂರಿನ ಕುವೆಂಪುನಗರ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ಸಂಜೆ 6.30ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ಜಸ್ಟಿಸ್ ಎಸ್.ಆರ್. ಬನ್ನೂರ್ ಮಠ್ ಘಟಕದ ಉದ್ಘಾಟನೆ ನೆರವೇರಿಸಲಿದ್ದಾರೆ. ನಿವೃತ್ತ ಉಪಲೋಕಾಯುಕ್ತ ಜಸ್ಟಿಸ್ ಸುಭಾಷ್ ಬಿ.ಆಡಿ, ಮಹಾಸಭಾ ಮಹಾ ಪ್ರಧಾನ ಕಾರ್ಯದರ್ಶಿಯೂ ಆದ ಶಾಸಕ ಈಶ್ವರ್ ಬಿ.ಖಂಡ್ರೆ, ಕರ್ನಾಟಕ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಸಿ.ಎಂ. ಜಗದೀಶ್, ಹಾಲಿ ಉಪಾಧ್ಯಕ್ಷ ಬಿ.ಆರ್.ಚಂದ್ರಮೌಳಿ, ಮಹಾಸಭಾ ಕಾರ್ಯದರ್ಶಿ ಹೆಚ್. ರೇಣುಕಾ ಪ್ರಸನ್ನ, ಕೋಶಾಧ್ಯಕ್ಷ ವರುಣಾ ಮಹೇಶ್, ಜಿಲ್ಲಾ ಅಧ್ಯಕ್ಷ ಎಸ್.ಶಿವಮೂರ್ತಿ ಕಾನ್ಯ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಟಿ.ಎಸ್.ಲೋಕೇಶ್, ವಕೀಲ ಮಹದೇವ ಪ್ರಸಾದ್ ಮತ್ತಿತರರು ಭಾಗವಹಿಸಲಿದ್ದಾರೆ.

ಚಾಮುಂಡಿಬೆಟ್ಟದಲ್ಲೂ 'ವ್ಯಾಪಾರ ಧರ್ಮ'

ಮೈಸೂರು,ಮಾ.26–ಕರಾವಳಿಯಿಂದ ಆರಂಭವಾದ ಧಾರ್ಮಿಕ ಸ್ಥಳಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ರಾಜ್ಯಾದ್ಯಂತ ಹಬ್ಬಿದ್ದು, ಬೆಂಗಳೂರಿನ ಕರಗ ಮಹೋತ್ಸವ ಮತ್ತು ಮೈಸೂರಿನ ಚಾಮುಂಡಿ ಬೆಟ್ಟಕ್ಕೂ ಕಾಲಿಟ್ಟಿದೆ.



ಈಗಾಗಲೇ ಉಡುಪಿ, ಮಂಗಳೂರು, ಶಿವಮೊಗ್ಗ, ಪುತ್ತೂರು ಸೇರಿದಂತೆ ರಾಜ್ಯದ ನಾನಾ ಕಡೆ ಧಾರ್ಮಿಕ ಸ್ಥಳಗಳ ವ್ಯಾಪ್ತಿಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಲಾಗಿದ್ದು, ಮೈಸೂರು, ಬೆಂಗಳೂರು, ಧಾರವಾಡ ಮತ್ತು ಮಂಡ್ಯ ಸೇರಿದಂತೆ ನಾನಾ ಕಡೆಗಳಲ್ಲೂ ಈ ನಿರ್ಬಂಧ ಹೇರುವಂತೆ ಒತ್ತಾಯಗಳು ಕೇಳಿ ಬಂದಿದೆ. ಮುಂದಿನ ದಿನಗಳಲ್ಲಿ ಬೆಂಗಳೂರಲ್ಲಿ ನಡೆಯುವ ಬೃಹತ್ ಕರಗ ಮಹೋತ್ಸವದಲ್ಲಿ ಮುಸ್ಲಿಂ ಬಾಂಧವರಿಗೆ ವ್ಯಾಪಾರ ಮಾಡಲು ಅವಕಾಶ ನೀಡಬಾರದು ಎಂಬ ಒತ್ತಡಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಕರಗ ಮಹೋತ್ಸವ ಆಡಳಿತ ಮಂಡಳಿಯು ಈ ಬಗ್ಗೆ ಗಂಭೀರ ಚಿಂತನೆ ನಡೆಸಿದೆ ಎಂದು ತಿಳಿದು ಬಂದಿದೆ. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಈಗಾಗಲೇ ನಾಲ್ಕೈದು ಮುಸ್ಲಿಂ ವ್ಯಾಪಾರಿಗಳು ವ್ಯಾಪಾರ ನಡೆಸುತ್ತಿದ್ದು, ಇದಕ್ಕೆ ಅವಕಾಶ ನೀಡದಂತೆ ವಿಶ್ವ ಹಿಂದೂ ಪರಿಷತ್ ಮುಖಂಡರು ಧಾರ್ಮಿಕ ದತ್ತಿ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ. ಇದೇ ರೀತಿ ಮಂಡ್ಯ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳಲ್ಲಿಯೂ ಮುಸ್ಲಿಂ ವ್ಯಾಪಾರಿಗಳಿಗೆ ಯಾವುದೇ ಕಾರಣಕ್ಕೂ ಅವಕಾಶ ನೀಡದಂತೆ ವಿಹೆಚ್‌ಪಿ ಮುಖಂಡರು ಮನವಿ ಮಾಡಿದ್ದು, ಇದೂ ಸಹ ಮುಸ್ಲಿಂ ವ್ಯಾಪಾರಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿವೆ.

'ದಿ ಮೋದಿ ಸ್ಟೋರಿ' ವೆಬ್‌ಸೈಟ್ ಉದ್ಘಾಟಿಸಿದ ಮಹಾತ್ಮಾ ಗಾಂಧಿ ಮೊಮ್ಮಗಳು

ನವದೆಹಲಿ, ಮಾ. 26– ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಜೀವನದ ಕಥೆಗಳ ಸಂಗ್ರಹವಾಗಿರುವ 'ದಿ ಮೋದಿ ಸ್ಟೋರಿ' ಎಂಬ ವೆಬ್‌ಸೈಟ್ ಅನ್ನು ಮಹಾತ್ಮಾ ಗಾಂಧಿಯವರ ಮೊಮ್ಮಗಳು ಸುಮಿತ್ರಾ ಗಾಂಧಿ ಕುಲಕರ್ಣಿ ಅವರು ಶನಿವಾರ ಉದ್ಘಾಟಿಸಿದ್ದಾರೆ.

'ಮೋದಿ ಸ್ಟೋರಿ' ನರೇಂದ್ರ ಮೋದಿಯವರ ಜೀವನದ ಸ್ಫೂರ್ತಿದಾಯಕ ಕ್ಷಣಗಳನ್ನು ಒಟ್ಟುಗೂಡಿಸುವ ಸ್ವಯಂ–ಚಾಲಿತ ಉಪಕ್ರಮವಾಗಿದೆ. ಮೋದಿಯೊಂದಿಗೆ ನಿಕಟ ಸಂಪರ್ಕ ಹೊಂದಿರುವ ಜನರು ಮೋದಿಯವರ ಕಾರ್ಯಗಳ ಬಗ್ಗೆ ಮೆಲುಕು ಹಾಕಿದ ನೆನಪುಗಳನ್ನು ಈ ವೆಬ್'ಸೈಟ್ ಒಳಗೊಂಡಿರಲಿದೆ. ಸಮಾರಂಭದಲ್ಲಿ ಒಲಿಂಪಿಕ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರೂ ಕೂಡ ಭಾಗಿಯಾಗಿದ್ದು, ವೆಬ್‌ಸೈಟ್ ಕುರಿತು ಮಾತನಾಡಿದ ಅವರು, ನರೇಂದ್ರ ಮೋದಿಯವರೊಂದಿಗಿನ ಸಂವಾದದ ವೇಳೆ ಅವರ ಸರಳತೆಗೆ ಮೈಮರೆತಿದ್ದೆ, ನಾನು ದೇಶದ ಪ್ರಧಾನಿಯೊಂದಿಗೆ ಇದ್ದೇನೆ ಎಂದು ನನಗೆ ಅನಿಸಲಿಲ್ಲ ಎಂದು ಹೇಳಿದ್ದಾರೆ. ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಟ್ವೀಟ್ ಮಾಡಿ, ಪ್ರಧಾನಿ ಮೋದಿಯವರ ಜೀವನ ಪಯಣ ಮತ್ತು ಸಾರ್ವಜನಿಕ ಜೀವನದಲ್ಲಿ ಅವರು ಮಾಡಿದ ಆಸಕ್ತಿದಾಯಕ ಕಾರ್ಯಗಳು ಮತ್ತು ಅವರ ಜೀವನದಲ್ಲಿ ನಡೆದಿರುವ ಸ್ವಾರಸ್ಯಕರ ಘಟನೆಗಳನ್ನು ತಿಳಿದುಕೊಳ್ಳಲು Modistory.in ಅನ್ನು ವೀಕ್ಷಣೆ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

ಐಪಿಎಲ್: ಉದ್ಘಾಟನಾ ಪಂದ್ಯದಲ್ಲಿ ಕೆಕೆಆರ್‌ಗೆ ಗೆಲುವು

ಮುಂಬೈ, ಮಾ.26– 15ನೇ ಆವೃತ್ತಿಯ ಐಪಿಎಲ್ ಪಂದ್ಯಾವಳಿಗೆ ಶನಿವಾರ ಚಾಲನೆ ದೊರೆತಿದ್ದು, ಉದ್ಘಾಟನಾ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ 6 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಈ ಮೂಲಕ ಕಳೆದ ವರ್ಷ ಯುಎಇನಲ್ಲಿ ನಡೆದ ಐಪಿಎಲ್ ಫೈನಲ್‌ನಲ್ಲಿ ಎದುರಾದ ಸೋಲಿಗೆ ಸೇಡು ತೀರಿಸಿಕೊಂಡಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 28 ರನ್ ಆಗುವಷ್ಟರಲ್ಲೇ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ರಾಬಿನ್ ಉತ್ತಪ್ಪ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 28 ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ ಅಂಬಟಿ ರಾಯುಡು 15 ರನ್ ಗಳಿಸಿದ್ದ ವೇಳೆ ರನೌಟ್ ಬಲೆಗೆ ಬಿದ್ದರು. ಈ ವೇಳೆ ಜೊತೆಯಾದ ನಾಯಕ ರವೀಂದ್ರ ಜಡೇಜಾ ಮತ್ತು ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿ ತಂಡದ ಮೊತ್ತವನ್ನು 100 ಗಡಿ ದಾಟಿಸಿದರು. ಇನ್ನಿಂಗ್ಸ್‌ನ ಕೊನೆಯಲ್ಲಿ ಅಬ್ಬರಿಸಿದ ಧೋನಿ (38 ಎಸೆತ, 7 ಬೌಂಡರಿ, 1 ಸಿಕ್ಸರ್, 50ರನ್) ಅಜೇಯ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಮತ್ತೊಂದೆಡೆ ನಾಯಕ ಜಡೇಜಾ 26 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಚೆನ್ನೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 131 ರನ್ ಗಳಿಸಿತು. ಕೆಕೆಆರ್ ಪರ ಉಮೇಶ್ ಯಾದವ್ 2, ವರುಣ್ ಚಕ್ರವರ್ತಿ ಆಂಡ್ರೆ ರಸೆಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.



ಇಂದಿನ ಪಂದ್ಯಗಳು
ಮುಂಬೈ ಇಂಡಿಯನ್ಸ್/ಡೆಲ್ಲಿ ಕ್ಯಾಪಿಟಲ್ಸ್
ಮಧ್ಯಾಹ್ನ: 3.30ಕ್ಕೆ
ರಾಯಲ್ ಚಾಲೆಂಜರ್ಸ್ ಬೆಂಗಳೂರು/ಪಂಜಾಬ್ ಕಿಂಗ್ಸ್
ಸಂಜೆ: 7.30ಕ್ಕೆ

132 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್, ಅಜಿಂಕ್ಯಾ ರಹಾನೆ 44 ಹಾಗೂ 25 ರನ್ ಗಳಿಸಿದ ಸ್ಯಾಮ್ಸ್ ಬಿಲ್ಲಿಂಗ್ಸ್ ಅವರ ಆಕರ್ಷಕ ಬ್ಯಾಟಿಂಗ್ ನೆರವಿನಿಂದ 18.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 133 ರನ್ ಗಳಿಸುವ ಮೂಲಕ ಗುರಿ ತಲುಪಿತು. ಉಳಿದಂತೆ ವೆಂಕಟೇಶ್ ಅಯ್ಯರ್ 16, ನಿತಿಶ್ ರಾಣಾ 21, ಶ್ರೇಯಸ್ ಅಯ್ಯರ್ 20 ರನ್ ಗಳಿಸಿದರು. ಚೆನ್ನೈ ಪರ ಡ್ವೇನ್ ಬ್ರಾವೋ 3, ಮಿಚೆಲ್ ಸ್ಯಾಂಟನರ್ 1 ವಿಕೆಟ್ ಪಡೆದರು. ಉಮೇಶ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

2 ವರ್ಷಗಳ ಬಳಿಕ ಅಂತಾರಾಷ್ಟ್ರೀಯ ವಿಮಾನ ಸಂಚಾರ ಆರಂಭ

ನವದೆಹಲಿ,ಮಾ.26–ದೇಶದಲ್ಲಿ ಕೋವಿಡ್ ಸೋಂಕಿನ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ವಿಮಾನ ಸಂಚಾರದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಸೋಂಕು ಕಡಿಮೆಯಾದ ಹಿನ್ನೆಲೆಯಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ತೆರವು ಮಾಡಿದೆ. ಈ ಹಿನ್ನೆಲೆಯಲ್ಲಿ ನಾಳೆ (ಭಾನುವಾರ)ಯಿಂದ ವಿಮಾನ ಸಂಚಾರದಲ್ಲಿ ಶೇ.100 ರಷ್ಟು ಸಾಮರ್ಥ್ಯದ ಪ್ರಯಾಣಕ್ಕೆ ಅವಕಾಶ ಮಾಡಿಕೊಡಿಕೊಟ್ಟಿದ್ದು ನಾಳೆಯಿಂದ ಪೂರ್ಣ ಪ್ರಮಾಣದಲ್ಲಿ ವಿಮಾನಗಳ ಸಂಚಾರ ನಡೆಯಲಿದೆ. ವಿಮಾನ ಸಚಿವಾಲಯ ಹೊರಡಿಸಿದ್ದ ನಿರ್ಬಂಧಗಳ ನಿಯಮ ಸಡಿಲ ಮಾಡಿದ್ದು ಎಲ್ಲಾ ನಿಗದಿತ ಅಂತಾರಾಷ್ಟ್ರೀಯ ವಾಣಿಜ್ಯ ವಿಮಾನಗಳು ನಾಳೆಯಿಂದ ಪೂರ್ಣ ಪ್ರಮಾಣದಲ್ಲಿ ಸಂಚಾಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ನಾಗರೀಕ ವಿಮಾನಯಾನ ಸಚಿವಾಲಯ ತಿಳಿಸಿದೆ.


ವಿಮಾನ ಪ್ರಯಾಣಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಕೋವಿಡ್ ಮಾರ್ಗಸೂಚಿ ಪ್ರಕಟಿಸಿದ್ದು ಅದರಂತೆ 3 ಸೀಟುಗಳ ನಡುವೆ ಖಾಲಿ ಸೀಟು ಬಿಡುವ ನಿರ್ಬಂಧವನ್ನು ತೆಗೆದುಹಾಕಲಾಗಿದೆ. ಇದರ ಜೊತೆಗೆ ವಿಮಾನ ಸಿಬ್ಬಂದಿಗೆ ಸಂಪೂರ್ಣ ಪಿಪಿಇ ಕಿಟ್‌ನ ಅಗತ್ಯವನ್ನು ತೆಗೆದುಹಾಕಲಾಗಿದೆ. ವಿಮಾನ ನಿಲ್ದಾಣಗಳಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ ನಿಯಮ ಮುಂದುವರಿಸಲಾಗಿದ್ದು, ಭದ್ರತಾ ಸಿಬ್ಬಂದಿಯ ಜೊತೆ ಭದ್ರತಾ ಕಾರಣಗಳಲ್ಲಿ ಸಹಕರಿಸಬೇಕು ಎಂದು ಮನವಿ ಮಾಡಲಾಗಿದೆ.

ಬಜೆಟ್ ಘೋಷಣೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿನೂತನ ಪ್ರಯತ್ನ

ಬೆಂಗಳೂರು, ಮಾ.26(ಕೆಎಂಶಿ)– ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ಕಾರ್ಯಾದೇಶಗಳನ್ನು ಹೊರಡಿಸಿ ಘೋಷಿತ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದಲ್ಲಿ ಪ್ರಥಮ ಬಾರಿಗೆ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಆರ್ಥಿಕ ಇಲಾಖೆ ಸಹಯೋಗದಲ್ಲಿ ಬಜೆಟ್‌ನ ಪ್ರಮುಖ ಘೋಷಿತ ಯೋಜನೆಗಳಿಗೆ ಕಾರ್ಯಾದೇಶವನ್ನು ನೀಡುವುದು ಹಾಗೂ ಅನುಷ್ಠಾನದ ಸಂಪೂರ್ಣ ಮೇಲ್ವಿಚಾರಣೆಯನ್ನು ಈ ಸಮಿತಿ ಮಾಡಲಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ದೊರಕಿಸುವುದು ಹಾಗೂ ಒಂದೇ ಬಾರಿಗೆ ಎಲ್ಲ ಯೋಜನೆಗಳಿಗೆ ಅನುಮೋದನೆ ನೀಡುವ ಉದ್ದೇಶದಿಂದ ಪ್ರಥಮ ಬಾರಿಗೆ ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ಸಮಿತಿ ರಚಿಸಲಾಗಿದೆ ಎಂದರು.



ಬಜೆಟ್‌ನಲ್ಲಿ ಘೋಷಿಸಿರುವ ಹೊಸ ಯೋಜನೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲು ಈಗಾಗಲೇ ಸಂಬಂಧಿಸಿದ ಇಲಾಖೆಗಳಿಗೆ ಸೂಚನೆಯನ್ನೂ ನೀಡಲಾಗಿದೆ ಎಂದು ತಿಳಿಸಿದರು.

ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಪೂರ್ವ ಸಿದ್ಧತೆ ಸರ್ಕಾರ ಕೈಗಾರಿಕೋದ್ಯಮಕ್ಕೆ ಮಹತ್ವ ನೀಡಿದೆ. ನವೆಂಬರ್‌ನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯುವ ಹಿನ್ನೆಲೆಯಲ್ಲಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯವರ ನೇತೃತ್ವದಲ್ಲಿ ಎಲ್ಲಾ ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆಗೆ ಆಕರ್ಷಿಸುವ ಗುರಿಯನ್ನು ಹೊಂದಲಾಗಿದೆ ಎಂದು ಸಿಎಂ ಬೊಮ್ಮಾಯಿ ಹೇಳಿದರು. ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ರಾಜ್ಯ ಪ್ರಥಮ ಸ್ಥಾನದಲ್ಲಿದೆ, ಕಳೆದ ಮೂರು ತ್ರೈಮಾಸಿಕಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇದು ವಿದೇಶಿ ಹೂಡಿಕೆದಾರರಿಗೆ ನಮ್ಮ ರಾಜ್ಯದ ಮೇಲಿರುವ ವಿಶ್ವಾಸವನ್ನು ತೋರಿಸುತ್ತದೆ ಎಂದು ಬಸವರಾಜ ಬೊಮ್ಮಾಯಿ ಹರ್ಷ ವ್ಯಕ್ತಪಡಿಸಿದರು.

ಕಿವಿ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ

ಮೈಸೂರು,ಮಾ.26–ವಿಶ್ವ ಶ್ರವಣ ದಿನದ ಪ್ರಯುಕ್ತ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ.28ರಿಂದ 31ರವರೆಗೆ ಕಿವಿ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 7892395602, 8310736162 ಸಂಪರ್ಕಿಸಿ.

ನಾಳೆ ಉಚಿತ ವಾಕ್–ಶ್ರವಣ ಶಿಬಿರ

ಮೈಸೂರು,ಮಾ.26–ಮೈಸೂರಿನ ಓಟಿ ಕೇರ್ ವಾಕ್ ಮತ್ತು ಶ್ರವಣ ಆಸ್ಪತ್ರೆಯಲ್ಲಿ ಮಾ.28ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ಉಚಿತ ವಾಕ್ ಮತ್ತು ಶ್ರವಣ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9686699899 ಸಂಪರ್ಕಿಸಬಹುದು.

ಮಾ.28ರವರೆಗೆ ರಾಜ್ಯದ ಹಲವೆಡೆ ಮಳೆ

ಬೆಂಗಳೂರು,ಮಾ.26–ಕರ್ನಾಟಕದಲ್ಲಿ ಇನ್ನೆರಡು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಗದಗ, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ ಮತ್ತು ಹಾವೇರಿಯಲ್ಲಿ ಮಾ.28ರವರೆಗೆ ಮಳೆಯಾಗಲಿದ್ದು, ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಾಸನ, ಕೊಡಗು, ಮೈಸೂರು, ತುಮಕೂರು ಜಿಲ್ಲೆಯಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಮಹಾರಾಷ್ಟ್ರದ ಮಧ್ಯ ಕರಾವಳಿಯಲ್ಲಿ ವಾಯುಭಾರ ಕುಸಿತವಾದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಮಳೆ ಅಬ್ಬರಿಸಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬೇಸಿಗೆಯಲ್ಲಿ ಜಾಸ್ತಿ ತಾಪಮಾನ ಉಂಟಾಗುವ ಸಾಧ್ಯತೆಯಿದ್ದರೂ, ಇನ್ನೆರಡು ದಿನ ರಾಜ್ಯದಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ಶುಕ್ರವಾರ ಶಿವಮೊಗ್ಗ ಜಿಲ್ಲೆಯ ಹಲವೆಡೆ ಮಳೆ ಮುಂದುವರಿದಿದ್ದು, ಕೆಲವೆಡೆ ಸುರಿದ ಬಿರುಗಾಳಿ ಸಹಿತ ಮಳೆಗೆ ಆಸ್ತಿಪಾಸ್ತಿಗೆ ಧಕ್ಕೆಯಾಗಿದೆ. ಶಿವಮೊಗ್ಗ, ತೀರ್ಥಹಳ್ಳಿ, ಸಾಗರ, ಹೊಸನಗರ ಮುಂತಾದ ಕಡೆಗಳಲ್ಲಿ ಅಕಾಲಿಕ ಮಳೆಯಾಗಿದೆ. ಸಾಗರ ತಾಲೂಕಿನ ಆನಂದಪುರ ಸಮೀಪದ ಹೆಬೋಡಿ ಗ್ರಾಮದಲ್ಲಿ ಮನೆ ಹಾಗೂ ಕೊಟ್ಟಿಗೆ ಕುಸಿದು ಬಿದ್ದಿದೆ. ಹೊಸನಗರ, ತೀರ್ಥಹಳ್ಳಿ ತಾಲೂಕಿನ ಹಲವೆಡೆ ಬಿರುಗಾಳಿಗೆ ಮರಗಳು ಉರುಳಿ ಬಿದ್ದಿವೆ. ಮೇಗರವಳ್ಳಿ ಸುತ್ತಮುತ್ತ ಭಾರೀ ಗಾತ್ರದ ಮರಗಳು ಹಾಗೂ ವಿದ್ಯುತ್ ಕಂಬಗಳು ಉರುಳಿಬಿದ್ದಿವೆ.

ನಾಳೆ ಮೈಸೂರಲ್ಲಿ ಪೌರಾಣಿಕ ರಂಗ ಸಂಭ್ರಮ

ಮೈಸೂರು,ಮಾ.26(ಎಂಟಿವೈ)–ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮಾ.28ರಂದು ಸಂಜೆ 4.30ಕ್ಕೆ ಪೌರಾಣಿಕ ರಂಗ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬೆಂಗಳೂರಿನ ರಂಗ ರತ್ನಾಕರ ಸಂಸ್ಥೆ ಕಾರ್ಯದರ್ಶಿ ಹೆಚ್.ಎಸ್. ಗೋವಿಂದೇಗೌಡ ತಿಳಿಸಿದ್ದಾರೆ.

ಜಿಲ್ಲಾಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಲ್ಲಿ ಹಲವು ಕಾರ್ಯಕ್ರಮ ನಡೆಸುವ ಮೂಲಕ ರಂಗಾಸಕ್ತರ ಮನಗೆದ್ದಿರುವ ರಂಗ ರತ್ನಾಕರ ಸಂಸ್ಥೆ ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮಾ.28ರ ಸೋಮವಾರ ಸಂಜೆ 4.30ಕ್ಕೆ ಆಯೋಜಿಸಿರುವ ಪೌರಾಣಿಕ ರಂಗ ಸಂಭ್ರಮ ಕಾರ್ಯಕ್ರಮದಲ್ಲಿ ದಾನಶೂರ ಕರ್ಣ ನಾಟಕದ ವಿದುರನ ಕುಟೀರ, ಕುರುಕ್ಷೇತ್ರ ನಾಟಕದ ಗೀತೋಪದೇಶ ದೃಶ್ಯ, ಭಗವಾನ್ ಭಾರ್ಗವ ನಾಟಕದ ಆಶ್ರಮ ಪ್ರದೇಶ ದೃಶ್ಯ ಹಾಗೂ ವೀರ ಬಬ್ರುವಾಹನ ನಾಟಕದ ಅರ್ಜುನ–ಬಬ್ರುವಾಹನ ಸಮಾಗಮ ದೃಶ್ಯ ಪ್ರದರ್ಶನ ಜರುಗಲಿದೆ. ಅಲ್ಲದೆ, ರಂಗಗೀತೆಗಳ ಗಾಯನವೂ ಜರುಗಲಿದೆ ಎಂದು ವಿವರಿಸಿದರು.

ಹಿರಿಯ ರಂಗಕಲಾವಿದ ಎಂ.ಎಸ್.ವೆಂಕಟರಾಮ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ರಂಗನಟಿ ಹೆಚ್.ಟಿ.ಇಂದಿರಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ರಂಗತಜ್ಞ ಕೆ.ಜೆ.ನಾರಾಯಣ ಅವರ ಮಹಿಷಾಸುರ ಮರ್ದಿನಿ ಮತ್ತು ಜಲಂಧರ ನಾಟಕದ ಪುಸ್ತಕ, ಹಿರಿಯ ರಂಗಕರ್ಮಿ ಡಾ.ಪಾರ್ಶ್ವನಾಥ್ ಅವರ ಐತಿಹಾಸಿಕ ನಾಟಕಗಳು ಭಾಗ–1 ಹಾಗೂ ಭಾಗ–2ರ ಪುಸ್ತಕವನ್ನು ಬಿಡುಗಡೆ ಮಾಡಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ರಂಗಾರತ್ನಾಕರ ಸಂಸ್ಥೆ ಅಧ್ಯಕ್ಷ ಕಿರಗಸೂರು ರಾಜಪ್ಪ, ಪದಾಧಿಕಾರಿಗಳಾದ ಕೆಂಪೇಗೌಡ, ರಂಗಕರ್ಮಿ ರಂಗಸ್ವಾಮಿ, ರಂಗಸ್ವಾಮಿ ಇದ್ದರು.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿರುವ ಸರಸ್ವತಿ ದೇವಿಗೆ ದೇವಸ್ಥಾನದ ಅಧ್ಯಕ್ಷ ನಾಗರಾಜ್, ಬ್ರಾಹ್ಮಣ ಸಮಾಜದ ಮುಖಂಡರಾದ ವಿಘ್ನೇಶ್ವರ ಭಟ್, ಸುದರ್ಶನ್, ಶ್ರೀನಿವಾಸ್ ವಿಶೇಷ ಪೂಜೆ ಸಲ್ಲಿಸಿ, ಮಕ್ಕಳಿಗೆ ಪರೀಕ್ಷೆ ಸಾಮಗ್ರಿಗಳನ್ನು ನೀಡಿ, ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಗಣೇಶ್, ನವೀನ್, ವಿನುತಾ, ಮಂಗಳಾ, ಸನತ್ ಉಪಸ್ಥಿತರಿದ್ದರು.

ಎಚ್.ಎನ್.ನಾಗರತ್ನ ನಿಧನ



ಮೈಸೂರು: ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ಹಾಗೂ ಬೋಧಿಸತ್ವ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಮಾಜಿ ಅಧ್ಯಕ್ಷ ಎಚ್.ಎಸ್. ನಾಗಪ್ಪ ಅವರ ಪುತ್ರಿ ಕುವೆಂಪುನಗರದ ನಿವಾಸಿ ಎಚ್.ಎನ್. ನಾಗರತ್ನ (61) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 10 ಗಂಟೆಗೆ ಮಳಲವಾಡಿಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಮೃತರ ಸಹೋದರ ಪ್ರಸನ್ನಕುಮಾರ್ ತಿಳಿಸಿದ್ದಾರೆ. ಮಾಹಿತಿಗೆ ಮೊ.ಸಂ. 98450 21279 ಸಂಪರ್ಕಿಸಿ.

ಒಂದನೇ ಪುಟದಿಂದ

‘ಡಾ.ಸುಧಾಮೂರ್ತಿ ರಸ್ತೆ’ ಅನಾವರಣ

ಹೆಬ್ಬಾಳಿನ ಕೆರೆ ನಿಮ್ಮದು. ನಿಮ್ಮ ಕೆರೆಯ ಸ್ವಚ್ಛತೆಯ ಜವಾಬ್ದಾರಿಯನ್ನು ನೀವೇ ನೋಡಿಕೊಳ್ಳಬೇಕು. ಒಂದು ಕಾಲದಲ್ಲಿ 2 ಸಾವಿರ ಎಕರೆ ವಿಸ್ತೀರ್ಣವಿದ್ದ ಕೆರೆ ಈಗ ಕಡಿಮೆಯಾಗಿದೆ. ಇರುವ ಕೆರೆಯನ್ನು ಉಳಿಸಿಕೊಳ್ಳಿ ಎಂದು ಮನವಿ ಮಾಡಿದರು.

ಗರಡಿ ಮನೆಗಳ ಉಳಿವಿಗೆ ಸಹಾಯ: ರಾಜ್ಯದಲ್ಲಿ ಗರಡಿ ಮನೆಗಳ ಸಂಸ್ಕೃತಿ ನಶಿಸಿ ಹೋಗುತ್ತಿದೆ. ಕುಸ್ತಿ ಹೇಳಿಕೊಡುವ ಗರಡಿ ಮನೆಗಳು ಇಲ್ಲದಂತಾಗುತ್ತಿವೆ. ಆದ್ದರಿಂದ ಗರಡಿ ಮನೆಗಳ ಉಳಿವಿಗೆ ಕೈಲಾದ ಸಹಾಯ ಮಾಡಲಾಗುವುದು. ಅದಕ್ಕಾಗಿ ತಾವುಗಳು ಕೈಜೋಡಿಸಬೇಕು ಎಂದು ಕೋರಿದರು.

ರಸ್ತೆ ಅಭಿವೃದ್ಧಿ: ಶಾಸಕ ಎಲ್.ನಾಗೇಂದ್ರ ಮಾತನಾಡಿ, ಹೆಬ್ಬಾಳಿನ ಮುಖ್ಯ ರಸ್ತೆಯನ್ನು ಸುಮಾರು ನಾಲ್ಕೂವರೆ ಕೋಟಿ ರೂ., ನಿಂದ ಅಭಿವೃದ್ಧಿ ಪಡಿಸಲಾಗಿದೆ. ಹಾಗೆಯೇ ಸುಮಾರು 25 ಲಕ್ಷ ರೂ. ಪಾಲಿಕೆ ಅನುದಾನದಿಂದ ಹೆಬ್ಬಾಳಿನ ಹೆಬ್ಬಾಗಿಲನ್ನು ನಿರ್ಮಿಸಲಾಗಿದೆ. ವಿಶ್ವದ ಗಮನ ಸೆಳೆದಿರುವ ಇನ್ಫೋಸಿಸ್ ಸಂಸ್ಥೆ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದೆ. ಇಂತಹ ಸಂಸ್ಥೆಯನ್ನು ಬೆಳೆಸಿದ ಡಾ.ಸುಧಾಮೂರ್ತಿಯವರ ಸಮಾಜ ಸೇವೆ ಅಪಾರ. ಪ್ರಕೃತಿ ವಿಕೋಪಕ್ಕೆ ಒಳಗಾಗಿ ಮನೆ ಕಳೆದುಕೊಂಡಿದ್ದ ಸಾವಿರಾರು ಜನರಿಗೆ ಸೂರು ಕಟ್ಟಿಕೊಟ್ಟಿರುವ ಅವರ ಸೇವೆ ಸಾಕಷ್ಟಿದೆ ಎಂದು ಗುಣಗಾನ ಮಾಡಿದರು.

ದೇವರ ಮೇಲೆ ಅಪಾರ ಭಕ್ತಿ: ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಹೆಬ್ಬಾಳ ಕೆರೆಯ ಪಕ್ಕದಲ್ಲಿರುವ ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಮೇಲೆ ಸುಧಾಮೂರ್ತಿಯವರಿಗೆ ಅಪಾರ ಭಕ್ತಿ. ಆದ್ದರಿಂದಲೇ ಹೆಬ್ಬಾಳ ಕೆರೆಯನ್ನು ಸ್ವಚ್ಛಗೊಳಿಸಿ ಅಭಿವೃದ್ಧಿ ಮಾಡಿಸಿದ್ದಾರೆ. 123 ಕೋಟಿ ರೂ.ನಲ್ಲಿ ಬೆಂಗಳೂರಿನಲ್ಲಿ ಜಯದೇವ ಆಸ್ಪತ್ರೆ ನಿರ್ಮಾಣ ಮಾಡಿಸಿ ಕೊಟ್ಟಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ವೇಳೆ ನಾಡು ಒಪ್ಪುವ ಆದರ್ಶ ಮಹಿಳೆಯಾದ ಡಾ.ಸುಧಾಮೂರ್ತಿ ಅವರಿಂದ ನಾಡಹಬ್ಬ ದಸರಾ ಉದ್ಘಾಟನೆ ಮಾಡಿಸಬೇಕು ಎಂದು ಅಂದಿನ ಸಿಎಂ ಕುಮಾರಸ್ವಾಮಿಯವರಿಗೆ ಮನವಿ ಮಾಡಿದ್ದೆ. ದೇಶಕ್ಕೆ, ರಾಜ್ಯಕ್ಕೆ ಏನಾದರೂ ಸೇವೆ ಮಾಡಬೇಕೆಂತಲೇ ಸದಾ ಸಂಶೋಧನೆ ಮಾಡುವ ಸುಧಾಮೂರ್ತಿ ಅವರ ಸೇವೆ ಅಪಾರ ಎಂದು ಮೆಚ್ಚುಗೆ ಮಾತುಗಳನ್ನಾಡಿದರು. ಶಾಸಕ ಯತೀಂದ್ರ ಸಿದ್ದರಾಮಯ್ಯ, ನಗರ ಪಾಲಿಕೆ ಸದಸ್ಯರಾದ ಶಿವಕುಮಾರ್, ಪ್ರೇಮಾ ಶಂಕರೇಗೌಡ, ಲಕ್ಷ್ಮಿ, ಕೆ.ವಿ.ಶ್ರೀಧರ್, ರಮೇಶ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಸ್ಥಳೀಯ ಮುಖಂಡರಾದ ಶಿವಮಾದೇಗೌಡ, ಸಿ.ಎನ್.ದಂಡಪಾಣಿ, ಬಿ.ಜೆ.ನಾಗೇಂದ್ರ, ಪ್ರಕಾಶ್, ಸುಬ್ಬಣ್ಣ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ; ವಿದ್ಯಾರ್ಥಿಗಳಿಗೆ ಶುಭಾಶಯ ತಿಳಿಸಿದ ಸಚಿವ ಸೋಮಶೇಖರ್

ತಾಲೂಕಿಗೊಂದು ಕೋವಿಡ್ ಪರೀಕ್ಷಾ ಕೇಂದ್ರ

ಮೈಸೂರು,ಮಾ.26(ಪಿಎಂ)–ಭವಿಷ್ಯದ ಶಿಕ್ಷಣಕ್ಕೆ ಮಹತ್ವದ ತಿರುವು ನೀಡುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.28 ರಿಂದ ಆರಂಭವಾಗಲಿದ್ದು, ಪರೀಕ್ಷೆ ಬರೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ಸಹಕಾರ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಶುಭಾಶಯ ತಿಳಿಸಿದ್ದಾರೆ.



ಎಲ್ಲಾ ವಿದ್ಯಾರ್ಥಿಗಳು ಅತೀ ಹೆಚ್ಚು ಅಂಕ ಪಡೆದು ತೇರ್ಗಡೆ ಹೊಂದಿದರೆ ಮುಂದಿನ ಶೈಕ್ಷಣಿಕ ಜೀವನಕ್ಕೆ ಸಹಕಾರಿಯಾಗಲಿದೆ ಜೊತೆಗೆ ಪೋಷಕರು ಮತ್ತು ಶಿಕ್ಷಕರ ಪರಿಶ್ರಮ ಕೂಡ ಸಾರ್ಥಕವಾಗಲಿದೆ. ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷೆ ಬರೆದು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು. ಆತ್ಮವಿಶ್ವಾಸದೊಂದಿಗೆ ಪರೀಕ್ಷೆ ಎದುರಿಸಿದರೆ ಉತ್ತಮ ಫಲಿತಾಂಶ ಲಭ್ಯವಾಗಲಿದೆ. ಪರೀಕ್ಷೆಗಳನ್ನು ಸುಸೂತ್ರವಾಗಿ ನೆರವೇರಿಸಲು ಸರ್ಕಾರ ಎಲ್ಲಾ ಅಗತ್ಯ ವ್ಯವಸ್ಥೆ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ.

ಕೋವಿಡ್ ಪರೀಕ್ಷಾ ಕೇಂದ್ರ: ಜಿಲ್ಲೆಯಲ್ಲಿ 38,138 ವಿದ್ಯಾರ್ಥಿಗಳು 149 ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುತ್ತಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲಾ ರೀತಿಯ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಸುಮಾರು 40 ಸಾವಿರ ಮಾಸ್ಕ್‌ಗಳನ್ನು ವಿತರಣೆ ಮಾಡಲಾಗಿದೆ. ಕೋವಿಡ್ ತಗ್ಗಿದ್ದರೂ ನಿರ್ಲಕ್ಷ್ಯ ಸಲ್ಲದು. ಹೀಗಾಗಿ ಕೋವಿಡ್ ಲಕ್ಷಣವುಳ್ಳ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ತಾಲೂಕಿಗೆ ಒಂದು ಕೋವಿಡ್ ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳೂ ಸಕಲ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದ್ದಾರೆ. ಪರೀಕ್ಷಾ ಕೇಂದ್ರದ ಸುತ್ತ 144 ಸೆಕ್ಷನ್ ಜಾರಿಯಲ್ಲಿರಲಿದ್ದು, ಪೋಷಕರು ಯಾವುದೇ ರೀತಿಯ ಆತಂಕಪಡುವ ಅಗತ್ಯವಿಲ್ಲ. ಪರೀಕ್ಷೆ ಬಗ್ಗೆ ಭಯಪಡದೆ ಅದನ್ನು ಹಬ್ಬದಂತೆ ಆಚರಿಸಿ, ಉತ್ತಮ ಫಲಿತಾಂಶ ಪಡೆದು ಪೋಷಕರು, ಶಾಲೆ ಮತ್ತು ಜಿಲ್ಲೆಗೂ ಕೀರ್ತಿ ತರುವಂತೆ ವಿದ್ಯಾರ್ಥಿಗಳಿಗೆ ಸಚಿವ ಎಸ್.ಟಿ.ಸೋಮಶೇಖರ್ ಪ್ರಕಟಣೆಯಲ್ಲಿ ಸಲಹೆ ನೀಡಿದ್ದಾರೆ.

ಇದೀಗ ಔಷಧಗಳ ಬೆಲೆಯೂ ಗಗನಕ್ಕೆ

ಏ.1ರಿಂದ ಪ್ಯಾರಸಿಟಮಲ್ ಸೇರಿ 800ಕ್ಕೂ ಹೆಚ್ಚು ಔಷಧಗಳ ಬೆಲೆ ಶೇ.10.7ರಷ್ಟು ಏರಿಕೆ


ನವದೆಹಲಿ,ಮಾ.26– ಇಂಧನ ಮತ್ತು ಖಾದ್ಯ ತೈಲ ಬೆಲೆ ಏರಿಕೆ ಬಿಸಿಯ ಬೆನ್ನಲ್ಲೇ ಇದೀಗ ಅಗತ್ಯ ಔಷಧಗಳ ಬೆಲೆ ಏರಿಕೆ ಹೊರೆಯೂ ಗ್ರಾಹಕರ ಮೇಲೆ ತಟ್ಟಲಿದ್ದು, ಪ್ಯಾರಸಿಟಮಾಲ್ ಸೇರಿದಂತೆ 800ಕ್ಕೂ ಹೆಚ್ಚು ಅತ್ಯಗತ್ಯ ಔಷಧಗಳ ಬೆಲೆ ಏರಿಕೆಯಾಗಲಿದೆ. ಅಗತ್ಯ ಔಷಧಿಗಳ



ಬೆಲೆ ಏರಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದ್ದು, ಈ ಹಿನ್ನೆಲೆಯಲ್ಲಿ ಏ. 1ರಿಂದ ಸೋಂಕು ಹಾಗೂ ನೋವು ನಿವಾರಕಗಳು ಸೇರಿದಂತೆ ಸುಮಾರು 800 ಕ್ಕೂ ಹೆಚ್ಚು ಅಗತ್ಯ ಔಷಧಿಗಳ ಬೆಲೆ ಏರಿಕೆ ಆಗಲಿದೆ. 2021ರ ಕ್ಯಾಲೆಂಡರ್ ವರ್ಷಕ್ಕೆ ಸಗಟು ಬೆಲೆ ಸೂಚ್ಯಂಕದಲ್ಲಿ (ಡಬ್ಲ್ಯೂಪಿಐ) ಶೇ 10.7ರಷ್ಟು ಬೆಲೆ ಹೆಚ್ಚಳ ಮಾಡಲು ರಾಷ್ಟ್ರೀಯ ಔಷಧಿ ಬೆಲೆ ಪ್ರಾಧಿಕಾರ (ಎನ್‌ಪಿಪಿಎ) ನಿರ್ಧರಿಸಿದೆ. ಈ ನಿರ್ಧಾರದ ಹಿನ್ನೆಲೆಯಲ್ಲಿ, ಅಗತ್ಯ ಔಷಧಿಗಳ ಪಟ್ಟಿಯಲ್ಲಿ ಬರುವ ಸುಮಾರು 800 ಔಷಧಿಗಳ ಬೆಲೆಗಳು ಏ.1ರಿಂದ ಶೇ.10.7ರಷ್ಟು ಹೆಚ್ಚಾಗಲಿದೆ. ಪ್ರಮುಖವಾಗಿ ಅಲರ್ಜಿ, ಸೋಂಕು, ಜ್ವರ, ಚರ್ಮ ರೋಗ, ಹೃದ್ರೋಗ, ರಕ್ತಹೀನತೆ, ಅಧಿಕ ರಕ್ತದೊತ್ತಡವನ್ನು ಗುಣಪಡಿಸಲು ಬಳಸುವ ಔಷಧಿಗಳ ಬೆಲೆಗಳು ಹೆಚ್ಚಾಗಲಿದ್ದು, ಬೆಲೆ ಏರಿಕೆಯಾಗುವ ಔಷಧಗಳ ಪಟ್ಟಿಯಲ್ಲಿ, ಅಜಿಥ್ರೊಮೈಸಿನ್, ಸಿಪ್ರೊಫ್ಲೋಕ್ಸಾಸಿನ್ ಹೈಡ್ರೋಕ್ಲೋರೈಡ್, ಮೆಟ್ರೋನಿಡಜೋಲ್, ಪ್ಯಾರೆಸಿಟಮಾಲ್, ಫೆನೋಬಾರ್ಬಿಟೋನ್ ಮತ್ತು ಫೆನಿಟೋಯಿನ್ ಸೋಡಿಯಂನಂತಹ ಔಷಧಗಳೂ ಸೇರಿವೆ ಎಂದು ಹೇಳಲಾಗಿದೆ.

ರಾಜ್ಯದಲ್ಲಿ ರೈಲ್ವೆ ಹೊಸ ಮಾರ್ಗಗಳ ಆರಂಭಿಸುವ ಅಗತ್ಯವಿದೆ: ದೇವೇಗೌಡ

ಬೆಂಗಳೂರು, ಮಾ. 26– ಪ್ರಯಾಣಿಕರಿಗೆ ಅನುಕೂಲವಾಗುವಂತೆ ಕರ್ನಾಟಕದಲ್ಲಿ ರೈಲ್ವೆ ಇಲಾಖೆಯು ಹೊಸ ಮಾರ್ಗಗಳನ್ನು ಪ್ರಾರಂಭಿಸಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ರಾಜ್ಯಸಭೆಯಲ್ಲಿ ಒತ್ತಾಯಿಸಿದರು.



ಹಾಸನದ ಶ್ರವಣಬೆಳಗೊಳವು ಜೈನ ಧರ್ಮದ ಧಾರ್ಮಿಕ ಕೇಂದ್ರವಾಗಿದೆ ಮತ್ತು ಪ್ರಪಂಚದಾದ್ಯಂತದ ಪ್ರವಾಸಿಗರು ಆಗಮಿಸುತ್ತಾರೆ. ಮಡಿಕೇರಿಗೂ ರೈಲಿನ ಮೂಲಕ ಸಂಪರ್ಕ ಕಲ್ಪಿಸಬೇಕಾದ ಅವಶ್ಯಕತೆಯಿದೆ. ಮಡಿಕೇರಿಯಲ್ಲಿ ಗುಡ್ಡಗಾಡು ಭೂಪ್ರದೇಶದ ಕಾರಣದಿಂದ ಯಾವುದೇ ರೈಲು ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ, ರೈಲು ಮಾರ್ಗ ನಿರ್ಮಿಸಲು ಯಾವುದೇ ಪ್ರಯತ್ನ ಕೂಡ ನಡೆದಿಲ್ಲ ಎಂದು ಹೇಳಿದ್ದಾರೆ. ಮೈಸೂರಿನಿಂದ ಮಡಿಕೇರಿಗೆ ರೈಲು ಮಾರ್ಗದ ಕುರಿತು ಮಾತನಾಡಿದ ಅವರು, ಬೆಂಗಳೂರಿನಿಂದ ಮಂಗಳೂರಿಗೆ ರೈಲು ಓಡಿಸಲು ಇದು ಸಹಾಯವಾಗಲಿದೆ ಎಂದರು.

ಕರ್ನಾಟಕಕ್ಕೆ ಅನುಕೂಲವಾಗುವಂತೆ ದಕ್ಷಿಣ ರೈಲ್ವೆಯಿಂದ ನೈಋತ್ಯ ರೈಲ್ವೆಯನ್ನು ಸ್ಥಾಪಿಸಿದ ಕೀರ್ತಿಗೆ ದೇವೇಗೌಡರು ಪಾತ್ರರಾಗಿದ್ದಾರೆ. ಮುನಿರಾಬಾದ್‌ನಿಂದ ಮೆಹಬೂಬ್‌ನಗರದಂತಹ ಸ್ಥಳಗಳಲ್ಲಿ ಜನರು ಪ್ರಯಾಣಿಸುವಾಗ ರೈಲಿಂಗ್‌ಗಳು ಮತ್ತು ಫುಟ್‌ಬೋರ್ಡ್‌ಗಳಿಗೆ ನೇತಾಡುತ್ತಾರೆ ಎಂದು ಹೇಳಿ ಸದನದ ಗಮನ ಸೆಳೆದ ದೇವೇಗೌಡರು ತಾವು ಪ್ರಧಾನಿಯಾಗಿದ್ದ ಅವಧಿಯಲ್ಲಿ ಅವಿಭಜಿತ ಆಂಧ್ರಪ್ರದೇಶಕ್ಕೂ ಈ ರೈಲುಗಳನ್ನು ಘೋಷಿಸಲಾಯಿತು ಎಂದರು. ಕರ್ನಾಟಕದಲ್ಲಿ ರೈಲು ಮೂಲಸೌಕರ್ಯ ಮತ್ತು ಸಂಪರ್ಕ ಕಳಪೆಯಾಗಿದೆ. ದಕ್ಷಿಣ ಭಾರತದಲ್ಲಿ ಅಗ್ರಸ್ಥಾನದಲ್ಲಿರುವ ತಮಿಳುನಾಡಿನಲ್ಲಿ 3ನೇ ಒಂದು ಭಾಗ ಮಾತ್ರ ಇದೆ ಎಂದು ತಜ್ಞರು ತಿಳಿಸಿದ್ದಾರೆ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ರೈಲ್ವೆ ಸಚಿವರಾಗಿದ್ದ ಸಮಯದಲ್ಲಿ ಹಾಸನ–ಬೆಂಗಳೂರು ಮತ್ತು ಹಾಸನ–ಚಿಕ್ಕಮಗಳೂರು ಮಾರ್ಗದ ಕಾಮಗಾರಿ ಪೂರ್ಣಗೊಳಿಸಿದರು ಎಂದರು. ತಾವು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಸಂಪರ್ಕಿಸಿದಾಗ, ತಕ್ಷಣವೇ ರೈಲ್ವೆ ಅಧಿಕಾರಿಗಳಿಗೆ ಕರೆ ಮಾಡಿ ನಿರ್ದೇಶನಗಳನ್ನು ನೀಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿನಿಧಿಸುವ ಕನಕಪುರಕ್ಕೆ ಬೆಂಗಳೂರಿನಿಂದ ಸುಮಾರು 70 ಕಿ.ಮೀ ರೈಲ್ವೆ ಮಾರ್ಗ ಮಂಜೂರು ಮಾಡಿದ್ದು, ಸಮೀಕ್ಷೆ ಕೂಡ ಪೂರ್ಣಗೊಂಡಿದೆ ಎಂದು ಸ್ಮರಿಸಿದ್ದಾರೆ. ತಾವು ಪ್ರಧಾನಿಯಾಗಿದ್ದಾಗ ಮೈಸೂರು–ಅರಸೀಕೆರೆ ಮಾರ್ಗ ರದ್ದು ಮಾಡಲು ರೈಲ್ವೆ ಅಧಿಕಾರಿಗಳು ಚಿಂತನೆ ನಡೆಸಿದ್ದರು. ಆದರೆ ತಾವು ಮಧ್ಯ ಪ್ರವೇಶಿದ ನಂತರ ಆ ಪ್ರಸ್ತಾಪ ಕೈಬಿಡಲಾಯಿತು, ಹೀಗಾಗಿ, ಈಗ ಆ ಮಾರ್ಗದಲ್ಲಿ 28 ರೈಲುಗಳು ಸಂಚರಿಸುತ್ತವೆ ಎಂದು ರಾಜ್ಯಸಭೆಯಲ್ಲಿ ಮಾಹಿತಿ ನೀಡಿದರು.



ಮಾಜಿ ಶಾಸಕರಾದ ವಾಸು ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ 23ನೇ ವಾರ್ಡಿನಲ್ಲಿರುವ ಮಾಂಡವಿ ಶೋರೂಮ್ ಬಳಿಯಿರುವ ಅಂಬೇಡ್ಕರ್ ಕಾಲೋನಿ ಮಕ್ಕಳಿಗೆ ಅಭಿಮಾನಿ ಬಳಗದ ವತಿಯಿಂದ ಪುಸ್ತಕವನ್ನು ವಿತರಿಸಲಾಯಿತು. ಈ ವೇಳೆ 41ನೇ ವಾರ್ಡಿನ ಅಧ್ಯಕ್ಷ ಹರೀಶ್‌ಗೌಡ, ಗೋಪಿ, ಚಂದ್ರು, ರವಿಚಂದ್ರ, ರಾಣಿ ಇದ್ದರು.

ಮೂವರಿಗೆ ಸದ್ಭಾವನಾ ಪ್ರಶಸ್ತಿ ಪ್ರದಾನ



ಮೈಸೂರು,ಮಾ.26(ಎಂಟಿವೈ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿನ ಬ್ರಹ್ಮೀಭೂತ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮೂವರಿಗೆ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಆಯೋಜಿಸಿದ್ದ ವಾಸುದೇವ ಮಹಾರಾಜರ 83ನೇ ಜಯಂತಿ ಕಾರ್ಯಕ್ರಮದಲ್ಲಿ ಸಮಾಜ ಸೇವೆ ಹಾಗೂ ಸಂಘಟನೆಗಾಗಿ ಎಂ.ಬಸವರಾಜು, ರಂಗಭೂಮಿ ಕ್ಷೇತ್ರದಿಂದ ಡಾ. ಲೀಲಾ ಬಸವರಾಜು, ರಾಜಕೀಯ ಹಾಗೂ ಸಮಾಜ ಸೇವೆಗಾಗಿ ಕೆ.ಪಿ.ಯೋಗೇಶ್ ಅವರಿಗೆ ಸದ್ಭಾವನಾ ಪ್ರಶಸ್ತಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ವಾಸುದೇವ ಮಹಾರಾಜರು ಚಿಕ್ಕ ವಯಸ್ಸಿನಿಂದಲೇ ಸಾಯಿಬಾಬಾ ಅವರ ಅನುಗ್ರಹಕ್ಕೆ ಭಾಜನರಾಗಿದ್ದರು. ಅಲ್ಲದೆ, ಮಹಾರಾಜರು ನೀಡಿದ್ದ ಹಲವು ಸೌಲಭ್ಯಗಳನ್ನು ತಿರಸ್ಕರಿಸಿದ್ದರು. ಜೀವತಾವಧಿವರೆಗೂ ಬಾಡಿಗೆ ಮನೆಯಲ್ಲೇ ಸರಳ ಜೀವನ ನಡೆಸಿದರು. ಅವರು ಪ್ರಾಮಾಣಿಕತೆಗಾಗಿ ಅಂದಿನಿಂದಲೂ ಜನರು ಇವರನ್ನು ವಾಸುದೇವ ಮಹಾರಾಜರೆಂದೇ ಕರೆಯುತ್ತಿದ್ದರು ಎಂದು ಸ್ಮರಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಈ ಹಿಂದೆ ನಮ್ಮಲ್ಲಿದ್ದ ಹಿರಿಯರ ಆದರ್ಶ ಪಾಲನೆ ಮಾಡಿದರೆ ನೆಮ್ಮದಿಯ ಜೀವನ ಸಾಗಿಸಬಹುದಾಗಿದೆ. ಹಲವು ಸಾಧಕರ ಜೀವನ ಆದರ್ಶ ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಬ್ರಹ್ಮೀಭೂತ ವಾಸುದೇವ ಮಹಾರಾಜರ ಜೀವನ ಕ್ರಮ ನಮ್ಮೆಲ್ಲರಿಗೆ ಮಾರ್ಗದರ್ಶನ ನೀಡಲಿದೆ. ಅವರ ಹೆಸರಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸದ್ಭಾವನಾ ಪ್ರಶಸ್ತಿ ವಿತರಿಸುತ್ತಿರುವುದು ಶ್ಲಾಘನೀಯ ಎಂದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ಕಾರ್ಯಕ್ರಮದಲ್ಲಿ ಬ್ರಹ್ಮೀಭೂತ ವಾಸುದೇವ ಮಹಾರಾಜ್ ಫೌಂಡೇಷನ್ ಎಂ.ವಿ.ನಾಗೇಂದ್ರಬಾಬು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಅಪ್ಪುವಿಗೆ ಗೀತ ನಮನ

ಮೈಸೂರು,ಮಾ.26(ಜಿಎ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾದಲ್ಲಿ ಹಂಸಗಾನ ಸುಗಮ ಸಂಗೀತ ಶಾಲೆ ವತಿಯಿಂದ ಅಪ್ಪುವಿಗೆ ಗೀತ ನಮನ ಸಲ್ಲಿಸಲಾಯಿತು. ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರು ನೆಚ್ಚಿನ ಕನ್ನಡ ಮತ್ತು ಹಿಂದಿ ಗೀತೆಗಳನ್ನು ಗಾಯಕರಾದ ವಿಜಯ ಸೂರ್ಯ, ಮಹೇಂದ್ರ ಹಾಗೂ ಗಾಯಕಿ ಸಿಂಚನ ಹಾಡುಗಳನ್ನು ಹಾಡುವುದರ ಮೂಲಕ ಹಾಗೂ ಕೀಬೋರ್ಡ್ ವಾದಕ ದೀಪಕ್, ತಬಲ ವಾದಕ ರಘುನಾಥ್, ಕೀಬೋರ್ಡ್ ವಾದಕ ಶರತ್, ಗಿಟಾರ್ ವಾದಕ ಪ್ರದೀಪ್, ತಬಲ ವಾದಕ ಆತ್ಮರಾಮ್, ರಿದಂಪ್ಯಾಡ್ ವಾದಕರಾದ ವಿನಯ್ ರಂಗದೊಳ್, ಗುರುದತ್ತ, ತಬಲ ವಾದಕ ಶಿವಮಲ್ಲು ತಮ್ಮ ವಾದನದ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.



ಬ್ರಾಹ್ಮಣ ಯುವ ವೇದಿಕೆಯಿಂದ ಒಂಟಿಕೊಪ್ಪಲ್ ಪಂಚಾಂಗ ವಿತರಣೆ ಅಭಿಯಾನ

ಹಿಂದೂ ಸಮುದಾಯದ ಪಂಚಾಂಗಕ್ಕೆ ವೈಜ್ಞಾನಿಕ ಮನ್ನಣೆಯೂ ಇದೆ

ಅಭಿಯಾನಕ್ಕೆ ಚಾಲನೆ ನೀಡಿ ಶಾಸಕ ಎಲ್.ನಾಗೇಂದ್ರ ಅಭಿಮತ

ಮೈಸೂರು,ಮಾ.26(ಪಿಎಂ)– ಹಿಂದೂ ಸಮುದಾಯದ ಎಲ್ಲಾ ಶುಭ ಕಾರ್ಯಗಳು ಪಂಚಾಂಗದ ಆಧಾರದಲ್ಲೇ ನಡೆಯಲಿದ್ದು, ಪಂಚಾಂಗ ಅಷ್ಟು ಮಹತ್ವ ಹೊಂದಿದೆ. ಗ್ರಹಣ ಗೋಚರಿಸುವುದನ್ನು ಮುಂಗಡವಾಗಿಯೇ ತಿಳಿಸುವ ಶಕ್ತಿ ಪಂಚಾಂಗದ ಮುಹೂರ್ತಕ್ಕಿದ್ದು, ಇದಕ್ಕೆ ವೈಜ್ಞಾನಿಕ ಮನ್ನಣೆಯೂ ದೊರೆತಿದೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಹಮ್ಮಿಕೊಂಡಿರುವ ಮನೆ ಮನೆಗೆ ಒಂಟಿಕೊಪ್ಪಲ್ ಪಂಚಾಂಗ ವಿತರಣೆ ಅಭಿಯಾನಕ್ಕೆ ಮೈಸೂರಿನ ಒಂಟಿಕೊಪ್ಪಲಿನ ಆಂಡಾಳ್ ಮಂದಿರ ಆವರಣದಲ್ಲಿ ಶನಿವಾರ ಚಾಲನೆ ನೀಡಿ, ಮಾತನಾಡಿದರು.



ಮೈಸೂರಿನ ಒಂಟಿಕೊಪ್ಪಲಿನ ಆಂಡಾಳ್ ಮಂದಿರ ಆವರಣದಲ್ಲಿ ಶನಿವಾರ ಮನೆ ಮನೆಗೆ ಒಂಟಿಕೊಪ್ಪಲ್ ಪಂಚಾಂಗ ವಿತರಣೆ ಅಭಿಯಾನಕ್ಕೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು.

ಭೂಮಿ ಮೇಲಿನ ಪ್ರಾಕೃತಿಕ ಬದಲಾವಣೆಗಳನ್ನೂ ಪಂಚಾಂಗ ತಿಳಿಸುತ್ತದೆ. ಯುಗಾದಿ ಆಚರಣೆಯ ದಿನಾಂಕಕ್ಕೂ ಪಂಚಾಂಗದ ನಿರ್ಧಾರ ಮುಖ್ಯವಾಗುತ್ತದೆ. ಸಂವತ್ಸರ ಮಾಸ, ತಿಥಿ–ನಕ್ಷತ್ರ, ರಾಶಿಯ ಕಾಲದ ಫಳಿಗೆ ಮಾಹಿತಿ ಮೊದಲು ತಿಳಿದುಕೊಳ್ಳಬೇಕು. ಭಾರತದ ಇತಿಹಾಸದ ಕೆಲವು ವಿಷಯಗಳ ಸಂಬಂಧವೂ ಪಂಚಾಂಗದಲ್ಲಿ ಮಾಹಿತಿ ಲಭ್ಯವಿದೆ ಎಂದರು.

ವಿದ್ವಾಂಸ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಮಾತನಾಡಿ, ಒಂಟಿಕೊಪ್ಪಲ್ ಪಂಚಾಂಗವೂ ದೇಶ–ವಿದೇಶಗಳಲ್ಲಿ ಜನಪ್ರಿಯವಾಗಿದ್ದು, ಇದು ಮೈಸೂರಿನ ಹಿರಿಮೆ. ಧಾರ್ಮಿಕ ಸಂಪ್ರದಾಯ ಪರಿಪಾಲಿಸುವವರು ಪಂಚಾಂಗದಿಂದ ಮಾಹಿತಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಮಾತನಾಡಿ, ಪಂಚಾಂಗ ಆಧರಿಸಿಯೇ ಹಿಂದೂ ಸಮಾಜದಲ್ಲಿ ಯಾವುದೇ ಶುಭಕಾರ್ಯಗಳ ದಿನಾಂಕ ನಿಗದಿಯಾಗಲಿದೆ. ಮಳೆ–ಬೇಸಿಗೆ ಮತ್ತು ಚಳಿಗಾಲದ ಸ್ಥಿತಿಗತಿ ಸೂಕ್ಷ್ಮತೆಯನ್ನೂ ಮೊದಲೇ ತಿಳಿಯುವ ಶಕ್ತಿ ಪಂಚಾಂಗಕ್ಕಿದೆ. ಪ್ರತಿಯೊಬ್ಬ ಹಿಂದೂ ಮನೆಯಲ್ಲಿ ಪಂಚಾಂಗ ಓದಲು ಮುಂದಾದರೆ ನಮ್ಮ ಹಿಂದೂ ಸನಾತನ ಧರ್ಮ ಬೆಳೆಯುತ್ತದೆ ಎಂದು ಹೇಳಿದರು.

ಧಾರ್ಮಿಕ ಆಧ್ಯಾತ್ಮ ಕ್ಷೇತ್ರವಲ್ಲದೇ ಶುಭ–ಸಮಾರಂಭದ ಫಳಿಗೆ ಮುಹೂರ್ತ ತಿಳಿಸುವ ಒಂಟಿಕೊಪ್ಪಲ್ ಪಂಚಾಂಗ ರೂಪಿಸುವಲ್ಲಿ ರಾಮಕೃಷ್ಣಶಾಸ್ತ್ರಿ ಆದಿಯಾಗಿ ಅವರ ಪುತ್ರ ಕುಮಾರ್‌ಶಾಸ್ತ್ರಿ ಅವರ ಸೇವೆ ಮಹತ್ವದ್ದಾಗಿದೆ. ಇವರ ಈ ಸೇವೆ ಗುರುತಿಸಿ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಮಾತನಾಡಿ, ಪಠ್ಯಪುಸ್ತಕದಲ್ಲಿ ಭಗವದ್ಗೀತೆ ಸೇರ್ಪಡೆಗೊಳಿಸಬೇಕೆಂಬ ಅಭಿಪ್ರಾಯ ಸ್ವಾಗತಾರ್ಹ. ಗುಜರಾತ್ ಸರ್ಕಾರ ಶಾಲಾ ಪಠ್ಯದಲ್ಲಿ ಭಗವದ್ಗೀತೆ ಸೇರ್ಪಡೆ ಮಾಡಿದೆ. ಇದರಿಂದ 2022–23ನೇ ಸಾಲಿನಿಂದ 6ರಿಂದ 12ನೆ ತರಗತಿವರೆಗಿನ ಮಕ್ಕಳು ಭಗವದ್ಗೀತೆ ಕಲಿಯಲು ಸಾಧ್ಯವಾಗಲಿದೆ ಎಂದರು.

ರಾಜ್ಯದಲ್ಲೂ ಸರ್ಕಾರ ಈ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು. ಅಲ್ಲದೆ, ರಾಮಾಯಣ, ಮಹಾಭಾರತ ಮತ್ತು ತೆನಾಲಿ ರಾಮಕೃಷ್ಣನ ಕಥೆಗಳನ್ನು ಪಠ್ಯದಲ್ಲಿ ಅಳವಡಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಬ್ರಾಹ್ಮಣ ಸಮುದಾಯದ 250ಕ್ಕೂ ಹೆಚ್ಚು ಮಂದಿಗೆ ಒಂಟಿಕೊಪ್ಪಲ್ ಪಂಚಾಂಗ ವಿತರಿಸಲಾಯಿತು. ಬಿಜೆಪಿ ಪ್ರಭಾರಿ ಮೈ.ವಿ. ರವಿ ಶಂಕರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕ ಸಿ.ವಿ.ಗೋಪಿನಾಥ್, ಅರ್ಚಕರು– ಪುರೋಹಿತರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಬೃಂದಾವನ ಬ್ರಾಹ್ಮಣ ಸಂಘದ ಅಧ್ಯಕ್ಷ ಗುರುಮೂರ್ತಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಸಂಘಟನಾ ಕಾರ್ಯ ದರ್ಶಿ ಅಜಯ್ ಶಾಸ್ತ್ರಿ, ಮುಖಂಡರಾದ ಯೋಗಾ ನರಸಿಂಹ, ಮೋಹನ್ ಭಟ್, ಅಶ್ವತ್ಥ್ ನಾರಾಯಣ್, ಸತ್ಯನಾರಾಯಣ್, ಪುಟ್ಟಸ್ವಾಮಿ, ಪಂಕಜ್, ವಿನಯ್ ಕಣಗಾಲ್, ವಿಜಯ್ ಕುಮಾರ್, ರಂಗನಾಥ್, ಸುಚೀಂದ್ರ ಚಕ್ರಪಾಣಿ, ಪ್ರಶಾಂತ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಭಾನುವಾರ 27 ಮಾರ್ಚ್ 2022

ರೈತರು ಬದುಕು ಕಟ್ಟಿಕೊಳ್ಳಲು ಹೈನೋದ್ಯಮ ಸಹಕಾರಿ: ಜಿಟಿಡಿ



ಸುಂಟಿಕೊಪ್ಪ, ಮಾ.26– ಸಹಕಾರ ಕ್ಷೇತ್ರ, ಹೈನುಗಾರಿಕೆ ಇಲ್ಲದಿದ್ದರೆ ರೈತರು ಬದುಕು ಕಟ್ಟಿಕೊಳ್ಳಲು ಕಷ್ಟವಾಗುತ್ತಿತ್ತು ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಇಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟ, ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಸಹಕಾರ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಕೊಡಗಿನ ಸುಂಟಿಕೊಪ್ಪದ ಕೂರ್ಗ್ ಕೌಂಟಿ ರೆಸಾರ್ಟ್‌ನಲ್ಲಿ ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧಿಕಾರಿಗಳಿಗಾಗಿ ಆಯೋಜಿಸಿದ್ದ "ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು. ಬರಗಾಲ, ಪ್ರವಾಹ ಏನೇ ಸಂಕಷ್ಟ ಎದುರಾದರೂ ಹೈನುಗಾರಿಕೆ ಜನರ ಜೀವನಾಡಿ. ಆರ್ಥಿಕವಾಗಿ ಸದೃಢರಾಗಲು, ಬಡತನ ನಿರ್ಮೂಲನೆ ಹೈನುಗಾರಿಕೆಯಿಂದ ಸಾಧ್ಯ. ಇದರಿಂದ ಬಹಳಷ್ಟು ಕುಟುಂಬಗಳು ಬದುಕು ಕಟ್ಟಿಕೊಂಡಿದ್ದಾರೆ, ಈಗಲೂ ಕಟ್ಟಿಕೊಳ್ಳುತ್ತಿದ್ದಾರೆ. ಮಕ್ಕಳೇ ಅಲ್ಲದೇ ಎಲ್ಲರೂ ಆರೋಗ್ಯವಂತರಾಗಿರಲು ಹಾಲು ಬಹುಮುಖ್ಯವಾದ ಗುಣಮಟ್ಟದ ಆಹಾರ ಎಂದರು.

ಹಣ, ಅಧಿಕಾರ, ಐಶ್ವರ್ಯ ಶಾಶ್ವತವಲ್ಲ. ನಾವು ಪ್ರಾಮಾಣಿಕವಾಗಿ ಸಲ್ಲಿಸುವ ನಿಸ್ವಾರ್ಥ ಸೇವೆಯೇ ಶಾಶ್ವತ. ಅದೇ ನಮ್ಮನ್ನು ಕೊನೆವರೆಗೂ ಕಾಯುವುದು. ಹಾಗಾಗಿ ಎಲ್ಲರೂ ಪ್ರಾಮಾಣಿಕವಾಗಿ ಕರ್ತವ್ಯ ಸಲ್ಲಿಸಬೇಕು ಎಂದು ಸಲಹೆ ನೀಡಿದರು. ಹೈನುಗಾರಿಕೆಯಲ್ಲಿ ವಿಪುಲ ಉದ್ಯೋಗ ಅವಕಾಶಗಳಿದೆ. ನಿಮ್ಮ ಜೊತೆ ಡಿಸಿಸಿ ಬ್ಯಾಂಕ್‌ಗಳು ಇದಕ್ಕೆ ಆಸರೆಯಾಗಿವೆ. ಈ ಸದವಕಾಶವನ್ನು ಬಳಸಿಕೊಂಡು ಹೈನುಗಾರಿಕೆಯಲ್ಲಿ ಚಾಮರಾಜನಗರ ಜಿಲ್ಲೆ ಮುಂದೆ ಬರುವಂತೆ ಮಾಡಬೇಕು ಎಂದರು.

ಇದೇ ವೇಳೆ ಚಾಮರಾಜನಗರದಲ್ಲಿ ಸಹಕಾರ ಯೂನಿಯನ್ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಂ.ಎಂ.ನಾಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಚಾಮರಾಜನಗರ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್. ನಂಜುಂಡ ಪ್ರಸಾದ್, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಕಲ ಸಿದ್ಧತೆ

ಪರೀಕ್ಷಾ ಕೇಂದ್ರ ಸುತ್ತ ನಿಷೇಧಾಜ್ಞೆ



ಕುಶಾಲನಗರ, ಮಾ.26– ಇದೇ ಮಾರ್ಚ್ 28 ರಿಂದ ಏಪ್ರಿಲ್ 11 ರ ವರೆಗೆ ನಡೆಯುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗೆ ತಾಲೂಕು ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳಲ್ಲಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಕುಶಾಲನಗರ ತಾಲೂಕಿನಲ್ಲಿ ನಾಲ್ಕು ಪರೀಕ್ಷಾ ಕೇಂದ್ರಗಳನ್ನು ಗುರುತುಪಡಿಸಲಾಗಿದ್ದು, ಪರೀಕ್ಷೆಗೆ ಪೂರ್ವಭಾವಿಯಾಗಿ ಶನಿವಾರ ಶಿಕ್ಷಕರು ನೋಂದಣಿ ಸಂಖ್ಯೆಯನ್ನು ಡೆಸ್ಕ್ ಮೇಲೆ ಬರೆದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಕೇಂದ್ರದಲ್ಲಿ 12 ಕೊಠಡಿಗಳಲ್ಲಿ 230 ವಿದ್ಯಾರ್ಥಿ, ಫಾತಿಮ ಕಾನ್ವೆಂಟ್ ಕೇಂದ್ರದಲ್ಲಿ 14 ಕೊಠಡಿಯಲ್ಲಿ 276 ವಿದ್ಯಾರ್ಥಿಗಳು, ಫಾತಿಮ ಪ್ರೌಢಶಾಲೆಯ 7 ಕೊಠಡಿಗಳಲ್ಲಿ 142 ವಿದ್ಯಾರ್ಥಿಗಳು ಹಾಗೂ ಕೂಡಿಗೆ ಅಂಜೆಲಾ ಕಾನ್ವೆಂಟ್‌ನಲ್ಲಿ 8 ಕೊಠಡಿಗಳಲ್ಲಿ 140 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 788 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಈ ಕೇಂದ್ರಗಳಿಗೆ ತಾಲೂಕು ವ್ಯಾಪ್ತಿಯ 18 ಪ್ರೌಢಶಾಲೆ ಹಾಗೂ ಮೊರಾರ್ಜಿ ದೇಸಾಯಿ ಶಾಲೆಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಕೇಂದ್ರದ ಮುಖ್ಯ ಅಧೀಕ್ಷಕರಾಗಿ ಸರ್ಕಾರಿ ಪಿಯು ಕಾಲೇಜಿನ ಉಪ ಪ್ರಾಂಶುಪಾಲ ಪರಮೇಶ್, ಬಸವನಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಆಯಾಚ್ಚು, ಫಾತಿಮ ಪ್ರೌಢಶಾಲೆ ಮುಖ್ಯ ಶಿಕ್ಷಕ ಜೆಫ್ರಿ ಡಿಸೋಜ, ಕೂಡುಮಂಗಳೂರು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮ್‌ಕುಮಾರ್, ಪ್ರಶ್ನೆಪತ್ರಿಕೆ ಅಭಿರಕ್ಷಕ ಮೆ.ನಾ.ವೆಂಕಟನಾಯಕ್ ಹಾಗೂ 40ಕ್ಕೂ ಹೆಚ್ಚಿನ ಕೊಠಡಿ ಮೇಲ್ವಿಚಾರಕರನ್ನು ನಿಯೋಜನೆ ಮಾಡಲಾಗಿದೆ.

ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ನಕಲು ತಡೆಗಟ್ಟಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೇಂದ್ರಗಳಲ್ಲಿ ಸಿ.ಸಿ. ಟಿವಿ ಅಳವಡಿಸಲಾಗಿದೆ. ಮಕ್ಕಳಿಗೆ ಪರೀಕ್ಷೆ ಬರೆಯಲು ಅಡೆ–ತಡೆಯಾಗದಂತೆ ಮುನ್ನೆಚ್ಚರಿಕೆಯಾಗಿ ಸರಿಯಾದ ಫ್ಯಾನ್ ಮತ್ತು ಆಸನ ವ್ಯವಸ್ಥೆ ಮಾಡಲಾಗಿದೆ.


ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಣೆ ಮಾಡಲಾಗಿದ್ದು, ಪರೀಕ್ಷಾ ಕೇಂದ್ರದೊಳಗೆ ಮೊಬೈಲ್ ಫೋನ್ ತರುವಂತಿಲ್ಲ. ಪರೀಕ್ಷಾ ಕೇಂದ್ರದ ಸುತ್ತ–ಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ವಿ.ಸುರೇಶ್ ಹೇಳಿದರು.

ಕೊಡಗಿನ ಹಲವೆಡೆ ಮಳೆ

ಬೆಳೆಗಾರರಲ್ಲಿ ಹರ್ಷ

ಮಡಿಕೇರಿ, ಮಾ.26– ಬೇಸಿಗೆಯ ಬೇಗೆಯಿಂದ ಬಸವಳಿದಿದ್ದ ಮಡಿಕೇರಿ ನಗರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಶನಿವಾರ ಸಂಜೆ ವೇಳೆಗೆ ಭಾರೀ ಮಳೆ ಸುರಿದಿದೆ. ಗುಡುಗು–ಗಾಳಿ ಸಹಿತ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದ್ದು, ಧರೆಗೆ ತಂಪೆರೆದಂತಾಗಿದೆ. ಏಕಾಏಕಿ ಮಳೆ ಸುರಿದ ಹಿನ್ನೆಲೆಯಲ್ಲಿ ಸಾರ್ವಜನಿಕರು ಅಂಗಡಿ ಮಳಿಗೆಗಳ ಮುಂದೆ ಆಶ್ರಯ ಪಡೆದಿದ್ದು ಕಂಡು ಬಂತು.

ಮಡಿಕೇರಿ ನಗರ, ಗಾಳಿಬೀಡು, ಮಕ್ಕಂದೂರು, ಹೆಮ್ಮೆತ್ತಾಳು, ಮೇಘತ್ತಾಳು, ಮುಕ್ಕೋಡ್ಲು, ಹಟ್ಟಿಹೊಳೆ, ಮೇಕೇರಿ, ಹಾಕತ್ತೂರು, ಬಿಳಿಗೇರಿ ವ್ಯಾಪ್ತಿಯಲ್ಲಿ ಮಳೆಯಾಗಿದ್ದು, ಕಾಫಿ ಬೆಳೆಗಾರರಿಗೆ ವರವಾಗಿ ಪರಿಣಮಿಸಿದೆ. ಪ್ರಸ್ತುತ ಕಾಫಿ ಗಿಡದಲ್ಲಿ ಮೊಗ್ಗುಗಳು ಅರಳುತ್ತಿದ್ದು, ಇದೀಗ ಸುರಿದ ಮಳೆಯಿಂದ ಕಾಫಿ ಹೂ



ಅರಳಲು ಸಹಕಾರಿಯಾಗಿದೆ. ಇನ್ನು ಪಂಪ್ ಸೆಟ್‌ಗಳನ್ನು ಬಳಸಿ ನೀರು ಹಾಯಿಸುವ ಮೂಲಕ ಕಾಫಿ ಹೂಗಳನ್ನು ಅರಳಿಸಿದ್ದ ಬೆಳೆಗಾರರಿಗೆ ಇದೀಗ ಸುರಿದ ಮಳೆ ಬ್ಯಾಕಿಂಗ್ ನೀಡಿದ್ದು, ಬೆಳೆಗಾರರಿಗೆ ವರುಣ ನೆಮ್ಮದಿ ನೀಡಿದ್ದಾನೆ.

ಕೊಡಗಿನ ಶ್ರೀನಿವಾಸ್, ಅಶೋಕ್‌ಗೆ ರಂಗ ಪುರಸ್ಕಾರ





ವಿ.ಟಿ. ಶ್ರೀನಿವಾಸ್ ಮೂಡೆರ ಅಶೋಕ್

ಮೈಸೂರು, ಮಾ. 26– ವಿಶ್ವ ರಂಗ ಭೂಮಿ ದಿನದ ಅಂಗವಾಗಿ ಕೊಡಗಿನ ವಿ.ಟಿ. ಶ್ರೀನಿವಾಸ್ ಮತ್ತು ಮೂಡೆರ ಅಶೋಕ್ ಅವರನ್ನು ರಂಗಭೂಮಿ ಪ್ರತಿಷ್ಠಾನದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಸಂಚಾಲಕಿ ಅನಿತಾ ಕಾರ್ಯಪ್ಪ ತಿಳಿಸಿದ್ದಾರೆ.

ವಿ.ಟಿ. ಶ್ರೀನಿವಾಸ್: ಕೊಡಗಿನ ಸಂಗೀತ ಕ್ಷೇತ್ರದ ಹಿರಿಯ ಕಲಾವಿದ. ಹಾರ್ಮೋನಿಯಂ ಮತ್ತು ಕೀಬೋರ್ಡ್ ವಾದಕ. ಕೊಡಗಿನ ರಂಗಭೂಮಿ ಕ್ಷೇತ್ರದಲ್ಲಿ ಸಂಗೀತ ಸಂಯೋಜಿಸಿ ಸೇವೆ ಸಲ್ಲಿಸಿದ್ದಾರೆ. ಕೊಡಗಿನ ಪ್ರತಿಷ್ಠಿತ ರಂಗಸಂಸ್ಥೆ "ಸೃಷ್ಟಿ ಕೊಡಗುರಂಗ" ಮತ್ತು "ರಂಗಭೂಮಿ ಪ್ರತಿಷ್ಠಾನ ಟ್ರಸ್ಟ್"ನಲ್ಲಿ ಸಂಗೀತ ನಿರ್ದೇಶಕರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದ್ದಾರೆ. 40 ವರ್ಷಗಳ ಇವರ ಸುದೀರ್ಘ ಸೇವೆಗಾಗಿ ವಿಶ್ವ ರಂಗಭೂಮಿ ದಿನದ ಅಂಗವಾಗಿ "ರಂಗಭೂಮಿ ಪ್ರತಿಷ್ಠಾನ ಪ್ರಶಸ್ತಿ" ನೀಡಲಾಗಿದೆ.

ಮೂಡೆರ ಅಶೋಕ್: ಕೊಡಗಿನ ರಂಗಭೂಮಿಯ ಪ್ರತಿಭಾವಂತ ನಟ. ಕೊಡವ ನಾಟಕ ಕ್ಷೇತ್ರಕ್ಕೆ, ಆಧುನಿಕ ಕೊಡವ ರಂಗಭೂಮಿಗೆ ಇವರ ಕಾಣಿಕೆ ದೊಡ್ಡದು. ಕೊಡವ ರಂಗ ರೆಪರ್ಟರಿಯಲ್ಲಿ ನಟರಾಗಿ ದಿವಾನ್ ಬೋಪಣ್ಣ, ಚೌರೀರ ಅಪ್ಪಣ ದಿವಾನ್, ದಂಗೆಯ ಮುಂಚಿನ ದಿನಗಳು, ಸೇರಿದಂತೆ ಕೊಡವ, ಕನ್ನಡ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಮಾಜ ಸೇವಕರಾಗಿ ಕೊಡಗಿನ ಯುವ ಮುಖಂಡರಾಗಿ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಇವರ ರಂಗ ಸಾಂಸ್ಕೃತಿಕ ಸೇವೆಗಾಗಿ ವಿಶ್ವರಂಗಭೂಮಿ ದಿನದ ಅಂಗವಾಗಿ "ರಂಗಭೂಮಿ ಪ್ರತಿಷ್ಠಾನ ಪ್ರಶಸ್ತಿ" ನೀಡಲಾಗಿದೆ.

ಶ್ರೀ ಕುರುಂಭ ಭಗವತಿ ದೇವಸ್ಥಾನದ ವಾರ್ಷಿಕೋತ್ಸವ

ಗುಡ್ಡೆಹೊಸೂರು, ಮಾ.26– ಇಲ್ಲಿಗೆ ಸಮೀಪದ ರಂಗಸಮುದ್ರ ಗ್ರಾಮದ ಶ್ರೀ ಕುರುಂಭ ಭಗವತಿ ದೇವಸ್ಥಾನದ 24ನೇ ಭರಣಿ ವಾರ್ಷಿಕ ಮಹೋತ್ಸವವು ಮಾ.28 ಮತ್ತು 29ರಂದು ನಡೆಯಲಿದೆ.

ಸೋಮವಾರ ಬೆಳಗ್ಗೆಯಿಂದ ವಿವಿಧ ಪೂಜಾಕಾರ್ಯ ನಡೆದು ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ಮುತ್ತಪ್ಪನ ಪಯಂಗುತ್ತಿ ಇಡುವ ಕಾರ್ಯ ನಡೆಯಲಿದೆ. ಮಾ.29ರಂದು ಪೂರ್ವಾಹ್ನ 1 ಗಂಟೆಯಿಂದ ತಾಲಪೋಲಿ ಗುರುಧಿ ದರ್ಪಣಂ ನಡೆಯಲಿದೆ.

ಕಾರ್ಮಿಕ ಸಂಘಟನೆಗಳ ಮುಷ್ಕರಕ್ಕೆ ಸಿಐಟಿಯು ಬೆಂಬಲ



ವಿರಾಜಪೇಟೆ, ಮಾ.26– ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ಮಾ.28 ಮತ್ತು 29 ರಂದು ನಡೆಯುವ ಮುಷ್ಕರಕ್ಕೆ ಕೊಡಗಿನ ಸಿಐಟಿಯು ಸಂಘಟನೆಯಿಂದ ಬೆಂಬಲ ನೀಡುವುದಾಗಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎ.ಸಿ. ಸಾಬು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದ ಪ್ರಜಾಪ್ರಭುತ್ವ ಮೌಲ್ಯಗಳ ಉಳಿವಿಗಾಗಿ, ಜನತೆಯ ಹಕ್ಕುಗಳ ಸಂರಕ್ಷಣೆಗಾಗಿ ರೈತರು ಹಾಗೂ ಕಾರ್ಮಿಕರ ವಿರೋಧಿ ಕಾನೂನುಗಳ ರದ್ಧತಿಗಾಗಿ ಮತ್ತು ಬೆಲೆ ಏರಿಕೆ ನಿಯಂತ್ರಣ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ ಸಿ.ಐ.ಟಿ.ಯು ಕೊಡಗು ಸಂಘಟನೆ ಬೆಂಬಲ ನೀಡುತ್ತಿದ್ದು, ಕೊಡಗಿನ ವಿರಾಜಪೇಟೆ, ಸೋಮವಾರಪೇಟೆ ಹಾಗೂ ಮಡಿಕೇರಿಯಲ್ಲಿ ಮುಷ್ಕರ ನಡೆಯಲಿದೆ ಮಾ, 29 ರಂದು ಜಿಲ್ಲೆಯ ಎಲ್ಲಾ ಕಾರ್ಮಿಕರು ಮತ್ತು ವಿವಿಧ ವೃತ್ತಿ ಪರ ಕಾರ್ಮಿಕರು ರೈತರು ಸೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಮುಷ್ಕರ ನಡೆಸಲಾಗುವುದು. ಕೇಂದ್ರ ಸರ್ಕಾರ ಕೋವಿಡ್ ಸಂಕಷ್ಟದಲ್ಲಿರುವರಿಗೆ ಕಿಟ್‌ಗಳನ್ನು ನೀಡಿದರೂ ಅದು ಸಮರ್ಪಕವಾಗಿ ತಲುಪಿಲ್ಲ. ಕೋವಿಡ್ ಸಂಕಷ್ಟದಿಂದಾಗಿ ಕಾರ್ಮಿಕರು ರೈತರು ವಿವಿಧ ವೃತ್ತಿಯ ಕಾರ್ಮಿಕರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಆದರೂ ಕೇಂದ್ರ ಸರ್ಕಾರ ಕಾರ್ಪೋರೇಟ್ ವಲಯದ ಓಲೈಕೆಯಲ್ಲಿದೆ. ಅಡುಗೆ ಎಣ್ಣೆ, ಅನಿಲ, ಪೆಟ್ರೋಲ್, ಹೀಗೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು ಅದನ್ನು ತಡೆಯುವಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ವಿಫಲವಾಗಿದ್ದು ಇದರಿಂದ ಜನರ ಬದುಕು ದುಸ್ತರವಾಗುತ್ತಿದೆ ಎಂದರು.

ಸಿಐಟಿಯು ಸಂಘಟನೆಯ ಅಧ್ಯಕ್ಷ ಎ.ಮಹಾದೇವ್ ಮಾತನಾಡಿ, ಕೇಂದ್ರ ಸರ್ಕಾರ ಕಾರ್ಮಿಕರ 44 ಕಾಯಿದೆಯನ್ನು ಕೈ ಬಿಟ್ಟು, ಇಗ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಕೊಡಗಿನಲ್ಲಿ ರೈತರ ಕೃಷಿಗೆ ಸೂಕ್ತ ಬೆಲೆ ಇಲ್ಲ. ಬೆಲೆಯಲ್ಲಿ ಸಾಕಷ್ಟು ಗೊಂದಲ ಆಗಿದೆ. ಅಂಗನವಾಡಿ ಕಾರ್ಯಕರ್ತರಿಗೆ ಹಾಗೂ ಪಂಚಾಯಿತಿ ನೌಕರರಿಗೆ ಸೂಕ್ತ ವೇತನ ನೀಡುತ್ತಿಲ್ಲ. ಈ ಎಲ್ಲಾ ಬೇಡಿಕೆಗಳಿಗಾಗಿ ಆಗ್ರಹಿಸಿ ಮುಷ್ಕರ ನಡೆಯುತ್ತಿದೆ ಎಂದರು.

ಸಂಘಟನೆಯ ಉಪಾಧ್ಯಕ್ಷ ಭರತ್ ಮಾತನಾಡಿ, ರೈತರು ಹಾಗೂ ವೃತ್ತಿಪರ ಕಾರ್ಮಿಕರಿಗೆ ಸೂಕ್ತ ಸೌಲಭ್ಯಗಳು ಇಲ್ಲದಂತಾಗಿದ್ದು. ಆಶಾ ಕಾರ್ಯಕರ್ತರು, ಅಂಗನವಾಡಿ ಮತ್ತು ಬಿಸಿಯೂಟ ಕೆಲಸಗಾರರನ್ನು ಗುರುತಿಸಿ ಅವರಿಗೆ ಮಾಸಿಕ 26 ಸಾವಿರ ರೂ ಕನಿಷ್ಠ ವೇತನ ನೀಡಬೇಕೆಂದು ಸರಕಾರವನ್ನು ಆಗ್ರಹಿಸಿದರೂ ಸ್ಪಂದನೆ ಇಲ್ಲ. ಅಲ್ಲದೆ ದೇಶದ ಸುಪ್ರೀಂಕೋರ್ಟ್ 18 ಸಾವಿರ ಕನಿಷ್ಠ ವೇತನಕ್ಕೆ ಸೂಚಿಸಿದ್ದರು ಜಾರಿಯಾಗಿಲ್ಲ. ಎಂದರಲ್ಲದೆ ಸರ್ಕಾರ ಪಡಿತರ ಚೀಟಿದಾರರಿಗೆ ಒಬ್ಬರಿಗೆ 10 ಕೆ.ಜಿ. ಅಕ್ಕಿಯನ್ನು ಪ್ರತಿ ತಿಂಗಳು ನೀಡಬೇಕು ಎಂದರು.

ಸಮಾಜದ ಅಭಿವೃದ್ಧಿಗೆ ಮಠಗಳು ಶ್ರಮಿಸುತ್ತಿವೆ: ಸುತ್ತೂರು ಶ್ರೀ



ಗುಂಡ್ಲುಪೇಟೆ, ಮಾ.26(ಸೋಮ್.ಜಿ)– ಸಮಾಜದ ಅಭಿವೃದ್ಧಿಗಾಗಿ ವೀರಶೈವ ಮಠಗಳು ನಿರಂತರವಾಗಿ ಶ್ರಮಿಸುತ್ತಿವೆ ಎಂದು ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಪಡುಗೂರು ಅಡವಿ ಮಠದಿಂದ ನಿರ್ಮಿಸಿದ್ದ ಹಿರಿಯರ ಮನೆ, ಗದ್ದುಗೆ ಲೋಕಾರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಸಮಾಜದ ಸ್ವಾಸ್ಥ್ಯ ಕಾಪಾಡಿ ಸಂಸ್ಕಾರವನ್ನು ಮಠಮಾನ್ಯಗಳು ನಿರಂತರವಾಗಿ ಮಾಡುತ್ತಿದ್ದು, ಮಠಾಧೀಶರು ತಮ್ಮ ಆತ್ಮಸಾಕ್ಷಿಯಾಗಿ ಸಮಾಜದ ಏಳಿಗೆಗೆ ದುಡಿಯುತ್ತಿದ್ದಾರೆ. ವೀರಶೈವ ಮಠಗಳು ತಮ್ಮ ಭಕ್ತರಿಗೆ ಎಂಥ ಸಂದರ್ಭದಲ್ಲಿಯೂ ಪ್ರಸಾದ ನೀಡುವ ಸಂಪ್ರದಾಯ ಪಾಲಿಸುತ್ತಿವೆ ಎಂದರು.

ಅಮಾನವೀಯ ಮನಸ್ಸಿನ ಜನರಿಂದ ಸಮಾಜದಲ್ಲಿ ಅಶಾಂತಿ ಹೆಚ್ಚಾಗುತ್ತಿದೆ. ಇತ್ತೀಚಿಗೆ ಮಠಗಳ ಸಂಖ್ಯೆ ಕಡಿಮೆಯಾಗುತ್ತಿರುವ ಕಾರಣ ಭಕ್ತರು ಇವುಗಳನ್ನು ಉಳಿಸಲು ಹಾಗೂ ಬೆಳೆಸಲು ಮುಂದಾಗಬೇಕು. ಪ್ರೀತಿ ವಿಶ್ವಾಸದೊಂದಿಗೆ ಭಕ್ತರು ಮತ್ತು ಮಠಾಧಿಪತಿಗಳ ಸಂಬಂಧ ಬೆಸೆದುಕೊಂಡಾಗ ಮಾತ್ರ ಮಠಗಳು ಉಳಿಯಲು ಸಾಧ್ಯ. ಈ ನಿಟ್ಟಿನಲ್ಲಿ ಭಕ್ತರು ಮಠಕ್ಕೆ ಕಾಣಿಕೆ ನೀಡುವುದರೊಂದಿಗೆ ನಿರಂತರವಾದ ಬಾಂಧವ್ಯವನ್ನು ಹೊಂದಿ ಸೇವೆ ಮಾಡಿದಾಗ ಮಠವೂ ಬೆಳವಣಿಗೆಯಾಗುತ್ತದೆ. ಇದನ್ನು ಅರಿತು ನಿಸ್ವಾರ್ಥವಾಗಿ ಸೇವೆ ಸಲ್ಲಿಸಲು ಭಕ್ತರು ಮುಂದಾಗಬೇಕು ಎಂದರು.

ಹಿರಿಯರ ಮನೆಯನ್ನು ಉದ್ಘಾಟಿಸಿದ ಶಾಸಕ ಸಿ.ಎಸ್.ನಿರಂಜನಕುಮಾರ ಮಾತನಾಡಿ, ಸಮಾಜಕ್ಕೆ ಮಠ ಮಾನ್ಯಗಳ ಕೊಡುಗೆ ಅಪಾರವಾಗಿದೆ. ಇದರ ಬಗ್ಗೆ ತಿಳಿಯದೇ ಕೆಲವರು ಮಠಾಧೀಶರ ಬಗ್ಗೆ ಅನಗತ್ಯವಾಗಿ ಮಾತನಾಡುವ ಮೂಲಕ ತಮ್ಮ ಸಣ್ಣತನ ಪ್ರದರ್ಶಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪಡಗೂರು ಅಡವಿ ಮಠಾಧ್ಯಕ್ಷ ಶಿವಲಿಂಗೇಂದ್ರ ಸ್ವಾಮೀಜಿ ಮಾತನಾಡಿ, ಎಲ್ಲಾ ಮಠಗಳೂ ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದರೂ ರಾಜ್ಯದಲ್ಲಿ 5 ಸಾವಿರದಷ್ಟಿದ್ದ ಮಠಗಳ ಸಂಖ್ಯೆ ಇತ್ತೀಚೆಗೆ 900ಕ್ಕಿಳಿದಿವೆ. ಇದರಿಂದ ಭಕ್ತರು ಮಠಗಳ ಉಳಿವಿಗೆ ನೆರವಾಗಬೇಕಾಗಿದೆ. ಸ್ವಾತಂತ್ರ್ಯ ಪೂರ್ವದಿಂದಲೇ ಶ್ರೀಮಠವು ಕಬ್ಬಹಳ್ಳಿ ಹಾಗೂ ಮೈಸೂರಿನಲ್ಲಿ ಶಾಲೆ ಹಾಗೂ ಹಾಸ್ಟೆಲ್ ಆರಂಭಿಸಿ ಬಡ ಹಾಗೂ ಗ್ರಾಮೀಣ ಪ್ರದೇಶಗಳ ಮಕ್ಕಳಿಗೆ ಜಾತ್ಯತೀತವಾಗಿ ಶಿಕ್ಷಣ ನೀಡುತ್ತಾ ಬಂದಿದೆ. ಸದ್ಯ ಪಟ್ಟಣದ ಮಹಾಮನೆ ಶಿಕ್ಷಣ ಯೋಜನೆಯಲ್ಲಿ 5 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ, ಊಟ, ವಸತಿ, ಬಟ್ಟೆ ಎಲ್ಲವನ್ನೂ ದಾನಿಗಳ ನೆರವಿನಿಂದಲೇ ಉಚಿತವಾಗಿ ನೀಡಲಾಗುತ್ತಿದೆ. ಒಮ್ಮೆ ತಾವು ಭಕ್ತರ ಮನೆಗೆ ಪೂಜೆಗೆ ಹೋಗುವಾಗ ಎದುರಾದ ವೃದ್ಧ ದಂಪತಿಯೊಬ್ಬರು ಮಕ್ಕಳು ಹೊರ ಹಾಕಿದ್ದರಿಂದ ಕಿರಿದಾದ ಮನೆಯಲ್ಲಿ ವಾಸಿಸುತ್ತಿರುವ ಬಗ್ಗೆ ಹೇಳಿ ಕಣ್ಣೀರು ಹಾಕಿದ್ದರಿಂದ ವೃದ್ಧಾಶ್ರಮ ಆರಂಭಿಸುವ ಯೋಚನೆ ಬಂದಿತು. ಒಂದು ಕೋಟಿ ವೆಚ್ಚದ ಹಿರಿಯರ ಮನೆಗೆ 80 ಲಕ್ಷದಷ್ಟು ನೆರವನ್ನು ದಾನಿಗಳು ನೀಡಿದ್ದಾರೆ. ಇದರ ಸದ್ಬಳಕೆ ಆಗಬೇಕು ಎಂದರು. ಬಸವಭವನ ನಿರ್ಮಿಸಲು ನಿವೇಶನಕ್ಕಾಗಿ ಮಠದ ವತಿಯಿಂದ ಒಂದು ಲಕ್ಷ ರೂಪಾಯಿಗಳನ್ನು ನೀಡುವುದಾಗಿ ಸಭೆಯಲ್ಲಿ ಘೋಷಿಸಿದರು.

ಬಸವಕೇಂದ್ರದ ಜಿಲ್ಲಾಧ್ಯಕ್ಷ ಕೊಡಸೋಗೆ ಶಿವಬಸಪ್ಪ ಮಾತನಾಡಿ, ವೀರಶೈವ ಸಮಾಜದಲ್ಲಿನ ನಾನಾ ಪಂಗಡಗಳು ಮೀಸಲಾತಿಗಾಗಿ ಹೋರಾಡುತ್ತಿರುವುದರಿಂದ ಸಮಾಜ ದುರ್ಬಲವಾಗಲಿದೆ. ಆದ್ದರಿಂದ ಸುತ್ತೂರು ಹಾಗೂ ಸಿದ್ಧಗಂಗಾ ಮಠದ ಶ್ರೀಗಳು ಸಮಾಜದ ಒಗ್ಗಟ್ಟಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಚಿಕ್ಕತುಪ್ಪೂರು ಶಿವಪೂಜಾ ಮಠಾಧ್ಯಕ್ಷ ಚನ್ನವೀರ ಸ್ವಾಮೀಜಿ, ಕುಂದೂರು ಮಠಾಧ್ಯಕ್ಷರಾದ ಡಾ.ಸಿ.ಶರತ್ ಚಂದ್ರ, ಹರವೆ ಮಠಾಧ್ಯಕ್ಷರಾದ ಸರ್ಪಭೂಷಣ ಸ್ವಾಮೀಜಿ, ಮುಡಿಗುಂಡ ಮಠಾಧ್ಯಕ್ಷರಾದ ಶ್ರೀಕಂಠ ಸ್ವಾಮೀಜಿ, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಸಂಗಮ ಪ್ರತಿಷ್ಠಾನದ ಅಧ್ಯಕ್ಷ ಹೆಚ್.ಎಂ. ಗಣೇಶ್‌ಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಮೈಸೂರು– ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಎಂ.ಪಿ.ಸುನೀಲ್, ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್ ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಹಾಜರಿದ್ದರು. ಶ್ರೀ ಮಠದ ವತಿಯಿಂದ ಭಕ್ತರಿಗೆ ಪ್ರಸಾದ ವಿನಿಯೋಗ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ



ಚಾಮರಾಜನಗರ, ಮಾ.26– ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ನಗರದಲ್ಲಿ ಶನಿವಾರ ಜಿಲ್ಲಾ ಯುವ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆಲ್ಲಂಬಳ್ಳಿ ನಾಗೇಂದ್ರ ಮಾತನಾಡಿ, ಪ್ರಧಾನ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ದೇಶ ಮತ್ತು ರಾಜ್ಯದಲ್ಲಿ ಆಡಳಿತಕ್ಕೆ ಬಂದ ಮೇಲೆ ನಿರಂತರವಾಗಿ ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದು, ಬಡ ಮತ್ತು ಮಧ್ಯಮ ವರ್ಗದ ಜನತೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಸರ್ಕಾರ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಯೋಗೇಂದ್ರ, ಶ್ರೀನಿವಾಸ್, ಹೆಚ್.ಎನ್.ಮಧು, ಕಾರ್ಯದರ್ಶಿಗಳಾದ ಸೋಮೇಶ್, ಮಂಜು, ನಗರ ಬ್ಲಾಕ್ ಅಧ್ಯಕ್ಷ ತೌಸೀಫ್, ಸಾಮಾಜಿಕ ಜಾಲತಾಣ ಅಧ್ಯಕ್ಷ ಸೈಯದ್ ಮುಸ್ಯೆಯಿಬ್, ಎನ್‌ಐಸಿಯು ಘಟಕದ ಅಧ್ಯಕ್ಷ ಮೋಹನ್, ವೆಂಕಿ, ರಾಜು, ಉಲ್ಲಾಸ್, ಅರುಣ್, ಮಹೇಶ್‌ಪ್ರಸಾದ್, ಸಂತು, ಸತೀಶ್ ಇದ್ದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮನೆಗಳಿಗೆ ಶಿಕ್ಷಣಾಧಿಕಾರಿ ಭೇಟಿ



ಕೊಳ್ಳೇಗಾಲ, ಮಾ.26(ನಾಗೇಂದ್ರಸ್ವಾಮಿ)– ತಾಲೂಕಿನ ಹರಳೆ, ಸುರಾಪುರ, ಮುಡಿಗುಂಡದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಜ್ಜಾಗಿರುವ ವಿದ್ಯಾರ್ಥಿಗಳ ಮನೆಗೆ ಹಾಗೂ ರಾತ್ರಿ ಪಾಳಿಯಲ್ಲಿ ನಡೆಯುತ್ತಿರುವ ತರಗತಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಪಾಟೀಲ್ ಭೇಟಿ ನೀಡಿ ಮಕ್ಕಳಲ್ಲಿ ಹೆಚ್ಚು ಅಂಕ ಗಳಿಸಲು ಹುರಿದುಂಬಿಸಿ ಪ್ರೋತ್ಸಾಹಿಸಿದರು.

ಈ ವೇಳೆ ನಿಮಗೆ ಶೈಕ್ಷಣಿಕ ಹಾಗೂ ಆರ್ಥಿಕ ಸಮಸ್ಯೆಗಳಿದ್ದಲ್ಲಿ ನನ್ನ ಗಮನಕ್ಕೆ ತನ್ನಿ ನನ್ನ ಕೈಲಾದ ಸಹಾಯ ಮಾಡುತ್ತೇನೆ. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಒತ್ತಡಕ್ಕೊಳಗಾಗದೆ ವ್ಯಾಸಂಗ ಮಾಡಿ, ಪರೀಕ್ಷಾ ಭಯಕ್ಕೆ ಒಳಗಾಗಬೇಡಿ, ಭಯಬಿಟ್ಟು ಪರೀಕ್ಷೆ ಬರೆಯಿರಿ ಎಂದು ಸಲಹೆ ನೀಡಿದರು.

ಹರಳೆ ಗ್ರಾಮದ ನಾಯಕ ಬೀದಿ, ಅಂಬೇಡ್ಕರ್ ಬಡಾವಣೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಸಜ್ಜಾಗಿರುವ ಮಹದೇವಸ್ವಾಮಿ, ಚಿಕ್ಕಬೈರ, ಧನಲಕ್ಷ್ಮೀ, ಸಂಗೀತ, ನಿತಿನ್, ಸಿದ್ದಾರ್ಥ, ಅಜಯ್, ವರ್ಷಿತಾ, ಭಾಗ್ಯಮ್ಮ, ಮುಡಿಗುಂಡದ ಶರ್ಮಿಳಾ ಸೇರಿದಂತೆ ಹಲವು ವಿದ್ಯಾರ್ಥಿಗಳ ಮನೆಮನೆಗಳಿಗೆ ತೆರಳಿ ಪೋಷಕರನ್ನು ಮಾತನಾಡಿಸಿ, ನಿಮ್ಮ ಮಕ್ಕಳು ತರಗತಿಯಲ್ಲಿ ಉತ್ತಮ ರೀತಿ ಕಲಿಕೆಯಲ್ಲಿದ್ದಾರೆ. ನೀವು ಮನೆಯಲ್ಲಿ ವ್ಯಾಸಂಗಕ್ಕೆ ಪ್ರೋತ್ಸಾಹ ನೀಡಿ ಎಂದು ತಿಳಿಸಿದರು.

ಸುರಾಪುರ ಶಾಲೆಗೆ ಭೇಟಿ: ಸುರಾಪುರ ಪ್ರೌಢಶಾಲೆಗೆ ಭೇಟಿ ನೀಡಿದ ಬಿಇಓ ರಾತ್ರಿ ಪಾಳಿಯಲ್ಲಿ ಕಲಿಕೆಯಲ್ಲಿರುವ ಮಕ್ಕಳ ಪ್ರಗತಿ ವೀಕ್ಷಿಸಿ, ಪರೀಕ್ಷಾ ಭಯಬಿಟ್ಟು ತಾಳ್ಮೆಯಿಂದ ಪರೀಕ್ಷೆ ಬರೆದು ಯಶಸ್ವಿಯಾಗಿ ಎದು ಸಲಹೆ ನೀಡಿದರು.


ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕ ಚಿಕ್ಕರಾಜು, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಶಿವರಾಜು, ಸಿಆರ್‌ಪಿ ನಾಗರಾಜು, ಮುಖ್ಯಶಿಕ್ಷಕ ಲೋಕೇಶ್, ಮಹದೇವು ಇನ್ನಿತರರು ಇದ್ದರು.

ಶಿವರಾಮಪ್ಪ ನಿಧನ



ಚಾಮರಾಜನಗರ, ಮಾ.26– ತಾಲೂಕಿನ ಪುಟ್ಟನಪುರ ಗ್ರಾಮದ ಶಿವರಾಮಪ್ಪ(65) ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಳಿಯ ರೈತ ಮುಖಂಡ ದೇಮಹಳ್ಳಿ ಮಹದೇವಪ್ರಸಾದ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಸ್ವಗ್ರಾಮ ಪುಟ್ಟನಪುರದಲ್ಲಿ ನಡೆಯಲಿದೆ.

ಸಕಾಲದಲ್ಲಿ ಸಾಲ ಮರು ಪಾವತಿಸಲು ಸಲಹೆ



ಬೇಗೂರು, ಮಾ.26(ಕಿರಣ್)– ಸಾಲ ಪಡೆದ ಸಂಘಗಳು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದರೆ ಬ್ಯಾಂಕ್‌ನ ಅಭಿವೃದ್ಧಿಯಾಗುತ್ತದೆ ಎಂದು ಮೈಸೂರು ಮತ್ತು ಚಾಮರಾಜನಗರ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಎಂ.ಪಿ.ಸುನೀಲ್ ಹೇಳಿದರು.

ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವಸಹಾಯ ಸಂಘಗಳಿಗೆ ಸಾಲ ಚೆಕ್ ವಿತರಿಸಿ ಮಾತನಾಡಿ ಅವರು, ಸಕಾಲದಲ್ಲಿ ಸಾಲ ಮರು ಪಾವತಿ ಮಾಡುವುದರಿಂದ ಮುಂದಿನ ಆರ್ಥಿಕ ಸಾಲಿನಲ್ಲಿ ಸಂಘಗಳಿಗೆ ಎರಡು ಪಟ್ಟು ಹೆಚ್ಚಿನ ಸಾಲ ವಿತರಿಸಲಾಗುತ್ತದೆ ಎಂದರು.

ಈ ವೇಳೆ ಬೇಗೂರು ಪಿಎಸಿಸಿ ಬ್ಯಾಂಕ್‌ನ ಅಧ್ಯಕ್ಷ ಟಿ.ಎಸ್. ರವಿಕುಮಾರ್, ಉಪಾಧ್ಯಕ್ಷ ನಾಗಶೆಟ್ಟಿ, ನಿರ್ದೇಶಕರಾದ ನಾರಾಯಣ್, ರಮೇಶ್, ರಾಚಪ್ಪ ನಂದೀಶ್, ಮಹದೇವ್, ರತ್ನಮ್ಮ ಸಿಇಓ ಶ್ರೀನಿವಾಸ ಶೆಟ್ಟಿ, ಮಹಿಳಾ ಸಂಘದ ಮೇಲ್ವಿಚಾರಕ ಚಂದ್ರಮೌಳಿ, ಸ್ವಾಮಿ ಇದ್ದರು.

ಹನೂರು: ಬೃಹತ್ ಉದ್ಯೋಗ ಮೇಳ ಯಶಸ್ವಿ



ಹನೂರು, ಮಾ.26(ಸೋಮು)– ಪಟ್ಟಣದ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ನಡೆದ ಬೃಹತ್ ಉದ್ಯೋಗ ಮೇಳ ಯಶಸ್ವಿಯಾಯಿತು. ಮೇಳದಲ್ಲಿ ನೂರಾರು ಕಂಪನಿಗಳು ಪಾಲ್ಗೊಂಡಿದ್ದು, ಸಾವಿರಾರು ಉದ್ಯೋಗ ಆಕಾಂಕ್ಷಿಗಳು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದರು.

ಉದ್ಯೋಗಕ್ಕೆ ಅರ್ಹರಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಯಿತು. ಮೇಳದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಉದ್ಯೋಗ ಆಕಾಂಕ್ಷಿಗಳಿಗೂ ಬೆಳಗಿನ ತಿಂಡಿ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು. ತಾಲೂಕಿನ ಜನತೆ ಉದ್ಯೋಗ ಮೇಳದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದು ಕಂಡು ಬಂದಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ಕೋಟೆ ಶಿವಣ್ಣ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪಂಗಡ ಸೇರಿದಂತೆ ಹಿಂದುಳಿದ ವರ್ಗದವರೇ ಹೆಚ್ಚಾಗಿರುವ ಹನೂರು ತಾಲೂಕಿನಲ್ಲಿ ನಿರುದ್ಯೋಗಿಳಿಗೆ ಉದ್ಯೋಗ ಕಲ್ಪಿಸಲು ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾ ಸಂಚಾಲಕ ಬಿ.ವೆಂಕಟೇಶ್ ಅವರು ಪಟ್ಟಣದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಬಿ.ವೆಂಕಟೇಶ್ ಹಿಂದಿನಿಂದಲೂ ಕ್ಷೇತ್ರದಲ್ಲಿ ಅನೇಕ ಜನಪರ ಕಾರ್ಯಗಳನ್ನು ಕೈಗೊಂಡು ಉತ್ತಮ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳುತ್ತಾ ಬಂದಿದ್ದಾರೆ. ಎಲ್ಲರೂ ಇಂತಹ ಕಾರ್ಯಗಳನ್ನು ಮಾಡಲು ಮುಂದೆ ಬರುವುದಿಲ್ಲ. ಸಮಾಜಕ್ಕೆ ವೆಂಕಟೇಶ್ ಅಂತಹವರ ಸೇವೆ ಅಗತ್ಯವಿದೆ ಮುಂದಿನ ದಿನಗಳಲ್ಲಿಯೂ ಸಹ ವೆಂಕಟೇಶ್ ಇಂತಹ ಉತ್ತಮ ಕಾರ್ಯಗಳನ್ನು ಕೈಗೊಳ್ಳಲಿ ಎಂದು ಆಶಿಸಿದರು. ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಬಿಜೆಪಿ ಒಬಿಸಿ ರಾಜ್ಯಾಧ್ಯಕ್ಷ ನ.ಲ.ನರೇಂದ್ರಬಾಬು ಮಾತನಾಡಿ, ಜಿಲ್ಲೆಯಲ್ಲಿ ಹಿಂದುಳಿದವರೇ ಹೆಚ್ಚಾಗಿದ್ದಾರೆ. ಬಿಜೆಪಿ ಹಿಂದುಳಿದ ವರ್ಗಗಳಿಂದ ಇಂತಹ ಉದ್ಯೋಗ ಮೇಳವನ್ನು ಆಯೋಜಿಸಿರುವುದರಿಂದ ಈ ಭಾಗದ ನಿರುದ್ಯೋಗಿಗಳ ಜೀವನಕ್ಕೆ ದಾರಿ ದೀಪವಾಗಲಿದೆ. ಸ್ಪರ್ಧಾತ್ಮಕ ಈ ಯುಗದಲ್ಲಿ ಉದ್ಯೋಗ ಆಕಾಂಕ್ಷಿಗಳು ತಮಗೆ ಸಿಗುವ ಕೆಲಸದಲ್ಲಿ ತೃಪ್ತಿ ಹೊಂದಿ ಶ್ರದ್ಧೆಯಿಂದ ಕಾಯಕದಲ್ಲಿ ತೊಡಗುವುದರಿಂದ ಯಶಸ್ಸು ಸಾಧ್ಯ ಎಂದರು.

ಬಿಜೆಪಿ ಒಬಿಸಿ ಮೋರ್ಚಾದ ಜಿಲ್ಲಾ ಸಂಚಾಲಕ ಬಿ.ವೆಂಕಟೇಶ್ ಮಾತನಾಡಿ, ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗ ಒದಗಿಸುವ ದಿಸೆಯಲ್ಲಿ ಸುಮಾರು 130ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳನ್ನು ಒಗ್ಗೂಡಿಸಿ, ಉದ್ಯೋಗ ಮೇಳ ಆಯೋಜಿಸಲಾಗಿದೆ. ನಿರುದ್ಯೋಗಿಗಳು ಈ ಅನುಕೂಲವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉಪ್ಪಾರ ಅಭಿವೃದ್ಧಿ ನಿಗಮದ ಗಿರೀಶ್ ಉಪ್ಪಾರ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಬಾಬುಪತ್, ಬಿಜೆಪಿ ಜಿಲ್ಲಾ ಎಸ್‌ಟಿ ಮೋರ್ಚಾದ ಅಧ್ಯಕ್ಷ ಜಯಸುಂದರ್, ಮುಖಂಡರು, ಉದ್ಯೋಗ ಆಕಾಂಕ್ಷಿಗಳು, ವಿವಿಧ ಕಂಪನಿಯ ಪ್ರತಿನಿಧಿಗಳು ಇದ್ದರು.

ಒಂದನೇ ಪುಟದಿಂದ

ಅತಿರಥರ ರಂಗ ಪ್ರವೇಶ

ಉದ್ಘಾಟಿಸಲು ಪ್ರಧಾನಿ ಹಾಗೂ ಗೃಹ ಸಚಿವರು ಪ್ರತ್ಯೇಕ ಪ್ರವಾಸ ಕೈಗೊಂಡರೆ ನಡ್ಡಾ ಪಕ್ಷದ ಮುಖಂಡರನ್ನು ಸಂಘಟಿಸಲು ಎರಡು ದಿನ ಪ್ರವಾಸ ಕೈಗೊಂಡಿದ್ದಾರೆ.

ಏ.17 ಮತ್ತು 18ರಂದು ಹೊಸಪೇಟೆಯಲ್ಲಿ ರಾಜ್ಯ ಬಿಜೆಪಿ ಕಾರ್ಯಕಾರಿಣಿ ನಡೆಯಲಿದೆ. 2 ದಿನಗಳ ಕಾಲವೂ ನಡ್ಡಾ ಅಲ್ಲಿಯೇ ಉಳಿದು, ಚುನಾವಣಾ ಸಿದ್ಧತೆ, ಪಕ್ಷದ ಸಂಘಟನೆ, ಚುನಾವಣೆಯನ್ನು ಯಾವ ರೀತಿ ಎದುರಿಸಬೇಕು, ರಾಜ್ಯ ಘಟಕ ಹೇಗೆ ಸಿದ್ಧತೆ ಮಾಡಿಕೊಂಡಿದೆ ಎಂಬುದರ ಬಗ್ಗೆ ಮಾಹಿತಿ ಪಡೆಯುವುದಲ್ಲದೆ, ಸಲಹೆ ಸೂಚನೆಗಳನ್ನು ನೀಡಲಿದ್ದಾರೆ. ಏಪ್ರಿಲ್ ನಂತರ ಮುಂದಿನ ಚುನಾವಣೆಯವರೆಗೂ ಪ್ರಧಾನಿ ಮತ್ತು ಅಮಿತ್ ಷಾ ತಿಂಗಳಿಗೊಮ್ಮೆ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಈ ನಾಯಕರು ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಪ್ರಮುಖ ಕಾರ್ಯಕ್ರಮಗಳನ್ನು ಉದ್ಘಾಟಿಸುವುದು, ಚುನಾವಣೆಯ ತಂತ್ರಗಾರಿಕೆಯ ಒಂದು ಭಾಗವಾಗಿದೆ. ಅಲ್ಲದೆ ಪ್ರತಿ ಭೇಟಿಯ ಸಂದರ್ಭದಲ್ಲೂ ಒಂದೊಂದು ಸಮಾಜವನ್ನು ಓಲೈಸಿಕೊಳ್ಳುವಂತೆ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಇಂತಹದ್ದೇ ಕಾರ್ಯಕ್ರಮಗಳನ್ನು ಸಿದ್ಧಪಡಿಸುವಂತೆ ಪ್ರಧಾನಿ ಕಾರ್ಯಾಲಯ ಈಗಾಗಲೇ ಮುಖ್ಯಮಂತ್ರಿಯವರ ಕಾರ್ಯಾಲಯಕ್ಕೆ ಸಂದೇಶ ರವಾನೆ ಮಾಡಿದೆ.

ಪ್ರಧಾನಿಯವರ ಮೊದಲ ಭೇಟಿಯ ಸಂದರ್ಭದಲ್ಲೇ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಅಂಬೇಡ್ಕರ್–ಸ್ಕೂಲ್ ಆಫ್ ಅಕಾಡೆಮಿ, ಅಂದೇ ಬೆಂಗಳೂರು ಅರ್ಬನ್ ರೈಲ್ವೆಯ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿ, ನಗರದ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಿದ್ದಾರೆ. ಇದಕ್ಕೂ ಮುನ್ನಾ ಅಮಿತ್ ಷಾ ಅವರು ಎರಡು ದಿನಗಳಲ್ಲಿ ತುಮಕೂರು, ಚಿಕ್ಕಬಳ್ಳಾಪುರ, ಹಾಗೂ ಬೆಂಗಳೂರು ನಗರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಾರ್ಚ್ 31 ರಂದು ನಗರಕ್ಕೆ ಆಗಮಿಸುತ್ತಿದ್ದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಕೆಲವು ನಾಯಕರ ಜೊತೆ ಪ್ರತ್ಯೇಕ ಮಾತುಕತೆ ನಡೆಸಲಿರುವ ಅಮಿತ್ ಷಾ, ಏ.1ರಂದು ತುಮಕೂರಿನಲ್ಲಿ ಸಿದ್ಧಗಂಗಾ ಶ್ರೀಗಳ 114ನೇ ಜನ್ಮೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಲ್ಲಿಂದ ನೇರವಾಗಿ ಭಾರತ ರತ್ನ ವಿಶ್ವೇಶ್ವರಯ್ಯ ಅವರ ಹುಟ್ಟೂರು ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಚಾಲನೆ ನೀಡಲಿದ್ದಾರೆ. ನಂತರ ಅಂದು ಸಂಜೆ ನಗರದಲ್ಲಿ ರೈತರಿಗಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕ್ಷೀರ ಅಭಿವೃದ್ಧಿ ಬ್ಯಾಂಕ್ ಹಾಗೂ ಯಶಸ್ವಿನಿ ಮರು ಉದ್ಘಾಟನೆ ಮಾಡಲಿದ್ದಾರೆ. ಇದೇ ರೀತಿ ಮುಂದಿನ ಚುನಾವಣೆ ವೇಳೆಗೆ ರಾಜ್ಯದ ಬಹುತೇಕ ಭಾಗಗಳಲ್ಲಿ ಈ ರಾಷ್ಟ್ರೀಯ ನಾಯಕರು ಪ್ರವಾಸ ಕೈಗೊಳ್ಳುತ್ತಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು ಏ.5ರಂದು ಪ್ರಧಾನಿ ಮೋದಿಯವರು ಸರ್ಕಾರಿ ವಿಶೇಷ ಕಾರ್ಯಕ್ರಮಗಳ ಉದ್ಘಾಟನೆಗಾಗಿ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಎಂದರು.

ಕೇಂದ್ರ ಸಚಿವ ಅಮಿತ್ ಷಾ ಅವರಿಂದ ಕ್ಷೀರ ಅಭಿವೃದ್ಧಿ ಬ್ಯಾಂಕ್ ಉದ್ಘಾಟನೆ. ಏಪ್ರಿಲ್ 1 ರಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಷಾ ಅವರು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. ಸಹಕಾರಿ ರಂಗದಲ್ಲಿ ಹಲವಾರು ಸುಧಾರಣೆಗಳನ್ನು ತರಬೇಕೆಂಬ ಉದ್ದೇಶದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ್ಷೀರ ಅಭಿವೃದ್ಧಿ ಬ್ಯಾಂಕ್ ಪ್ರಾರಂಭ ಮಾಡಲು ಉದ್ದೇಶಿಸಿದೆ. ಅದರ ಲಾಂಛನದ ಉದ್ಘಾಟನೆ ಮಾಡಲು ಬೃಹತ್ ಸಭೆ ಏರ್ಪಾಡು ಮಾಡಲಾಗುತ್ತಿದೆ. ಕ್ಷೀರ ಕ್ಷೇತ್ರದಲ್ಲಿ ಆರ್ಥಿಕ ಅಭಿವೃದ್ಧಿಗೆ ಇಂಬು ನೀಡಿ ಆರ್ಥಿಕ ಕ್ರಾಂತಿಯಾಗಲಿದೆ. ಇದರಿಂದ ರೈತರ ಆದಾಯ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಲಿದೆ. ರೈತರಿಗೆ ಆರ್ಥಿಕ ಸಹಾಯ ದೊರೆಯಲು ನೆರವಾಗಲಿದೆ. ಲಾಂಛನ ಹಾಗೂ ಯಶಸ್ವಿನಿ ಯೋಜನೆಯ ಉದ್ಘಾಟನೆಯನ್ನು ಅಮಿತ್ ಷಾ ನೆರವೇರಿಸಲಿದ್ದಾರೆ ಎಂದರು. ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ದೆಹಲಿಯಲ್ಲಿ ವರಿಷ್ಠರೊಂದಿಗೆ ಚರ್ಚೆಯಾಗಬೇಕು. ವರಿಷ್ಠರು ಕರೆದಾಗ ದೆಹಲಿಗೆ ಹೋಗುತ್ತೇನೆ.

ಅಪಾಯಕಾರಿ

ಚಾಮುಂಡಿಬೆಟ್ಟದ ಮೇಲೆ ದೇವಿಕೆರೆ ಪ್ರದೇಶದಲ್ಲಿ 8.04 ಎಕರೆ ಜಮೀನು ನಿಗದಿಪಡಿಸಿ ಅಲ್ಲಿ ಕಾಮಗಾರಿ ಪ್ರಾರಂಭಿಸಲಾಗಿತ್ತು. ಈ ಹಂತದಲ್ಲಿ ಚಾಮುಂಡಿಬೆಟ್ಟದಲ್ಲಿ ಭೂ ಕುಸಿತವಾಗಿ ಸಾರ್ವಜನಿಕರು ಆತಂಕಕ್ಕೊಳಗಾಗಿದ್ದರು. ಇದನ್ನು ಗಮನಿಸಿದ ತಾವು, ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಪರಿಶೀಲನೆ ನಡೆಸಲು ಅರಣ್ಯ ಮತ್ತು ಪರಿಸರ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೆ. ಅಲ್ಲಿ ನಾನು ಕೇಳಿದ ಮೊದಲ ಪ್ರಶ್ನೆ "ಬೆಟ್ಟದ ಮೇಲೆ ಹೀಗೆ ಕಾಮಗಾರಿ ಕೈಗೊಳ್ಳಲು ಸಂಬಂಧಿಸಿದ ಇಲಾಖೆಯವರು ನಿಮ್ಮ ಒಪ್ಪಿಗೆ ಪಡೆದಿದ್ದಾರೆಯೇ?" ಎಂದು. ಆಗ ಅರಣ್ಯ ಮತ್ತು ಪರಿಸರ ಇಲಾಖೆ ಯವರು ತಬ್ಬಿಬ್ಬಾಗಿ ತಮಗೆ ಈ ವಿಷಯವೇ ಗೊತ್ತಿಲ್ಲ ಎಂದು ತಿಳಿಸಿದರು. ಭೂ ಕುಸಿತದ ಹಾನಿಯನ್ನು ಕಣ್ಣಾರೆ ಕಂಡ ನಾನು ಆ ಕೆಲಸವನ್ನು ಅಲ್ಲಿಗೇ ಸ್ಥಗಿತಗೊಳಿಸುವಂತೆ ಆದೇಶಿಸಿದ್ದೆ. ಇದಾದ ಕೆಲವು ದಿನಗಳಲ್ಲಿ ನನ್ನನ್ನು ಸಚಿವ ಸಂಪುಟದಿಂದ ಕೈಬಿಟ್ಟ ಕಾರಣದಿಂದಾಗಿ ಮುಂದೆ ಏನಾಯಿತು ಎಂಬುದು ನನಗೆ ತಿಳಿದಿಲ್ಲ ಎಂದು ಶ್ರೀನಿವಾಸಪ್ರಸಾದ್ ಹಿಂದಿನ ವೃತ್ತಾಂತವನ್ನು ಉಲ್ಲೇಖಿಸಿದ್ದಾರೆ. ಈಗ ಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಿರುವುದು ತಿಳಿಯಿತು. ಪರಿಸರವಾದಿಗಳು ಈ ಯೋಜನೆಯನ್ನು ವಿರೋಧಿಸುವುದರಲ್ಲಿ ಅರ್ಥವಿದೆ ಎಂದು ನಾನು ಭಾವಿಸಿದ್ದೇನೆ ಎಂದು ಶ್ರೀನಿವಾಸಪ್ರಸಾದ್ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಸಿದ್ಧತೆ

ಇಂದು ಎಲ್ಲಾ ಪರೀಕ್ಷಾ ಕೇಂದ್ರದ ಕೊಠಡಿಗಳನ್ನು ಸ್ವಚ್ಛಗೊಳಿಸಿ, ಡೆಸ್ಕ್‌ಗಳಿಗೆ ನೋಂದಣಿ ಸಂಖ್ಯೆ ಬರೆದ ಶಿಕ್ಷಕರು, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕುಡಿಯುವ



ನೀರಿನ ವ್ಯವಸ್ಥೆ, ನೋಂದಣಿ ಸಂಖ್ಯೆಗಳೊಂದಿಗೆ ಕೊಠಡಿ ಸಂಖ್ಯೆಗಳನ್ನು ನೋಟಿಸ್ ಬೋರ್ಡ್‌ನಲ್ಲಿ ಅಂಟಿಸುವ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ಸಿಆರ್‌ಪಿಸಿ ಕಲಂ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆಯಲ್ಲದೇ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡುವಂತೆ ಸೂಚಿಸಲಾಗಿದೆ ಪ್ರತೀ ಕೇಂದ್ರಕ್ಕೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. 140 ಪುನರಾವರ್ತಿತ, 1,867 ಖಾಸಗಿ ಸೇರಿದಂತೆ ಜಿಲ್ಲೆಯ 674 ಪ್ರೌಢಶಾಲೆಗಳ ಒಟ್ಟು 38,138 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ಹಿಜಾಬ್‌ಗೆ ನಿರ್ಬಂಧ

ಕಾರ್ಯದರ್ಶಿ ವಿ.ಶ್ರೀನಿವಾಸ್ ಮೂರ್ತಿಯವರು ಸುತ್ತೋಲೆ ಹೊರಡಿಸಿದ್ದು, ಮಾ. 28ರಿಂದ ಏ.11ರವರೆಗೂ ನಡೆಯುವ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ವಿದ್ಯಾರ್ಥಿಗಳು ಸರ್ಕಾರದ ಆದೇಶದನ್ವಯ ಸಮವಸ್ತ್ರ ಧರಿಸಿ ಪರೀಕ್ಷೆ ಬರೆಯಬೇಕು. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಸರ್ಕಾರ ನಿಗದಿಪಡಿಸಿರುವ ಶಾಲಾ ಸಮವಸ್ತ್ರ ಮತ್ತು ಖಾಸಗಿ (ಅನುದಾನ / ಅನುದಾನರಹಿತ) ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಆಯಾ ಶಾಲಾ ಆಡಳಿತ ಮಂಡಳಿಗಳು ನಿಗದಿಪಡಿಸಿರುವ ಸಮವಸ್ತ್ರವನ್ನು ಧರಿಸುವುದು ಕಡ್ಡಾಯ ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ರಾಜ್ಯ ಹೈಕೋರ್ಟ್ ಸರ್ಕಾರದ ಸಮವಸ್ತ್ರ ಆದೇಶವನ್ನು ಎತ್ತಿ ಹಿಡಿದು ತೀರ್ಪು ನೀಡಿರುವುದರಿಂದ ಎಲ್ಲ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿಯೇ ಪರೀಕ್ಷೆ ಬರೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ಪ್ರವೇಶ ಪತ್ರದೊಂದಿಗೆ ಸಮವಸ್ತ್ರ ಧರಿಸಿ ಹಾಜರಾಗಬೇಕು ಎಂದು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಹಿಜಾಬ್‌ಗೆ ಅವಕಾಶವಿಲ್ಲ: ರಾಜ್ಯದ ಶಿಕ್ಷಣ ಸಚಿವ ಬಿ.ಸಿ ನಾಗೇಶ್ ಈಗಾಗಲೇ ಹಿಜಾಬ್ ಧರಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈಗ ಈ ಸಂಬಂಧ ಅಧಿಕೃತವಾಗಿ ಸುತ್ತೋಲೆಯನ್ನೂ ಹೊರಡಿಸಲಾಗಿದ್ದು, ಹಿಜಾಬ್ ಸೇರಿದಂತೆ ಯಾವುದೇ ರೀತಿಯ ವಸ್ತ್ರ ಧರಿಸಿ ಪರೀಕ್ಷೆ ಬರೆಯಲು ಅವಕಾಶವಿಲ್ಲ. ರಾಜ್ಯದಲ್ಲಿ ಹಿಜಾಬ್ ವಿವಾದ ಭುಗಿಲೆದ್ದು ಹೈಕೋರ್ಟ್‌ನ ಮಧ್ಯಂತರ ಆದೇಶ ಹೊರ ಬಿದ್ದ ಸಂದರ್ಭದಲ್ಲಿ ನಡೆದಿದ್ದ ಪ್ರಾಯೋಗಿಕ ಪರೀಕ್ಷೆಗೆ ಹಿಜಾಬ್ ಧರಿಸಿ ಹಾಜರಾಗಲು ಅವಕಾಶ ನೀಡದ ಸಂದರ್ಭದಲ್ಲಿ ಕೆಲ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಗೂ ಹಾಜರಾಗಿರಲಿಲ್ಲ. ಇವರಿಗೆ ಮರು ಪರೀಕ್ಷೆಗೆ ಅವಕಾಶ ನೀಡಬೇಕೆಂಬ ಒತ್ತಾಯ ಕೇಳಿ ಬಂದಿದ್ದರೂ ಸರ್ಕಾರ ಅದಕ್ಕೆ ಒಪ್ಪಿರಲಿಲ್ಲ. ಹೈಕೋರ್ಟ್ ತೀರ್ಪಿನ ನಂತರ ರಾಜ್ಯ ಸರ್ಕಾರ ಸಮವಸ್ತ್ರ ಧರಿಸಿ ಬರುವವರಿಗೆ ಮಾತ್ರ ಶಾಲೆ ಪ್ರವೇಶಾವಕಾಶ ನಿಯಮವನ್ನು ಬಿಗಿಯಾಗಿ ಪಾಲನೆ ಮಾಡಿತ್ತು. ಈಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೂ ಸಮವಸ್ತ್ರ ನಿಯಮ ಅನ್ವಯವಾಗಿದೆ. ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ, ಉಡುಪಿಯ ವಿದ್ಯಾರ್ಥಿನಿಯರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ತುರ್ತು ವಿಚಾರಣೆ ನಡೆಸಲು ಮುಖ್ಯ ನ್ಯಾಯಮೂರ್ತಿ ರಮಣ ನೇತೃತ್ವದ ನ್ಯಾಯಪೀಠ ನಿರಾಕರಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪು ಪಾಲನೆ ಮಾಡಬೇಕಾಗಿದೆ.

ಸೆಪ್ಟೆಂಬರ್‌ವರೆಗೆ ವಿಸ್ತರಣೆ

ನಿರ್ಧಾರ ತೆಗೆದುಕೊಳ್ಳಲಾಗಿದೆ. ದೇಶದ ಬಡ ಜನರಿಗೆ ಪರಿಹಾರ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. 2 ವರ್ಷಗಳಿಂದ ನಡೆಯುತ್ತಿರುವ PMGKAY ಕಾರ್ಯಕ್ರಮದ ಅಡಿಯಲ್ಲಿ ಕೇಂದ್ರ ಸರ್ಕಾರವು 3.4 ಲಕ್ಷ ಕೋಟಿ ವೆಚ್ಚದಲ್ಲಿ 1,003 ಲಕ್ಷ ಟನ್ ಆಹಾರಧಾನ್ಯವನ್ನು ಖಜಾನೆಗೆ ವಿತರಿಸುತ್ತದೆ. ಇಲ್ಲಿಯವರೆಗೆ, ಕೇಂದ್ರವು ಸರಿಸುಮಾರು 2.6 ಟ್ರಿಲಿಯನ್ ರೂ.ಗಳನ್ನು ಈ ಯೋಜನೆಗಾಗಿ ಖರ್ಚು ಮಾಡಿದೆ. ಮುಂದಿನ 6 ತಿಂಗಳುಗಳಲ್ಲಿ ಅಂದರೆ ಸೆಪ್ಟೆಂಬರ್ 2022ರವರೆಗೆ ಮತ್ತೆ 80,000 ಕೋಟಿ ರೂ.ಗಳನ್ನು ಈ ಯೋಜನೆಗಾಗಿ ಖರ್ಚು ಮಾಡಲಾಗುವುದು. ಈ ಯೋಜನೆಯಡಿ ಕೇಂದ್ರವು ತಿಂಗಳಿಗೆ 5 ಕೆಜಿ ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡಲಾಗುತ್ತದೆ.

ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು, ಸಿಇಓಗಳಿಗೆ ತರಬೇತಿ ಕಾರ್ಯಕ್ರಮ

ಸಹಕಾರ ಸಂಘಗಳಿಗೂ ಆದಾಯ ತೆರಿಗೆ ವಿಧಿಸುತ್ತಿರುವುದು ನೋವಿನ ಸಂಗತಿ

ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ.ದೇವೇಗೌಡ ವಿಷಾದ



ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಸಭಾಂಗಣದಲ್ಲಿ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಸಿಇಓಗಳಿಗೆ ಶನಿವಾರ ಹಮ್ಮಿಕೊಂಡಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು,ಮಾ.26(ಪಿಎಂ)– ಸಹಕಾರ ಸಂಘಗಳ ಮೇಲೆ ಆದಾಯ ತೆರಿಗೆ ವಿಧಿಸುತ್ತಿರುವುದು ಅತ್ಯಂತ ನೋವಿನ ಸಂಗತಿ ಎಂದು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ.ದೇವೇಗೌಡ ವಿಷಾದಿಸಿದರು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಮೈಸೂರು ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಶನಿವಾರ ಹಮ್ಮಿಕೊಂಡಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಸಂಘಗಳ ಸಣ್ಣ ಪ್ರಮಾಣದ ಲಾಭಕ್ಕೂ ಆದಾಯ ತೆರಿಗೆ ಪಾವತಿಸಬೇಕೆಂಬುದು ಈ ಸಂಸ್ಥೆಗಳ ಪ್ರಗತಿಗೆ ಭಾರೀ ಹೊಡೆತ ಉಂಟು ಮಾಡಲಿದೆ. ಕೇಂದ್ರ ಗೃಹ ಸಚಿವರೂ ಆದ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಏ.1ರಂದು ರಾಜ್ಯಕ್ಕೆ ಭೇಟಿ ನೀಡುತ್ತಿದ್ದು, ಈ ಸಂದರ್ಭದಲ್ಲಿ ಅವರಿಗೆ ಆದಾಯ ತೆರಿಗೆ ಕೈಬಿಡುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಕೆಲವೇ ಕೆಲವು ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿದ್ದು, ಈ ಕುರಿತು ರಾಜ್ಯ ಮಟ್ಟದ ಪತ್ರಿಕೆಯೊಂದರಲ್ಲಿ ವರದಿಯಾಗಿದೆ. ಹಾಗಾಗಿ ಸಹಕಾರ ಸಂಸ್ಥೆಗಳು ಎಚ್ಚರಿಕೆಯಿಂದ ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಹೆಚ್ಚು ಒತ್ತು ನೀಡಬೇಕು ಎಂದರು.

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ ಮಾತನಾಡಿ, ಕೇಂದ್ರದಲ್ಲಿ ಸಹಕಾರ ಸಚಿವಾಲಯ ಸ್ಥಾಪನೆ ಮಾಡಿರುವ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರ ಇಡೀ ದೇಶದಲ್ಲಿ ಇನ್ನಷ್ಟು ಬೆಳವಣಿಗೆ ಕಾಣುವಂತೆ ಆಗಲಿದೆ. ಇಡೀ ರಾಜ್ಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಸಹಕಾರ ವಲಯ ಹಿರಿಯ ಸಹಕಾರಿಗಳೂ ಆದ ಶಾಸಕ ಜಿ.ಟಿ.ದೇವೇಗೌಡ ಅವರ ಮಾರ್ಗದರ್ಶನದಲ್ಲಿ ಉತ್ತಮವಾಗಿ ಬೆಳೆಯುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರೂ ಆದ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಪತ್ತಿನ ಸಹಕಾರ ಸಂಸ್ಥೆಗಳು ಮೈಸೂರು ಭಾಗದಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಸಹಕಾರ ವಲಯವು ನಿಸ್ವಾರ್ಥವಾಗಿ ಸೇವೆ ಸಲ್ಲಿಸುವ ಕ್ಷೇತ್ರ ಸಹಕಾರಿಗಳು ಹಾಗೂ ಈ ಕ್ಷೇತ್ರದಲ್ಲಿನ ಅಧಿಕಾರಿ, ಸಿಬ್ಬಂದಿ ವರ್ಗದವರು ಸೇವಾ ಮನೋಭಾವದಿಂದ ಕೆಲಸ ಮಾಡುತ್ತಿದ್ದಾರೆ. ಕೆಲ ಸಂಸ್ಥೆಗಳಲ್ಲಿ ಕಡಿಮೆ ವೇತನವಿದ್ದರೂ ನೌಕರ ವರ್ಗ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಆದಾಯ ತೆರಿಗೆ ವಿನಾಯ್ತಿ ವಿಶ್ವಾಸ: ಸಹಕಾರಿ ಸಂಸ್ಥೆಗಳು ಗಳಿಸುವ ಸಣ್ಣ ಪ್ರಮಾಣದ ಲಾಭಕ್ಕೆ ಆದಾಯ ತೆರಿಗೆ ಪಾವತಿ ಮಾಡಬೇಕೇ? ಎಂಬ ಪ್ರಶ್ನೆ ಎದುರಿಸುವಂತಹ ಪರಿಸ್ಥಿತಿಯೂ ಸದ್ಯ ಎದುರಾಗಿದೆ. ಇದೀಗ ಕೇಂದ್ರದಲ್ಲಿ ಸಹಕಾರಿ ಕ್ಷೇತ್ರಕ್ಕೇ ಸಚಿವಾಲಯ ಸ್ಥಾಪನೆ ಮಾಡಿರುವ ಹಿನ್ನೆಲೆಯಲ್ಲಿ ಅತೀ ಶೀಘ್ರದಲ್ಲಿ ಸಹಕಾರಿಗಳ ಕೂಗು ಕೇಂದ್ರಕ್ಕೆ ಕೇಳಿಸುವ ಎಲ್ಲಾ ವಿಶ್ವಾಸವೂ ಇದೆ. ಕೇಂದ್ರದ ಸಹಕಾರ ಸಚಿವರಾಗಿರುವ ಅಮಿತ್ ಶಾ ಅವರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದವರು. ಗುಜರಾತಿನಲ್ಲಿ ಸಹಕಾರ ಮಂತ್ರಿಗಳಾಗಿದ್ದರು. ಅವರಿಗೆ ಸಹಕಾರ ಕ್ಷೇತ್ರದ ಬಗ್ಗೆ ಸಮಗ್ರ ಮಾಹಿತಿ ಇದ್ದು, ಆದಾಯ ತೆರಿಗೆ ವಿನಾಯಿತಿ ಸೇರಿದಂತೆ ಸಹಕಾರಿ ಕ್ಷೇತ್ರದ ಸಮಸ್ಯೆಗಳಿಗೆ ಅವರಿಂದ ಪರಿಹಾರ ದೊರೆಯಲಿದೆ ಎಂದು ಹೆಚ್.ವಿ.ರಾಜೀವ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಹೆಚ್.ಎಸ್.ಪ್ರಶಾಂತ್ ತಾತಾಚಾರ್, ಡಾ.ಎಂ.ಬಿ.ಮಂಜೇಗೌಡ, ವೈ.ಭೈರಪ್ಪ, ಸಹಕಾರ ಸಂಘಗಳ ಉಪ ನಿಬಂಧಕ ಜಿ.ಆರ್.ವಿಜಯಕುಮಾರ್, ಮೈಸೂರಿನ ಕೆಐಸಿಎಂ ಪ್ರಾಂಶುಪಾಲ ಚಂದ್ರಶೇಖರ್, ಕಾರ್ಯಕ್ರಮ ಸಂಚಾಲಕ ಪಿ.ಎಸ್. ಹರೀಶ್ ಮತ್ತಿತರರು ಹಾಜರಿದ್ದರು.

ಸಂಗೀತ ವಿವಿಯ ಕುಲಪತಿ ನೇಮಕವೇ ಅಸಿಂಧು

•ಸಂಗೀತ ವಿವಿಯ ಸಿಂಡಿಕೇಟ್ ಮಾಜಿ ಸದಸ್ಯ ಆರೋಪ •21 ನೌಕರರ ಪ್ರತಿಭಟನೆಗೆ ಬೆಂಬಲ



ಮೈಸೂರು,ಮಾ.26(ಎಂಟಿವೈ)– ಸಂಗೀತ ವಿಶ್ವವಿದ್ಯಾನಿಲಯದ ಕುಲಪತಿ ಸ್ಥಾನಕ್ಕೆ ಪ್ರೊ.ನಾಗೇಶ್.ವಿ.ಬೆಟ್ಟಕೋಟೆ ನೇಮಕ ಅಸಿಂಧುವಾಗಿದ್ದು, ಕಾನೂನು ಹೋರಾಟ ಮಾಡುವುದಾಗಿ ಸಂಗೀತ ವಿವಿಯ ಸಿಂಡಿಕೇಟ್ ಮಾಜಿ ಸದಸ್ಯ ಹಿಮಾಂಶೋ ಆರೋಪಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಮುಂಭಾಗ ವಜಾಗೊಂಡಿರುವ ಬೋಧಕೇತರ ಸಿಬ್ಬಂದಿ ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಬೆಂಬಲ ಸೂಚಿಸಿದ ಬಳಿಕ, ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಜಾಗೊಂಡಿರುವ ಸಂಗೀತ ವಿವಿಯ 21 ನೌಕರರು ನಡೆಸುತ್ತಿರುವ ಪ್ರತಿಭಟನೆ 34ನೇ ದಿನಕ್ಕೆ ಕಾಲಿಟ್ಟಿದ್ದು, ಅವರಿಗೆ ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡಿಲ್ಲ. ಸರ್ಕಾರದಿಂದ ಕುಲಪತಿಯನ್ನು ಆಯ್ಕೆ ಮಾಡಲು ಸರ್ಚ್ ಕಮಿಟಿಯನ್ನು ರಚಿಸುತ್ತದೆ. ಆ ಕಮಿಟಿಯ ಆಯ್ಕೆಯೇ ಕಾನೂನು ಬಾಹಿರವಾಗಿದೆ. ಇಂತಹ ವ್ಯಕ್ತಿ ನ್ಯಾಯವಾಗಿ ಕೆಲಸ ಮಾಡಿಕೊಂಡು ಬರುತ್ತಿರುವ ಸಿಬ್ಬಂದಿ ವರ್ಗಗಳನ್ನು ವಜಾಗೊಳಿಸಿರುವುದು ಹಾಸ್ಯಾಸ್ಪದ ಎಂದರು.

ಸಾಹಿತಿ ಜಿ.ಪಿ.ಬಸವರಾಜು ಮಾತನಾಡಿ, ವಜಾಗೊಂಡಿರುವ ಸಿಬ್ಬಂದಿಗಳ ಬೇಡಿಕೆಗಳು ನ್ಯಾಯಯುತವಾಗಿವೆ. ಅವರು ಕೆಲಸ ಮಾಡಲೂ ಸಿದ್ಧರಿದ್ದಾರೆ. ಇವರನ್ನು ಮರು ನೇಮಕ ಮಾಡಿಕೊಳ್ಳಬೇಕು. 13 ತಿಂಗಳಿನಿಂದ ಬಿಡುಗಡೆಯಾಗದ ಬಾಕಿ ವೇತನ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಾಜವಾದಿ ಪ.ಮಲ್ಲೇಶ್, ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಸ್ವರಾಜ್ ಇಂಡಿಯಾ ಪಕ್ಷ ಸದಸ್ಯರಾದ ಉಗ್ರನರಸಿಂಹೇಗೌಡ, ಬಿ.ಕರುಣಾಕರಣ್, ನಿಜದನಿ ಸಂಪಾದಕ ಶಾಂತರಾಜು, ಎಸ್‌ಡಿಟಿಯು ಸಂಘಟನೆಯ ಕೌನ್ಸ್ ಮಿರ್ಜಾ, ಎಸ್ಸಿ–ಎಸ್ಟಿ ಯೂನಿಯನ್ ಅಧ್ಯಕ್ಷ ಶಿವಣ್ಣ, ಹೊರಳವಾಡಿ ನಂಜುಂಡಸ್ವಾಮಿ, ಆದಿಕರ್ನಾಟಕ ಮಹಾಸಂಸ್ಥೆಯ ಮಾಜಿ ಅಧ್ಯಕ್ಷ ಸಿ.ಗಂಗಾಧರ್, ಚಿಕ್ಕ ಅಂದಾನಿ ಹಾಗೂ ವಜಾಗೊಂಡಿರುವ 21 ಮಂದಿ ಬೋಧಕೇತರ ಸಿಬ್ಬಂದಿಗಳಿದ್ದರು.



ಮೈಸೂರಿನ ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಸಹಕಾರದಿಂದ ವಿಶ್ವ ಮಹಿಳೆಯರ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ. ಪುಣ್ಯವತಿ ಸಿ. ನಾಗರಾಜ್, ಶ್ರೀಮತಿ ಸುಷ್ಮಾ ರವಿಕುಮಾರ್, ಶ್ರೀಮತಿ ಕೆ. ನಿಂಗಮ್ಮ, ಕುಮಾರಿ ವತ್ಸಲ ಎಸ್.ವಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಡಾ|| ಅರ್ಪಿತಾ ಪ್ರತಾಪ್‌ಸಿಂಹ, ಶ್ರೀಮತಿ ಲಲಿತಾ ರಂಗನಾಥ್, ಪತ್ರಕರ್ತೆ ಶಿಲ್ಪ, ನೇಗಿಲಯೋಗಿ ಮಹಿಳೆಯರ ಬಳಗದ ಅಧ್ಯಕ್ಷೆ ಶ್ರೀಮತಿ ಸುಜಾತ ಸಿದ್ದಯ್ಯ ಭಾಗವಹಿಸಿದ್ದರು.

ಮೈಸೂರಿನಲ್ಲಿ 'ಭಾರತೀಯ ನಿರ್ಮಾಣ ಉದ್ಯಮ –2030' ವಿಚಾರ ಸಂಕಿರಣ



ಮೈಸೂರು, ಮಾ.26 (ಆರ್‌ಕೆ)– ಮೈಸೂರಿನ ಜೆ.ಪಿ. ನಗರದಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ 'ಇಂಡಿಯನ್ ಕನ್‌ಸ್ಟ್ರಕ್ಷನ್ ಇಂಡಸ್ಟ್ರಿ 2030–ಎ ಟ್ರಿಲಿಯನ್ ಚಾಲೆಂಜ್' ವಿಷಯ ಕುರಿತ ಬಿಲ್ಡ್‌ಟೆಕ್ ರಾಷ್ಟ್ರೀಯ ವಿಚಾರ ಸಂಕಿರಣ ಇಂದು ನಡೆಯಿತು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಸೆಂಟರ್‌ನಿಂದ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಶಾಸಕ ಎಸ್.ಎ.ರಾಮದಾಸ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲೂ ಪರಿಣಾಮಕಾರಿ ಬದಲಾವಣೆಗಳಾಗಿದ್ದು, ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ರಸ್ತೆ, ಸೇತುವೆ, ಅಣೆಕಟ್ಟೆ ಸೇರಿದಂತೆ ಬೃಹತ್ ಯೋಜನೆ, ಬಹುಮಹಡಿ, ಗಗನ ಚುಂಬಿ ಕಟ್ಟಡಗಳು, ಸರ್ಕಾರಿ ವಸತಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಕ್ಕೆ ತರಲು ನಿರ್ಮಾಣ ಕ್ಷೇತ್ರದಲ್ಲಿನ ಪರಿಣಿತರು, ತಜ್ಞರ ಜ್ಞಾನ ಪ್ರಮುಖ ಪಾತ್ರ ವಹಿಸುತ್ತದೆ ಎಂದ ಅವರು, ತಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಳ್ಳುವ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಎಂಬಿಸಿಟಿ ಪದಾಧಿಕಾರಿಗಳು ಸಲಹೆ, ಮಾರ್ಗದರ್ಶನ ನೀಡುವಂತೆ ತಿಳಿಸಿದರು.

ಬಿಎಐ ರಾಜ್ಯಾಧ್ಯಕ್ಷ ಆರ್.ಬಿ.ದಯಾನಂದ, ಮೈಸೂರು ಕೇಂದ್ರದ ಅಧ್ಯಕ್ಷ ಕೆ. ಅಜಿತ್ ನಾರಾಯಣ್, ಕಾರ್ಯದರ್ಶಿ ಎ.ಎಸ್. ಯೋಗಾನರಸಿಂಹ, ಬಿಲ್ಡ್‌ಟೆಕ್ ಅಧ್ಯಕ್ಷ ಸಿ.ಎನ್. ಶ್ರೀಕಾಂತ್, ಕಾರ್ಯದರ್ಶಿ ಪಿ. ಮೋಹನ್ ಕುಮಾರ್ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಮಧ್ಯಾಹ್ನ ನಡೆದ ಗೋಷ್ಠಿಗಳಲ್ಲಿ ನಿರ್ಮಾಣ ಕ್ಷೇತ್ರದ ಪರಿಣಿತರಾದ ಎಂ.ಜಿ.ಸೋಮಶೇಖರ್, ರಾಧಾಕೃಷ್ಣ, ನ್ಯಾತ್ ವಜ್ಜಾಲ ಅವರು 'ಪ್ರೀಕಾಸ್ಟ್ ಕನ್‌ಸ್ಟ್ರಕ್ಷನ್ ಚಾಲೆಂಜಸ್ ಅಂಡ್ ವೇ ಫಾರ್‌ವರ್ಡ್' ಕುರಿತು ವಿಚಾರ ಮಂಡಿಸಿದರೆ, '3ಡಿ ಪ್ರಿಂಟಿಂಗ್ ಇನ್ ಕನ್‌ಸ್ಟ್ರಕ್ಷನ್' ಕುರಿತು ಪಿ.ಎಸ್. ಆದಿತ್ಯ, 'ರೇಲ್ ಇನ್‌ಫ್ರಾ' ಕುರಿತು ಜಿ.ಬಿ.ನಾಗೇಂದ್ರ, ರಾಹುಲ್ ಪಂಡಿತ್, 'ಕೌಶಲ್ಯಾಭಿವೃದ್ಧಿ ಮತ್ತು ತರಬೇತಿ' ಬಗ್ಗೆ ಗಾಯತ್ರಿ ವಾಸುದೇವನ್ ಮತ್ತು ಜೆಪಿ ಶ್ರಾಫ್ ಅವರು ಹಾಗೂ 'ಗ್ರೀನ್ ಇನಿಷಿಯೇಟಿವ್ಸ್ ಇನ್ ಕನ್‌ಸ್ಟ್ರಕ್ಷನ್' ಕುರಿತಂತೆ ಎಂ. ಆನಂದ ಅವರು ಮಾತನಾಡಿದರು.

ಹೆಬ್ಬಾಳು ಪೊಲೀಸ್ ಠಾಣೆಗೆ ಸ್ವಂತ ಕಟ್ಟಡ ಭಾಗ್ಯ: ತ್ವರಿತವಾಗಿ ನಡೆಯುತ್ತಿದೆ ನಿರ್ಮಾಣ ಕಾಮಗಾರಿ

ದೇವರಾಜ ಸಿವಿಲ್, ಸಂಚಾರ ಠಾಣೆ, ಆಲನಹಳ್ಳಿ ಠಾಣೆಗಳ ಕಟ್ಟಡ ಕಾಮಗಾರಿಯೂ ಪ್ರಗತಿಯಲ್ಲಿ



ಮೈಸೂರು, ಮಾ.26 (ಆರ್‌ಕೆ)– ಮೈಸೂರಿನ ಹೆಬ್ಬಾಳು ಪೊಲೀಸ್ ಠಾಣೆಯ ಸ್ವಂತ ಕಟ್ಟಡ ಕಾಮಗಾರಿ ಭರದಿಂದ ಸಾಗಿದೆ.

ಪ್ರಸ್ತುತ ಹೆಬ್ಬಾಳಿನ ರಿಂಗ್ ರಸ್ತೆಯಲ್ಲಿ ಬರುವ ಶುಭೋದಿನಿ ಕಲ್ಯಾಣ ಮಂಟಪದ ಬಳಿ ಖಾಸಗಿ ಕಟ್ಟಡದಲ್ಲಿ ಹಾಲಿ ಹೆಬ್ಬಾಳು ಪೊಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿದೆ.

ಪೊಲೀಸ್ ಠಾಣೆಯಲ್ಲಿ ಇರಬೇಕಾದ ಲಾಕ್‌ಅಪ್, ಪೊಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಪ್ರತ್ಯೇಕ ಕೊಠಡಿಗಳು, ಶಸ್ತ್ರಾಸ್ತ್ರಗಳನ್ನು ಸುರಕ್ಷಿತವಾಗಿರಿಸಲು ವ್ಯವಸ್ಥೆ, ವಾಹನ ನಿಲುಗಡೆ ಸ್ಥಳ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತೀವ್ರ ಕಾಳಜಿ ವಹಿಸಿ, ಮುಡಾದಿಂದ ಹೆಬ್ಬಾಳು ಪೊಲೀಸ್ ಠಾಣೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಹೆಬ್ಬಾಳ ಮುಖ್ಯ ರಸ್ತೆಯ ಕುವೆಂಪು ವೃತ್ತದಲ್ಲಿ ನಿವೇಶನ ಮಂಜೂರು ಮಾಡಿಸಿದ್ದರು.

ಪೊಲೀಸ್ ಇಲಾಖೆಯ ಅನುದಾನ 2.15 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕುವೆಂಪು ಸರ್ಕಲ್‌ನ ಸಾರ್ವಜನಿಕ ಗ್ರಂಥಾಲಯದ ಹಿಂಭಾಗದಲ್ಲಿ ಪೂರ್ವಾಭಿಮುಖವಾಗಿ ಹೆಬ್ಬಾಳು ಪೊಲೀಸ್ ಠಾಣೆಗೆ ವಿಶಾಲವಾದ ಕಟ್ಟಡವನ್ನು ನಿರ್ಮಿಸಲಾಗುತ್ತಿದ್ದು, ನೆಲಮಹಡಿ ಮತ್ತು ಮೊದಲ ಮಹಡಿ ಸಿವಿಲ್ ಕಾಮಗಾರಿ ಪ್ರಗತಿಯಲ್ಲಿದೆ.

ಮೂರೂ ಕಡೆಗಳಲ್ಲಿ ರಸ್ತೆಗಳಿರುವುದರಿಂದ ಪೊಲೀಸ್ ಠಾಣೆಗೆ ಸೂಕ್ತ ಸ್ಥಳವಾಗಿದ್ದು, ಜಪ್ತಿ ಮಾಡಿದ ವಾಹನಗಳ ನಿಲುಗಡೆಗೂ ಸಾಕಷ್ಟು ಸ್ಥಳಾವಕಾಶವಿದೆಯಲ್ಲದೇ ಸಾರ್ವಜನಿಕರ ಭೇಟಿಗೂ ಅನುಕೂಲಕಾರಿಯಾಗಿದೆ.

ಕರ್ನಾಟಕ ರಾಜ್ಯ ಪೊಲೀಸ್ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ಟೆಂಡರ್ ಪ್ರಕ್ರಿಯೆ ನಡೆದು ವಿನೋದ್ ಕುಮಾರ್ ಎಂಬುವರು ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸುತ್ತಿದ್ದಾರೆ.

ದೇವರಾಜ ಸಿವಿಲ್, ಸಂಚಾರ, ಆಲನಹಳ್ಳಿ ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡ

ಮೈಸೂರು, ಮಾ.26(ಆರ್‌ಕೆ)–ಖಾಸಗಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೈಸೂರಿನ 4 ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ತಿಳಿಸಿದ್ದಾರೆ.



ದೇವರಾಜ ಸಿವಿಲ್, ದೇವರಾಜ ಸಂಚಾರ, ಹೆಬ್ಬಾಳು ಮತ್ತು ಆಲನಹಳ್ಳಿ ಪೊಲೀಸ್ ಠಾಣೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಪೊಲೀಸ್ ಮ್ಯಾನುಯಲ್ ಪ್ರಕಾರ ಪೊಲೀಸ್ ಠಾಣಾ ಕಟ್ಟಡಗಳ ನಿರ್ಮಾಣ ಕಾಮಗಾರಿಯು ಜನವರಿ ತಿಂಗಳಿಂದಲೇ ನಡೆಯುತ್ತಿದೆ. ಈಗಾಗಲೇ ಕಟ್ಟಡ ಒಂದು ಹಂತಕ್ಕೆ ಬಂದಿದ್ದು, ಜೂನ್ ಅಥವಾ ಜುಲೈ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಅವರು ತಿಳಿಸಿದರು.

ಹೆಬ್ಬಾಳು ಬಡಾವಣೆಯ ಮುಖ್ಯ ರಸ್ತೆಯ ಕುವೆಂಪು ಸರ್ಕಲ್‌ನಲ್ಲಿ ಹೆಬ್ಬಾಳು ಠಾಣೆ, ದೇವರಾಜ ಮೊಹಲ್ಲಾದ ಡಾ. ಬಿ.ಆರ್.ಅಂಬೇಡ್ಕರ್ ಭವನದ ಬಳಿ ದೇವರಾಜ ಸಿವಿಲ್ ಮತ್ತು ಸಂಚಾರ ಠಾಣೆ ಹಾಗೂ ದೇವೇಗೌಡ ಸರ್ಕಲ್ ಬಳಿ ರಿಂಗ್ ರಸ್ತೆಯಲ್ಲಿ ಆಲನಹಳ್ಳಿ ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಾಣವಾಗುತ್ತಿದೆ ಎಂದು ಅವರು ತಿಳಿಸಿದರು.

ಕರ್ನಾಟಕ ಪೊಲೀಸ್ ವಸತಿ, ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ನಾಲ್ಕೂ ಪೊಲೀಸ್ ಠಾಣಾ ಕಟ್ಟಡ ಕಾಮಗಾರಿ ನಡೆಯುತ್ತಿದ್ದು, ಅಗತ್ಯವಿರುವ ಸೌಕರ್ಯಗಳನ್ನು ಅಲ್ಲಿ ಒದಗಿಸಲಾಗುವುದು ಎಂದು ಡಾ. ಚಂದ್ರಗುಪ್ತ ನುಡಿದರು.

ಗ್ರೇಡ್4 ಪೊಲೀಸ್ ಠಾಣೆಗೆ ನಿಗದಿಪಡಿಸಿರುವ ಮೂಲ ಸೌಕರ್ಯಗಳಿಗನುಸಾರ ಹೆಬ್ಬಾಳು ಪೊಲೀಸ್ ಠಾಣೆ ಕಟ್ಟಡ ಕಾಮಗಾರಿಯನ್ನು ಜನವರಿಯಲ್ಲಿ ಆರಂಭಿಸಲಾಗಿದ್ದು, ಜುಲೈ ಅಥವಾ ಆಗಸ್ಟ್ ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಅದೇ ರೀತಿ ದೇವರಾಜ ಮೊಹಲ್ಲಾದ ಡಾ. ಬಿ.ಆರ್.ಅಂಬೇಡ್ಕರ್ ಭವನದ ಪಕ್ಕದಲ್ಲಿ ದೇವರಾಜ ಸಿವಿಲ್ (ನೆಲಮಹಡಿ), ದೇವರಾಜ ಸಂಚಾರ ಠಾಣೆ (ಮೊದಲ ಮಹಡಿ)ಗಳಿಗಾಗಿ ಹೊಸ ಕಟ್ಟಡ ನಿರ್ಮಿಸಲಾಗುತ್ತಿದೆ. ಮೈಸೂರಿನ ದೇವೇಗೌಡ ಸರ್ಕಲ್ ಸಮೀಪ ರಿಂಗ್ ರಸ್ತೆಯಲ್ಲಿ ಆಲನಹಳ್ಳಿ ಪೊಲೀಸ್ ಠಾಣೆಗೂ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಏಕಕಾಲದಲ್ಲಿ ಈ ಪೊಲೀಸ್ ಠಾಣೆಗಳ ಕಟ್ಟಡ ನಿರ್ಮಾಣ ಕೈಗೆತ್ತಿಕೊಂಡಿದ್ದು, ಒಂದೇ ದಿನ ಅವುಗಳನ್ನು ಉದ್ಘಾಟಿಸಿ, ನೂತನ ಕಟ್ಟಡದಲ್ಲಿ ಕಾರ್ಯಾಚರಣೆಗೆ ಒದಗಿಸಲು ಮಾಡಲು ಪೊಲೀಸ್ ಆಯುಕ್ತರು ಉದ್ದೇಶಿಸಿದ್ದಾರೆ.

ವೈಚಾರಿಕತೆ ಇಲ್ಲದಿದ್ದರೆ ಮೌಢ್ಯಗಳ ದಾಸರಾಗಿ ಬದುಕಬೇಕಾಗುತ್ತದೆ

‘ಸಮಸದ್ವಿವೇಕ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅಭಿಮತ



ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರೊ.ಕೆ.ಎಸ್.ಭಗವಾನ್ ಕುರಿತ ‘ಸಮಸದ್ವಿವೇಕ’ ಕೃತಿಯನ್ನು ಬಿಡುಗಡೆ ಮಾಡಿದರು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಭಾಷಣದಲ್ಲಿ ಎಚ್ಚರ ವಹಿಸಿದ ಸಿದ್ದರಾಮಯ್ಯ

ಹಿಜಾಬ್ ಸಂಬಂಧ ತಮ್ಮ ಹೇಳಿಕೆಗಳು ವಿವಾದವಾಗುತ್ತಿರುವ ಹಿನ್ನೆಲೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರು ಇಂದಿನ ಭಾಷಣದಲ್ಲಿ ಎಚ್ಚರಿಕೆ ವಹಿಸಿದ್ದು ಕಂಡುಬಂದಿತು. ಪ್ರೊ.ಕೆ.ಎಸ್.ಭಗವಾನ್ ಬಗ್ಗೆ ಮಾತನಾಡುವಾಗ ‘ಶಂಕರಾಚಾರ್ಯರ ಬಗ್ಗೆ ಬರೆದಿದ್ದಾರೆ’ ಎಂದು ತಕ್ಷಣ ಎಚ್ಚೆತ್ತುಕೊಂಡು, ನಾನು ಇದನ್ನೆಲ್ಲಾ ಹೇಳೋದಿಕ್ಕೆ ಹೋಗೋಲ್ಲ. ಏಕೆಂದರೆ ನಾನು ರಾಜಕಾರಣಿ, ಎಂತಾ ಇಕ್ಕಟ್ಟಿನ ಪರಿಸ್ಥಿತಿ ಅಂದರೆ, ನಾವು ಕೆಲವೊಂದು ವಿಚಾರಗಳನ್ನು ಹೇಳೋಕಾಗಲ್ಲ. ಮಾತನಾಡಿದರೆ ಸಾರ್ವಜನಿಕ ಜೀವನದಲ್ಲಿ ತುಂಬಾ ಕಷ್ಟವಾಗುತ್ತದೆ ಎಂದರು. ಹೀಗೆಯೇ ಎಲ್ಲರ ಸಹಕಾರದಿಂದ ಡಾ.ತಿಮ್ಮಯ್ಯ ಮೇಲ್ಮನೆ ಸದಸ್ಯರಾಗಿದ್ದಾರೆ ಎಂದಾಗ ತಿಮ್ಮಯ್ಯ ಎದ್ದುನಿಂತು ‘ನಿಮ್ಮ ಕೃಪೆ’ ಎಂದು ಸಿದ್ದರಾಮಯ್ಯನವರಿಗೆ ಹೇಳಿದರು. ಆಗ ಸಿದ್ದರಾಮಯ್ಯ ‘ಹೇ ಒಬ್ಬರ ಕೃಪೆ ಎನ್ನಬೇಡ. ಎಲ್ಲರ ಸಹಕಾರದಿಂದ ಅನ್ನಬೇಕು. ಇಲ್ಲದಿದ್ದರೆ ಎಲ್ಲರೂ ನನ್ನ ಮೇಲೆ ತಿರುಗಿ ಬೀಳ್ತಾರೆ’ ಎಂದು ನಗುತ್ತಲೇ ಹೇಳಿದರು.

“ದೇವರಿದ್ದಾನೆ, ಹಾಗಂತ ಬ್ರಹ್ಮ ಹಣೆಬರಹ ಬರೆದಿರುತ್ತಾನೆ ಎನ್ನುವುದನ್ನು ನಂಬುವುದು ಸರಿಯಲ್ಲ. ಬಡತನ, ಕಷ್ಟಕ್ಕೆಲ್ಲಾ ಹಣೆಬರಹ ಕಾರಣ ಎಂದು ನಂಬಿಸಿದ್ದಾರೆ. ವೈದ್ಯಕೀಯ, ಇಂಜಿನಿಯರಿಂಗ್, ವಿಜ್ಞಾನ ಓದಿದವರೂ ಹೀಗೆಯೇ ಹೇಳುತ್ತಾರೆ. ನಮ್ಮ ತಂದೆಯ 6 ಜನ ಮಕ್ಕಳಲ್ಲಿ ನಾನೊಬ್ಬನೇ ಶಿಕ್ಷಣ ಪಡೆದಿದ್ದು. ಹಾಗಾದರೆ ದೇವರು ನನ್ನ ಹಣೆಯಲ್ಲಿ ಮಾತ್ರ ವಿದ್ಯಾಭ್ಯಾಸ ಬರೆದು, ಉಳಿದವರಿಗೆ ಉಳುಮೆ ಮಾಡುವಂತೆ ಬರೆದಿದ್ದಾನೆ ಎಂದರೆ ನಂಬಲಾಗುವುದೇ?. ಅಸ್ಪೃಶ್ಯ ವರ್ಗದಲ್ಲಿ ಹುಟ್ಟುವಂತೆ ದೇವರು ಬರೆದಿದ್ದಾನಾ?. ದೇವರು ಹಣೆಯಲ್ಲಿ ಬರೆಯುವುದಾದರೆ ಹೀಗೆ ತಾರತಮ್ಯ ಮಾಡುತ್ತಾನೆಯೇ?. ವೈಚಾರಿಕತೆ ಇಲ್ಲದಿದ್ದರೆ ಮೌಢ್ಯಗಳ ದಾಸರಾಗಬೇಕಾಗುತ್ತದೆ. ವೈಜ್ಞಾನಿಕ ಮನೋಭಾವ, ವೈಚಾರಿಕತೆ ನೆಲಗಟ್ಟಿನಲ್ಲಿ ಸರಿ–ತಪ್ಪುಗಳ ವಿಮರ್ಶೆಯೊಂದಿಗೆ ನಡೆದರೆ ಮಾತ್ರ ಬದುಕಿನಲ್ಲಿ ಸುಧಾರಣೆ ಸಾಧ್ಯ.

-ಸಿದ್ದರಾಮಯ್ಯ, ಮಾಜಿ ಸಿಎಂ

ಮೈಸೂರು, ಮಾ.26(ಎಸ್‌ಬಿಡಿ)– ವೈಚಾರಿಕತೆ ಇಲ್ಲದಿದ್ದರೆ ಮೌಢ್ಯಗಳ ದಾಸರಾಗಿ ಬದುಕಬೇಕಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ ವ್ಯಕ್ತಪಡಿಸಿದರು.

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಶನಿವಾರ ಆಯೋಜಿಸಿದ್ದ ಪ್ರೊ.ಕೆ.ಎಸ್.ಭಗವಾನ್ ಕುರಿತ ‘ಸಮಸದ್ವಿವೇಕ’ ಕೃತಿ ಬಿಡುಗಡೆ ಹಾಗೂ ವಿಧಾನಪರಿಷತ್ ನೂತನ ಸದಸ್ಯ ಡಾ.ಡಿ.ತಿಮ್ಮಯ್ಯ ಅವರಿಗೆ ಅಭಿನಂದನಾ ಸಮಾರಂಭ’ದಲ್ಲಿ ಮಾತನಾಡಿ, ದೇಶದಲ್ಲಿ ಮೌಢ್ಯಗಳನ್ನು ಬಿತ್ತಿ ಬೆಳೆಸಲಾಗಿದೆ. ಅದೆಷ್ಟೋ ಜನ ಮೌಢ್ಯಗಳನ್ನೇ ನಂಬಿ, ಯಾವುದೇ ಸುಧಾರಣೆ ಕಾಣದೆ ಜೀವನವನ್ನೇ ಮುಗಿಸಿದ್ದಾರೆ. ಹೀಗೆ ಎಲ್ಲಾ ಕಾಲದಲ್ಲೂ ಓಲೈಕೆ ಮಾಡಿಕೊಂಡು ಬದುಕಲಾಗದು. ಪ್ರತಿಯೊಬ್ಬರೂ ವೈಜ್ಞಾನಿಕ ಮನೋಭಾವ ಹಾಗೂ ವೈಚಾರಿಕತೆಯನ್ನು ಬೆಳೆಸಿಕೊಳ್ಳಬೇಕು ಎಂದರು.

ನಿಜವಾದ ಶಿಕ್ಷಣವಿಲ್ಲ: ‘ಇವನಾರವ ಇವನಾರವನೆಂದೆನಿಸದಿರಯ್ಯಾ...’ ವಚನ ಹೇಳಿದ ಸಿದ್ದರಾಮಯ್ಯ, ಬಸವಾದಿ ಶರಣರು ಸಮಾನತೆ ಸಂದೇಶ ಸಾರಿದರು. ಆದರೆ ಈಗ ‘ಇವ ನಮ್ಮವ...’ ಎಂದು ವಚನ ಹೇಳಿ ಬಳಿಕ ನೀನು ಯಾವ ಜಾತಿಯವನು? ಎಂದು ಕೇಳುತ್ತಾರೆ. ಅಕ್ಷರಸ್ಥರು, ವಿದ್ಯಾವಂತರು ಜಾತಿಗೆ ಜೋತು ಬೀಳುವುದರ ಜೊತೆಗೆ ಮೌಢ್ಯ ಆಚರಿಸುವುದು ಅತ್ಯಂತ ನೋವಿನ ಸಂಗತಿ. 8 ಶತಮಾನಕ್ಕೂ ಹಿಂದಿನಿಂದ ಪ್ರಯತ್ನ ನಡೆದು ಬಂದಿದ್ದರೂ ಜಾತಿ ತಾರತಮ್ಯ ತೊಲಗಿಲ್ಲ. ನೈಜ ರೀತಿಯಲ್ಲಿ ಶಿಕ್ಷಣ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಭಗವಾನ್ ಬಣ್ಣನೆ: ಪ್ರೊ.ಕೆ.ಎಸ್.ಭಗವಾನ್ ವಿಮರ್ಶಕ, ಪ್ರೊಫೆಸರ್ ಮಾತ್ರವಲ್ಲ, ಓರ್ವ ವಿಚಾರವಾದಿ. ಈ ಕಾರಣಕ್ಕಾಗಿಯೇ ಇವರು ಬಹಳಷ್ಟು ಟೀಕೆ, ಜೀವ ಭಯವನ್ನೂ ಎದುರಿಸಿದ್ದಾರೆ. ಪಟ್ಟಭದ್ರ ಹಿತಾಶಕ್ತಿಗಳ ನಡುವೆಯೂ ಗಟ್ಟಿಯಾಗಿ ಉಳಿದಿರುವುದು ದೊಡ್ಡ ಸಾಧನೆಯೇ. ಸಮಾಜಕ್ಕಾಗಿ ಬದುಕುವವರ ಹೆಸರು ಚರಿತ್ರೆಯಲ್ಲಿ ಉಳಿಯುತ್ತದೆ. 77ರ ವಯಸ್ಸಿನಲ್ಲೂ ಗಟ್ಟಿಯಾಗಿದ್ದೀರಿ. ನೂರು ವರ್ಷ ಗ್ಯಾರಂಟಿ. ಆಯುಷ್ಯ, ಆರೋಗ್ಯ ನಿಮ್ಮದಾಗಲಿ. ಸಮಾಜದಲ್ಲಿ ವೈಜ್ಞಾನಿಕ ಮನೋಭಾವ ಜಾಗೃತಗೊಳಿಸುವ ಕೆಲಸವನ್ನು ಮುಂದುವರೆಸಿ. ಮುಂದೊಂದು ದಿನ ಬದಲಾವಣೆ ಆಗಬಹುದು ಎಂದು ಸಿದ್ದರಾಮಯ್ಯ, ಭಗವಾನ್ ಅವರನ್ನು ಬಣ್ಣಿಸಿದರು.

ಡಾ.ತಿಮ್ಮಯ್ಯರಿಗೆ ಕಿವಿಮಾತು: ತಳಸಮುದಾಯದ ಡಾ.ತಿಮ್ಮಯ್ಯನವರು ವೈದ್ಯಕೀಯ ಶಿಕ್ಷಣ ಪಡೆದು, ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತರಾದ ಬಳಿಕ ರಾಜಕೀಯ ಕ್ಷೇತ್ರಕ್ಕೆ ಬಂದು ಈಗ ವಿಧಾನಪರಿಷತ್ ಸದಸ್ಯರಾಗಿದ್ದಾರೆ. ಹಿಂದುಳಿದವರು, ದಲಿತರ ಬಗ್ಗೆ ಹೆಚ್ಚು ಮಾತನಾಡಿದರೆ ಮೇಲ್ವರ್ಗದ ವಿರೋಧಿಗಳು ಎಂದು ಹಣೆಪಟ್ಟಿ ಕಟ್ಟುತ್ತಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಕರಡು ಸಮಿತಿ ಅಧ್ಯಕ್ಷರಾಗಿದ್ದರ ಫಲವಾಗಿ ತಳಸಮುದಾಯದವರಿಗೆ ಅವಕಾಶಗಳು ಸಿಕ್ಕಿವೆ. ರಾಜಕೀಯದ ಜೊತೆಗೆ ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯದಿಂದ ಸಮಸಮಾಜ ನಿರ್ಮಾಣ ಸಾಧ್ಯ ಎಂದು ಡಾ.ಅಂಬೇಡ್ಕರ್ ಹೇಳಿದ್ದಾರೆ. ಈ ನಿಟ್ಟಿನಲ್ಲಿ ರಾಜಕಾರಣ ಮಾಡಬೇಕು. ಜಾತ್ಯತೀತವಾಗಿ ಎಲ್ಲಾ ಸಮುದಾಯದ ಬಡವರ ಪರವಾಗಿ ಕೆಲಸ ಮಾಡಬೇಕು. ಡಾ.ತಿಮ್ಮಯ್ಯ ಹೀಗೆಯೇ ನಡೆದುಕೊಳ್ಳುತ್ತಾರೆಂಬ ವಿಶ್ವಾಸವಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಇದಕ್ಕೂ ಮುನ್ನ ದಿವಂಗತ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಸಿದ್ದರಾಮಯ್ಯ, ಡಾ.ತಿಪ್ಪೇಸ್ವಾಮಿ ಸಂಪಾದಿಸಿರುವ ಪ್ರೊ.ಕೆ.ಎಸ್.ಭಗವಾನ್ ಕುರಿತ ‘ಸಮಸದ್ವಿವೇಕ’ ಕೃತಿ ಹಾಗೂ ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿ ಮಹೇಶ್ ಸೋಸಲೆ ಅವರ ‘ಕನ್ನಡ ನಾಡಿನಲ್ಲಿ ಬಹುತ್ವದ ದಾರಿಗಳು’ ಕೃತಿಗಳನ್ನು ಬಿಡುಗಡೆಗೊಳಿಸಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯರನ್ನು ಅಭಿನಂದಿಸಿದರು. ಸಮಸದ್ವಿವೇಕ ಕೃತಿ ಕುರಿತು ಪ್ರೊ.ಸಿ.ನಾಗಣ್ಣ ಮಾತನಾಡಿದರು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಕೃತಿ ಸಂಪಾದಕ ಡಾ.ತಿಪ್ಪೇಸ್ವಾಮಿ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ರಾಜ್ಯಾಧ್ಯಕ್ಷ ಸಿ.ವೆಂಕಟೇಶ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತಿ ಚಿಂತಕ ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಎಲ್.ಜಿ.ಹಾವನೂರ್ ಜಯಂತಿ ಆಚರಣೆ



ಮೈಸೂರು, ಮಾ.25– ಮೈಸೂರು ನಾಯಕರ ಪಡೆ ವತಿಯಿಂದ ಹಿಂದುಳಿದ ವರ್ಗಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸಿದ ಧೀಮಂತ ನಾಯಕ ಎಲ್.ಜಿ ಹಾವನೂರ್ ಜಯಂತಿಯನ್ನು ಇಂದು ಸುಣ್ಣದಕೇರಿಯ ಮಹದೇಶ್ವರ ದೇವಸ್ಥಾನದ ಆವರಣದಲ್ಲಿರುವ ಮಹರ್ಷಿ ವಾಲ್ಮೀಕಿ ಪುತ್ಥಳಿ ಬಳಿ ಆಚರಿಸಲಾಯಿತು.

ಪುಷ್ಪನಮನ ಸಲ್ಲಿಸಿ ಮಾತನಾಡಿದ ನಾಯಕರ ಪಡೆ ಅಧ್ಯಕ್ಷ ವಕೀಲ ಪಡುವಾರಹಳ್ಳಿ ಎಂ ರಾಮಕೃಷ್ಣ, ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸು ಅವರು ಸಮಾಜದ ಮುಖ್ಯವಾಹಿನಿಯಿಂದ ಬಹುದೂರವೇ ಇದ್ದ ಹಿಂದುಳಿದ ವರ್ಗಗಳ ಏಳಿಗೆಯ ಏಕೈಕ ಉದ್ದೇಶದಿಂದ ಹಿಂದುಳಿದ ವರ್ಗಗಳ ಆಯೋಗ ರಚಿಸಿ ಅದಕ್ಕೆ ಕಾನೂನು ತಜ್ಞರಾದ ಎಲ್.ಜಿ.ಹಾವನೂರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು.

ರಾಜ್ಯಾದ್ಯಂತ ಸಂಚರಿಸಿ ಹಿಂದುಳಿದ ವರ್ಗಗಳ ಜನಜೀವನದ ಬಗ್ಗೆ ಅಧ್ಯಯನ ನಡೆಸಿ ಅವರಿಗೆ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಮುಖ್ಯವಾಹಿನಿಗೆ ತರುವ ಬಗ್ಗೆ ಶಿಫಾರಸ್ಸನ್ನು ಹಾವನೂರರು ಮಾಡಿದರು. ಡಿ.ದೇವರಾಜ ಅರಸರ ದಿಟ್ಟ ನಿರ್ಧಾರದ ಫಲವಾಗಿ ಹಿಂದುಳಿದ ವರ್ಗಕ್ಕೆ ಅನುಕೂಲವಾಯಿತು. ಹಾವನೂರ್ ಅವರ ಅಧ್ಯಯನಶೀಲತೆಯ ಪರಿಣಾಮವಾಗಿ ಅವರ ವರದಿಯನ್ನು ಇಂದಿಗೂ ಸ್ಮರಿಸುತ್ತಾರೆ. ಅವರು ನಿತ್ಯ ಸ್ಮರಣೀಯರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯರಾದ ಲೋಕೇಶ್ ಪಿಯಾ, ಸಂಘದ ಅಧ್ಯಕ್ಷರಾದ ಪಿ.ಸತೀಶ್ ಕಾರ್ಯದರ್ಶಿ ಬಿ.ಸಿದ್ದಪ್ಪ, ಮಂಜು, ಎಂ.ಸತೀಶ್, ಶಿವು, ಕೃಷ್ಣಪ್ಪ, ಕುಮಾರ್, ಬಲರಾಮ, ಶೇಖರ್, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ‘ದ ಪೀಪಲ್ ಆಫ್ ಇಂಡಿಯಾ’ ನಾಟಕ ಪ್ರದರ್ಶನ

ಮೈಸೂರು,ಮಾ.26(ಎಂಟಿವೈ)– ವಿಶ್ವ ಮಹಿಳಾ ದಿನ ಹಾಗೂ ವಿಶ್ವ ರಂಗಭೂಮಿ ದಿನದ ಅಂಗವಾಗಿ ಮೈಸೂರಿನ ಕಲಾಮಂದಿರದಲ್ಲಿ ಮಾ. 28ರಂದು ಸಂಜೆ 5.30ಕ್ಕೆ ಚಾಮರಾಜನಗರದ ಸಾತ್ವಿಕಿ ಸೇವಾ ಟ್ರಸ್ಟ್ ವತಿಯಿಂದ ‘ದ ಪೀಪಲ್ ಆಫ್ ಇಂಡಿಯಾ’ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಟ್ರಸ್ಟಿ ಹೊ.ನಂ. ಅಂಕರಾಜು ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಾಯಣ ಶಿವಮೊಗ್ಗ ಕಲಾವಿದರು ಅಭಿನಯಿಸುವ ಈ ನಾಟಕವನ್ನು ಡಾ.ರಾಜಪ್ಪ ದಳವಾಯಿ ರಚಿಸಿದ್ದಾರೆ. ನಾಟಕಕ್ಕೆ ಎಲ್ಲರಿಗೂ ಉಚಿತ ಪ್ರವೇಶಾವಕಾಶವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಚಾಮರಾಜನಗರದ ಸಾತ್ವಿಕಿ ಸೇವಾ ಟ್ರಸ್ಟ್ ಅಧ್ಯಕ್ಷೆ ಎನ್. ಸರಸ್ವತಿ, ಜಾಹ್ನವಿ, ಟಿ.ಕೆ. ಚನ್ನರಾಜು ಇದ್ದರು.

‘ಕನ್ನಡ ಕದಿರು’, ‘ರಂಗ ಸಮ್ಮುಖ’ ಕೃತಿ ಬಿಡುಗಡೆ

ಮೈಸೂರು, ಮಾ.26(ಎಂಕೆ)– ಮೈಸೂರು ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಅಪ್ರುವರಂಬೆ ಮೈಸೂರು ಹಾಗೂ ರಂಗಾಯಣದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ರಂಗಕರ್ಮಿ ನಾ.ನಾಗಚಂದ್ರ ರಚಿತ ‘ಕನ್ನಡ ಕದಿರು’, ‘ರಂಗ ಸಮ್ಮುಖ’ ಕೃತಿಗಳನ್ನು ಶನಿವಾರ ಲೋಕಾರ್ಪಣೆಗೊಳಿಸಲಾಯಿತು.

‘ಕನ್ನಡ ಕದಿರು’ ಕೃತಿ ಕುರಿತು ಮಾತನಾಡಿದ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಎಂ.ಜಿ.ಮಂಜುನಾಥ್, ನಾ.ನಾಗಚಂದ್ರ ತಮ್ಮ 40 ವರ್ಷದ ರಂಗಭೂಮಿ ಅನುಭವ ಮತ್ತು ಅಧ್ಯಯನದ ಫಲದಿಂದ ಅವರ ಹೊಸ 2 ಕೃತಿಗಳು ಹೊರಬಂದಿವೆ. ಕೃತಿಯಲ್ಲಿನ ಲೇಖನಗಳನ್ನು ನೋಡಿದರೆ ಅವರನ್ನು ಇತ–ಮಿತ ಬರಹ ಚತುರ ಎಂದು ಕರೆಯುವುದು ಸೂಕ್ತ ಎನಿಸುತ್ತದೆ. ಕನ್ನಡ ವ್ಯಾಕರಣ ಕುರಿತು ತಮ್ಮ ಕೃತಿಯಲ್ಲಿ ಅದ್ಭುತವಾಗಿ ಚರ್ಚಿಸಿದ್ದಾರೆ. ಛಂದಸ್ಸು ಕುರಿತು ಪರಿಪೂರ್ಣವಾದ ಜ್ಞಾನವನ್ನು ಹೊಂದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಂಗಸಮಾಜದ ಸದಸ್ಯ ಡಾ.ಬಿ.ವಿ. ರಾಜರಾಂ, ರಂಗಕರ್ಮಿ ನಾ.ನಾಗಚಂದ್ರ ಉಪನ್ಯಾಸಕ ಎನ್.ಧನಂಜಯ, ಮಹಿಮ ಪ್ರಕಾಶನದ ಶ್ರೀನಿವಾಸ್, ಚಂದ್ರಕಲಾ, ಅನಂತರಾಜು, ಎಚ್.ಎಸ್. ಉಮೇಶ್,ನಾಗೇಂದ್ರಕುಮಾರ್, ರುಗಸ್ವಾಮಿ , ನಾಗಭೂಷಣ್, ಕೆ.ಎಂ.ರಾಮಯ್ಯ, ಯು.ಎಸ್.ರಾಮಣ್ಣ, ಅಶ್ವತ್ಥ ಕದಂಬ, ಗೋಪಿ, ಎಸ್.ನಾಗರತ್ನ ಉಪಸ್ಥಿತರಿದ್ದರು.



ಮೈಸೂರಿನ ಕುಪ್ಪಣ್ಣ ಪಾರ್ಕ್ ವಾಯುವಿಹಾರಿಗಳಿಗೆ ಮುಕ್ತ

● ಪ್ರತಿದಿನ ಬೆಳಗ್ಗೆ 6ರಿಂದ 9, ಸಂಜೆ 5ರಿಂದ 7 ಗಂಟೆವರೆಗೆ ವಾಯುವಿಹಾರಕ್ಕೆ ಸಮಯ ನಿಗದಿ ● ಬೆಳಗ್ಗೆ 8ರಿಂದ ಸಂಜೆ 7ವರೆಗೂ ‘ಸಸ್ಯ ಸಂತೆ’ಯಲ್ಲಿ ಇಷ್ಟದ ಸಸಿ ಖರೀದಿಸಬಹುದು ● ಶೀಘ್ರದಲ್ಲೇ ವಾರಕ್ಕೊಮ್ಮೆ ಸಾವಯವ ಕೃಷಿ ಪದ್ಧತಿಯ ಹಣ್ಣು–ತರಕಾರಿ ಮಾರಾಟವೂ ಆರಂಭ



ಕುಪ್ಪಣ್ಣ ಪಾರ್ಕ್‌ನಲ್ಲಿ ಆರಂಭಿಸಿರುವ ನರ್ಸರಿ ಉದ್ಘಾಟಿಸಿದ ಶಾಸಕರಾದ ಎಸ್.ಎ.ರಾಮದಾಸ್ ಹಾಗೂ ಎಲ್.ನಾಗೇಂದ್ರ ಗಿಡಗಳನ್ನು ವೀಕ್ಷಿಸುತ್ತಿರುವುದು.

ಮೈಸೂರು,ಮಾ.26(ಎಂಟಿವೈ)– ಇತ್ತೀಚಿನ ವರ್ಷಗಳಲ್ಲಿ ದಸರಾ ಫಲಪುಷ್ಪ ಪ್ರದರ್ಶನಕ್ಕಷ್ಟೇ ಸೀಮಿತವಾಗಿದ್ದ ಮೈಸೂರಿನ ಕುಪ್ಪಣ್ಣ ಪಾರ್ಕ್ ಇನ್ನು ಮುಂದೆ ವರ್ಷವಿಡೀ ಚಟುವಟಿಕೆಯ ತಾಣವಾಗಿಸಲು ನಿರ್ಧರಿಸಿರುವ ತೋಟಗಾರಿಕೆ ಇಲಾಖೆ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ವಾಯುವಿಹಾರಕ್ಕೆ ಅವಕಾಶ ನೀಡಿದೆ. ಜೊತೆಗೆ ಇಲ್ಲಿ ‘ಸಸ್ಯ ಸಂತೆ’ ನರ್ಸರಿ ಆರಂಭಿಸಿ ಕೈಗೆಟುಕುವ ದರದಲ್ಲಿ ಗಿಡ ಮಾರಾಟವೂ ಆರಂಭವಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಎಲ್ಲಾ ಚಟುವಟಿಕೆಗಳು ಸ್ತಬ್ಧವಾಗಿತ್ತು. ತೋಟಗಾರಿಕಾ ಇಲಾಖೆ ಇಂದಿನಿಂದ ಕುಪ್ಪಣ್ಣ ಪಾರ್ಕ್‌ಗೆ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತ ಅವಕಾಶ ನೀಡಿದ್ದು, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಇಲ್ಲಿ ವಾಯುವಿಹಾರಿಗಳು ವಿಹರಿಸಬಹುದು.

ಸಸ್ಯಸಂತೆಗೆ ಚಾಲನೆ: ಸಸ್ಯಗಳ ಬಗ್ಗೆ ಅರಿವು ಮೂಡಿಸಲು ತೋಟಗಾರಿಕಾ ಇಲಾಖೆ ಕುಪ್ಪಣ್ಣ ಪಾರ್ಕ್‌ನಲ್ಲಿ ‘ಸಸ್ಯ ಸಂತೆ’ ಹೆಸರಲ್ಲಿ ನರ್ಸರಿ ಆರಂಭಿಸಿದ್ದು, ಇಂದು ಬೆಳಗ್ಗೆ ಶಾಸಕರಾದ ಎಸ್.ಎ.ರಾಮದಾಸ್ ಹಾಗೂ ಎಲ್.ನಾಗೇಂದ್ರ ಇದನ್ನು ಉದ್ಘಾಟಿಸಿದರು.

109 ಬಗೆಯ ಗಿಡ ಲಭ್ಯ: ಕುಪ್ಪಣ್ಣ ಪಾರ್ಕ್‌ನಲ್ಲಿ ಹೊಸದಾಗಿ ಆರಂಭಿಸಿರುವ ಸಸ್ಯಸಂತೆಯಲ್ಲಿ ಹೂವು, ಹಣ್ಣು, ಟೆರೇಸ್ ಗಾರ್ಡನ್, ಕಿಚನ್ ಗಾರ್ಡನ್ ಗಿಡಗಳು ಸೇರಿದಂತೆ ಒಟ್ಟು 109 ಬಗೆಯ ಗಿಡಗಳನ್ನು ಮಾರಾಟಕ್ಕಿಡಲಾಗಿದೆ. 20 ರಿಂದ 60 ರೂ. ದರ ನಿಗದಿ ಮಾಡಲಾಗಿದೆ. ಉಪಯುಕ್ತವಾಗುವಂತಹ ಗಿಡಗಳನ್ನು ವಾಯುವಿಹಾರಕ್ಕೆ ಬಂದವರು ಖರೀದಿಸಬಹುದಾಗಿದೆ.

ಟೆರೇಸ್ ಗಾರ್ಡನ್‌ಗೆ ಆದ್ಯತೆ ನೀಡಿ: ಸಸ್ಯ ಸಂತೆ ಉದ್ಘಾಟಿಸಿದ ಬಳಿಕ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಉದ್ಯೋಗ ಸೃಷ್ಟಿ ಸವಾಲಾಗುತ್ತಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕೃಷಿ, ತೋಟಗಾರಿಕೆ ಇಲಾಖೆ ನೆರವಾಗಬೇಕು. ಸ್ಕಿಲ್ ಇಂಡಿಯಾ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಎಲ್ಲಾ ಕ್ಷೇತ್ರದಲ್ಲೂ ಜಾರಿಗೆ ತರಲು ಮುಂದಾಗಿದೆ. ಇದರ ಅಡಿ ವಿಶೇಷವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಈ ಬಾರಿಯ ಕೇಂದ್ರ ಹಾಗೂ ರಾಜ್ಯ ಬಜೆಟ್‌ನಲ್ಲಿ ತೋಟಗಾರಿಕೆ ಹಾಗೂ ಕೃಷಿಗೆ ವಿಶೇಷ ಆದ್ಯತೆಯನ್ನು ನೀಡಿದ್ದಾರೆ. ಹೆಚ್ಚಿನದಾಗಿ ಯುವಜನರು ಈ ಕ್ಷೇತ್ರದಲ್ಲಿ ಹೊಸ ಹೊಸ ಅನ್ವೇಷಣೆ ಮಾಡಲು ಮುಂದಾಗಬೇಕು. ಟೆರೇಸ್ ಗಾರ್ಡನ್ ನಿರ್ಮಿಸಲು ಪ್ರೇರೇಪಿಸಬೇಕು. ಅದಕ್ಕಾಗಿ ಯೋಜನೆ ರೂಪಿಸಬೇಕು. ಮನೆಗೆ ಬೇಕಾಗುವ ತರಕಾರಿ, ಹೂವು, ಹಣ್ಣನ್ನು ಬೆಳೆಯುವ ಯೋಜನೆಯನ್ನು ಸಿದ್ಧಗೊಳಿಸಿ ಕ್ಷೇತ್ರಾದ್ಯಂತ ವಿಸ್ತರಣೆ ಮಾಡಲು ಉದ್ದೇಶಿಸಲಾಗಿದೆ ಎಂದರು.

5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ: ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮೈಸೂರಿನ ಹೃದಯಭಾಗದಲ್ಲಿರುವ ಕುಪ್ಪಣ್ಣ ಪಾರ್ಕ್ ಕೇವಲ ದಸರಾ ಮಹೋತ್ಸವದ ಸಂದರ್ಭದಲ್ಲಿ ಮಾತ್ರ ಬಳಕೆಯಾಗುತ್ತಿದೆ ಉಳಿದ ದಿನಗಳಲ್ಲಿ ಯಾವುದೇ ಚಟುವಟಿಕೆ ಇರುವುದಿಲ್ಲ. 7 ಕೋಟಿ ರೂ. ವೆಚ್ಚದಲ್ಲಿ ಗಾಜಿನ ಮನೆ ನಿರ್ಮಿಸಲಾಗಿದೆ. ರಾಜ್ಯದಲ್ಲಿಯೇ ಮೂರನೇ ಬೃಹತ್ ಗಾಜಿನ ಮನೆ ಇದಾಗಿದ್ದು, ಬಳಕೆಯಾಗದೆ ಸ್ತಬ್ಧವಾಗಿದೆ. ಊಟಿಯಲ್ಲಿ ಬಟಾನಿಕಲ್ ಪಾರ್ಕ್‌ಗೆ ಜನರು ಹೋಗುವಂತೆ ಕುಪ್ಪಣ್ಣ ಪಾರ್ಕ್‌ಗೂ ಪ್ರವಾಸಿಗರು ಬರುವಂತೆ ಕಾರ್ಯಕ್ರಮ ರೂಪಿಸಬೇಕಾಗಿದೆ. ಈ ನಿಟ್ಟಿನಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಪಾರ್ಕ್‌ನಲ್ಲಿ ಶೌಚಾಲಯ, ವಾಕಿಂಗ್ ಪಾತ್ ನಿರ್ಮಾಣ, ಲೈಟಿಂಗ್ಸ್, ಕಾರ್ಯಕ್ರಮದ ವೇದಿಕೆ ಅಭಿವೃದ್ಧಿ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಕ್ರಿಯಾಯೋಜನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಮ್ಮ ಅವಧಿಯಲ್ಲಿ ಕುಪ್ಪಣ್ಣ ಪಾರ್ಕ್‌ನಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಮೈಸೂರಿನ ಜನರ ಉಪಯೋಗಕ್ಕೆ ಸಮರ್ಪಿಸುವುದಾಗಿ ತಿಳಿಸಿದರು.


ಬನ್ನಿ ಆದರೆ, ಪ್ಲಾಸ್ಟಿಕ್ ತರಬೇಡಿ: ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಕೆ.ರುದ್ರೇಶ್ ಮಾತನಾಡಿ, ಕುಪ್ಪಣ್ಣ ಪಾರ್ಕ್ ಅನ್ನು ಉತ್ತಮವಾಗಿ ನಿರ್ವಹಣೆ ಮಾಡಲಾಗಿದೆ. ಬೇಸಿಗೆಯಲ್ಲೂ ಕುಪ್ಪಣ್ಣ ಪಾರ್ಕ್ ಹಚ್ಚಹಸಿರಿನಿಂದ ಕೂಡಿದೆ ಇಲ್ಲಿನ ವಾತಾವರಣ ಆಹ್ಲಾದಿಸಿ ಆರೋಗ್ಯ ಕಾಪಾಡಿಕೊಳ್ಳಿ, ಆದರೆ ಪಾರ್ಕ್‌ಗೆ ಬರುವ ವೇಳೆ ಕಡ್ಡಾಯವಾಗಿ ಪ್ಲಾಸ್ಟಿಕ್ ಪೇಪರ್, ಕವರ್ ತರಬೇಡಿ. ಈಗಾಗಲೇ ಮೈಸೂರು ನಗರವನ್ನು ಪ್ಲಾಸ್ಟಿಕ್ ಮುಕ್ತ ನಗರವಾಗಿ ಮಾಡಲು ಜಿಲ್ಲಾಡಳಿತ ಕ್ರಮ ಕೈಗೊಂಡಿದೆ ಈ ನಿಟ್ಟಿನಲ್ಲಿ ಪಾರ್ಕ್‌ನಲ್ಲಿ ಸ್ವಚ್ಛತೆ ಕಾಪಾಡುವ ಜವಾಬ್ದಾರಿ ಇಲಾಖಾ ಸಿಬ್ಬಂದಿ ಸೇರಿದಂತೆ ನಾಗರಿಕರದ್ದಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಬಿಸಾಡದಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯ ಸತೀಶ್, ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜ್, ಸಹಾಯಕ ನಿರ್ದೇಶಕ ಸಿ.ನವೀನ್, ಹಿರಿಯ ಸಹಾಯಕ ನಿರ್ದೇಶಕಿ ಸುವೇದಾ ಹಾಗೂ ಪ್ರೊಬೇಷನರಿ ಅಧಿಕಾರಿಗಳು ಉಪಸ್ಥಿತರಿದ್ದರು.

ದೇಶ ವಿದೇಶ

ಉಕ್ರೇನ್ ಮೇಲೆ ರಷ್ಯಾದಿಂದ ಎರಡನೇ ಬಾರಿಗೆ ಕ್ಯಾಲಿಬರ್ ಕ್ಷಿಪಣಿ ಪ್ರಯೋಗ

ರಷ್ಯಾ, ಮಾ. 26– ರಷ್ಯಾ ಉಕ್ರೇನ್‌ನಿಂದ ತೀವ್ರ ಪ್ರತಿರೋಧವನ್ನು ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಹೇಗಾದರೂ ಮಾಡಿ ಕೀವ್ ವಶಪಡಿಸಿಕೊಳ್ಳುವ ಗುರಿಯೊಂದಿಗೆ ರಷ್ಯಾ ತನ್ನ ಶಸ್ತ್ರಾಗಾರದಲ್ಲಿರುವ ಒಂದೊಂದು ಅಸ್ತ್ರವನ್ನೂ ಹೊರ ತೆಗೆಯುತ್ತಿದೆ. ಈಗಾಗಲೇ ಎರಡು ಬಾರಿ ಕಿಂಜಾಲ್ ಹೈಪರ್ಸಾನಿಕ್ ಕ್ಷಿಪಣಿ ದಾಳಿ ನಡೆಸಿದ ಪುಟಿನ್ ಸೇನೆ, ಇತ್ತೀಚೆಗೆ ಮತ್ತೊಂದು ಶಕ್ತಿಶಾಲಿ ಅಸ್ತ್ರದ ಪ್ರಯೋಗ ಮಾಡಿದೆ ಎಂದು ಹೇಳಿಕೊಂಡಿದೆ.



ಕ್ಷಿಪಣಿಯನ್ನು ರಷ್ಯಾದ ಕಾರ್ವೆಟ್‌ನಿಂದ ಕ್ರೈಮಿಯಾದ ಸೆವಾಸ್ಟೊಪೋಲ್‌ನಲ್ಲಿ ಸಮುದ್ರದ ಮೇಲೆ ಉಡಾಯಿಸಲಾಯಿತು. ಉಕ್ರೇನ್‌ನ ಒಜ್ವವಾದಲ್ಲಿರುವ ಸೇನಾ ನೆಲೆಯನ್ನು ಗುರಿಯಾಗಿಸಿಕೊಂಡು ಇದನ್ನು ಪ್ರಾರಂಭಿಸಲಾಯಿತು. ಈ ಪ್ರದೇಶವು ರಾಜಧಾನಿ ಕೀವ್‌ನಿಂದ ಸುಮಾರು 200 ಮೈಲುಗಳಷ್ಟು ದೂರದಲ್ಲಿದೆ. ಈ ದಾಳಿಯಿಂದಾಗಿ ಪಶ್ಚಾತ್ಯ ದೇಶಗಳು ನೀಡಿದ್ದ ಹಲವಾರು ಶಸ್ತ್ರಾಸ್ತ್ರಗಳು ದಾಳಿಯಲ್ಲಿ ನಾಶವಾದವು ಎಂದು ರಷ್ಯಾದ ಮಿಲಿಟರಿ ಹೇಳಿದೆ. ಶತ್ರು ರಾಷ್ಟ್ರಗಳ ವಾಯುಪ್ರದೇಶವನ್ನ ಭೇದಿಸಿ ಭೂಮಿಯ ಮೇಲಿನ ತನ್ನ ಗುರಿಯನ್ನ ತಲುಪಿ ನಾಶಪಡಿಸುವುದಕ್ಕೆ ಹೆಸರುವಾಸಿ ಈ ಕ್ಯಾಲಿಬರ್. ರಷ್ಯಾ ಈ ಕ್ಷಿಪಣಿಗಳನ್ನು ಅತ್ಯಂತ ನಿರ್ಣಾಯಕ ಗುರಿಗಳ ಮೇಲೆ ಮಾತ್ರ ಉಡಾಯಿಸುತ್ತದೆ. ಈ ಕ್ಷಿಪಣಿ ಭೂಮಿಗೆ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸುತ್ತದೆ. ಸುಮಾರು 500 ಕೆಜಿಯ ವಾರ್ ಹೆಡ್ ಗಳನ್ನ ಹೊತ್ತೊಯ್ಯಬಲ್ಲ ಕ್ಯಾಲಿಬರ್ ಕ್ಷಿಪಣಿಯನ್ನು ಮಧ್ಯದಲ್ಲಿಯೇ ಹೇಗೆ ಬೇಕೋ ಹಾಗೆ ನಿಯಂತ್ರಿಸಬಹುದು. ಗೋದಾಮುಗಳು, ಕಮಾಂಡ್ ಪೋಸ್ಟ್‌ಗಳು, ಬಂದರುಗಳು ಮತ್ತು ವಿಮಾನ ನಿಲ್ದಾಣಗಳನ್ನು ನಾಶಮಾಡಲು ಕ್ಷಿಪಣಿಯನ್ನು ಬಳಸಲಾಗುತ್ತದೆ.

ಮಾರ್ಚ್ 30ಕ್ಕೆ ಬಿಮ್‌ಸ್ಟೆಕ್ ಶೃಂಗಸಭೆ

ನವದೆಹಲಿ, ಮಾ. 26– ಮಾರ್ಚ್ 30 ರಂದು ಶ್ರೀಲಂಕಾದಲ್ಲಿ ನಡೆಯಲಿರುವ 5ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಆಗಿ ಭಾಗವಹಿಸಲಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅನಿಶ್ಚಿತತೆಯ ಸವಾಲುಗಳನ್ನು ಸಂಸ್ಥೆಯ ಸದಸ್ಯ ರಾಷ್ಟ್ರಗಳು ಎದುರಿಸುತ್ತಿರುವ ಹಾಗೂ ಬಿಮ್‌ಸ್ಟೆಕ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಸಹಕಾರವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವುದು ಅನಿವಾರ್ಯವಾಗಿದೆ ಎಂದು ಶನಿವಾರ ಅಧಿಕೃತ ಹೇಳಿಕೆ ತಿಳಿಸಿದೆ.

ಕೊಲಂಬೊದಲ್ಲಿ ಮುಂಬರುವ ಶೃಂಗಸಭೆಯು ಬಿಸ್ ಸ್ಟೆಕ್ ಚಾರ್ಟರ್ ಅನ್ನು ಅನುಮೋದಿಸುವ ನಿರೀಕ್ಷೆಯಿದೆ. ಇದು ಸದಸ್ಯ ರಾಷ್ಟ್ರಗಳ ನಡುವಿನ ಸಂಚಾರ ಸಂಪರ್ಕವನ್ನು ಹೆಚ್ಚಿಸುವ ಯೋಜನೆ ಆಗಿದೆ. ಅಲ್ಲದೆ, ಅಪರಾಧ ವಿಷಯಗಳಲ್ಲಿ ಪರಸ್ಪರ ಕಾನೂನು ನೆರವು ಒದಗಿಸುವುದು, ಕರಾವಳಿ ಶಿಪ್ಪಿಂಗ್, ಸದಸ್ಯ ರಾಷ್ಟ್ರಗಳ ನಡುವಿನ ಮೋಟಾರು ವಾಹನ ಒಪ್ಪಂದವನ್ನು ಸಹ ಅಂತಿಮಗೊಳಿಸುವ ಸಾಧ್ಯತೆ ಇದೆ. ಬಿಮ್ ಸ್ಟೆಕ್ ಸಂಘವು ಬಾಂಗ್ಲಾದೇಶ, ಭೂತಾನ್, ಭಾರತ, ನೇಪಾಳ, ಶ್ರೀಲಂಕಾ, ಮ್ಯಾನ್ಮಾರ್ ಮತ್ತು ಥೈಲ್ಯಾಂಡ್ ದೇಶಗಳು ಬಂಗಾಳ ಕೊಲ್ಲಿ ಗಡಿಯಲ್ಲಿರುವ ದೇಶಗಳನ್ನು ಒಳಗೊಂಡಿದೆ.

ಉತ್ತರ ಪ್ರದೇಶದಲ್ಲಿ ಉಚಿತ ಪಡಿತರ ಯೋಜನೆ ಇನ್ನೂ ಮೂರು ತಿಂಗಳು ವಿಸ್ತರಣೆ

ಲಖನೌ, ಮಾ. 26– ಉತ್ತರ ಪ್ರದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಪ್ರಾರಂಭಿಸಿದ ಉಚಿತ ಪಡಿತರ ಯೋಜನೆಯನ್ನು ಇನ್ನೂ ಮೂರು ತಿಂಗಳವರೆಗೆ ವಿಸ್ತರಿಸಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ 2.0 ಮೊದಲ ಸಂಪುಟ ಸಭೆ ಶನಿವಾರ ನಿರ್ಧರಿಸಿದೆ.



ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿ ನಡೆಸಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು ಮಾರ್ಚ್ 31 ರಿಂದ ಜೂನ್ 30 ರವರೆಗೆ ವಿಸ್ತರಿಸಲು ನಾವು ನಿರ್ಧರಿಸಿದ್ದೇವೆ. ಇದು ರಾಜ್ಯದ 15 ಕೋಟಿ ಜನರಿಗೆ ಪ್ರಯೋಜನವನ್ನು ನೀಡುತ್ತದೆ? ಎಂದು ಹೇಳಿದರು.

ಶುಕ್ರವಾರ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಯೋಗಿ ಆದಿತ್ಯನಾಥ್ ಅವರು ಇಂದು ನೂತನ ಸರ್ಕಾರದ ಮೊದಲ ಸಂಪುಟ ಸಭೆ ನಡೆಸಿದರು. "ಈ ಪ್ರಾಸ್ತಾವಿಕ ಸಂಪುಟ ಸಭೆಯಲ್ಲಿ, ರಾಷ್ಟ್ರೀಯತೆ, ಸುರಕ್ಷತೆ, ಉತ್ತಮ ಆಡಳಿತ ಮತ್ತು ಅಭಿವೃದ್ಧಿಯಲ್ಲಿ ನಂಬಿಕೆಯನ್ನು ಇರಿಸಿದ್ದಕ್ಕಾಗಿ ರಾಜ್ಯದ ಜನತೆಗೆ ಮುಖ್ಯಮಂತ್ರಿಗಳು ಧನ್ಯವಾದ ಅರ್ಪಿಸಿದರು" ಎಂದು ಉತ್ತರ ಪ್ರದೇಶ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ. ಜನಸೇವೆ ಮಾಡುವುದು ಅತ್ಯಂತ ಪುಣ್ಯ ಕಾರ್ಯವಾಗಿದ್ದು, ಬದ್ಧತೆ ಮತ್ತು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುವುದರಿಂದ ಸಂತೃಪ್ತಿ ದೊರೆಯುತ್ತದೆ ಎಂದು ಯೋಗಿ ಹೇಳಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಅತ್ಯಂತ ಮುಖ್ಯವಾದದ್ದು. ಕಾರ್ಯಕ್ಷಮತೆ ಆಧಾರಿತ ಕೆಲಸಗಳತ್ತ ಗಮನ ಹರಿಸಬೇಕು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಹೇಳಿದ್ದಾರೆ.

ಜಾರ್ಜ್ ಫ್ಲಾಯ್ಡ್ ಪ್ರತಿಭಟನಾಕಾರರಿಗೆ 106 ಕೋಟಿ ರೂ. ಪರಿಹಾರ ಘೋಷಣೆ

ವಾಷಿಂಗ್ಟನ್, ಮಾ. 26– ಅಮೆರಿಕದಲ್ಲಿ ನಡೆದ ಜಾರ್ಜ್ ಫ್ಲಾಯ್ಡ್ ಹತ್ಯೆ ಜಗತ್ತಿನಾದ್ಯಂತ ಸಂಚಲನ ಸೃಷ್ಟಿಸಿತ್ತು. ಆತನ ಸಾವಿಗೆ ಕಾರಣರಾದ ಪೊಲೀಸರಿಗೆ ಶಿಕ್ಷೆ ವಿಧಿಸುವಂತೆ ಕೋರಿ ಡೆನ್ವರ್ ನಲ್ಲಿ ನಾಗರಿಕರು ಪ್ರತಿಭಟನೆ ನಡೆಸಿದ್ದರು.



ಈ ಸಂದರ್ಭ ಪೊಲೀಸರು ಪ್ರತಿಭಟನಾಕಾರರನ್ನು ಹತ್ತಿಕ್ಕಲು ಬಲಪ್ರಯೋಗ ಮಾಡಿದ್ದರು. ಈ ಸಂದರ್ಭ ನಡೆದ ಸಂಘರ್ಷದಲ್ಲಿ ಹಲವು ಮಂದಿ ಪ್ರತಿಭಟನಾಕಾರರಿಗೆ ಗಂಭೀರ ಗಾಯಗಳಾಗಿದ್ದವು. ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆಯಲ್ಲಿ ಪೊಲೀಸರು ಅನವಶ್ಯಕವಾಗಿ ಪ್ರತಿಭಟನಾಕಾರರ ಮೇಲೆ ಬಲಪ್ರಯೋಗ ನಡೆಸಿರುವುದು ಸಾಬೀತಾಗಿತ್ತು. ಆ ಹಿನ್ನೆಲೆಯಲ್ಲಿ ನ್ಯಾಯಾಲಯ ಪ್ರತಿಭಟನಾಕಾರರಿಗೆ 106 ಕೋಟಿ ರೂ. ಪರಿಹಾರ ಮೊತ್ತ ನೀಡುವಂತೆ ಪೊಲೀಸ್ ಇಲಾಖೆಗೆ ಆದೇಶಿಸಿದೆ. 2 ವರ್ಷಗಳ ಹಿಂದೆ ಕಪ್ಪು ವರ್ಣೀಯನಾದ ಜಾರ್ಜ್ ಫ್ಲಾಯ್ಡ್‌ನನ್ನು ಮಾದಕವಸ್ತು ಹೊಂದಿದ ಆರೋಪದ ಮೇಲೆ ಪೊಲೀಸರು ಬಂಧಿಸಿದ್ದರು. ಈ ಸಂದರ್ಭದಲ್ಲಿ ಅಮಾನವೀಯವಾಗಿ ವರ್ತಿಸಿದ ಪೊಲೀಸರು ಜಾರ್ಜ್ ಫ್ಲಾಯ್ಡ್ ಕುತ್ತಿಗೆ ಮೇಲೆ ಕಾಲಿಸಿರಿಸಿದ್ದರು. ಆಗ ಉಸಿರುಗಟ್ಟಿ ಆತ ಸಾವನ್ನಪ್ಪಿದ್ದ. ಈ ಘಟನೆ ವಿಡಿಯೋದಲ್ಲಿ ಸೆರೆಯಾಗಿತ್ತು. ಅಮೆರಿಕದಾದ್ಯಂತ ಬ್ಲ್ಯಾಕ್ ಲೈವ್ಸ್ ಮ್ಯಾಟರ್ ಎನ್ನುವ ಪ್ರತಿಭಟನೆ ಬುಗಿಲೆದ್ದಿತ್ತು.

ಶನಿವಾರ ಸಂಜೆಯಿಂದ ಸೋಮವಾರ ಬೆಳಗ್ಗೆವರೆಗೆ ಕೀವ್‌ನಲ್ಲಿ ಕರ್ಫ್ಯೂ

ಮಾಸ್ಕೋ, ಮಾ. 26– ಉಕ್ರೇನ್ ವಿರುದ್ಧ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಯುದ್ಧ ಘೋಷಿಸಿದ್ದಾರೆ. ರಷ್ಯಾದ ವಾಯುಯಾನ ಅಧಿಕಾರಿಗಳು ವಾಯು ಪ್ರದೇಶದ ನಿಯಂತ್ರಣವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕಾರಣ ಉಕ್ರೇನಿಯನ್ ವಾಯುಯಾನ ಅಧಿಕಾರಿಗಳು ಪೂರ್ವ ಭಾಗದಲ್ಲಿ ಕೆಲವು ವಾಯು ಪ್ರದೇಶಗಳನ್ನು "ಅಪಾಯಕಾರಿ ಪ್ರದೇಶಗಳು" ಎಂದು ಘೋಷಿಸಿದ್ದಾರೆ.

ಕಳೆದ ವಾರ, ಇಲ್ಲಿನ ಪೈಲಟ್‌ಗೆ ಎಚ್ಚರಿಕೆ ನೀಡಿದ್ದ ಉಕ್ರೇನ್ ವಾಯುಯಾನ ಅಧಿಕಾರಿಗಳು ವಾಯುಯಾನ ಪ್ರದೇಶಗಳ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿರುವ ರಷ್ಯಾ ಅಧಿಕಾರಿಗಳ ಮೇಲೆ ಹದ್ದಿನ ಕಣ್ಣಿರಿಸುವಂತೆ ಮತ್ತು ಉಕ್ರೇನ್‌ನ ನಿಯಂತ್ರಕರನ್ನು ಮಾತ್ರ ಗುರುತಿಸುವಂತೆ ಎಚ್ಚರಿಕೆ ನೀಡಿದ್ದರು. ರಷ್ಯಾದ ಕಡೆಯಿಂದ ಯುದ್ಧದ ಬೆದರಿಕೆ ಹೆಚ್ಚಾಗುತ್ತಿರುವಂತೆ ಉಕ್ರೇನ್‌ನ ಅಧ್ಯಕ್ಷ ಶಾಂತಿ ಕಾಪಾಡುವಂತೆ ಜನತೆಗೆ ಮನವಿ ಮಾಡಿಕೊಂಡಿದ್ದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಮ್ಮ ಮನವಿಯನ್ನು ಒಪ್ಪಿಕೊಳ್ಳಲಿಕ್ಕಿಲ್ಲ ಎಂದು ಹೇಳಿದ್ದಾರೆ.

ಉತ್ತರ ಪ್ರದೇಶ: ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿ ಅಖಿಲೇಶ್ ಯಾದವ್ ಆಯ್ಕೆ

ಲಖನೌ, ಮಾ. 26– ಉತ್ತರ ಪ್ರದೇಶ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



111 ಶಾಸಕರು ಸಮಾಜವಾದಿ ಪಕ್ಷದ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಅಖಿಲೇಶ್ ಯಾದವ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಪಕ್ಷದ ವಕ್ತಾರರು, ’ವಿಧಾನಸಭೆಯಲ್ಲಿ ವಿರೋಧ ಪಕ್ಷಗಳು ಎತ್ತಬೇಕಿರುವ ವಿಷಯಗಳ ಬಗ್ಗೆ ಚರ್ಚಿಸಲು ಸಮಾಜವಾದಿ ಪಕ್ಷದ ಮಿತ್ರ ಬಣಗಳ ನಾಯಕರನ್ನು ಅಖಿಲೇಶ್ ಯಾದವ್ ಅವರು ಭೇಟಿ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ

ಸ್ಥಳೀಯ ಶಾಸಕರ ಲೋಪದೋಷ ಎತ್ತಿ ಹಿಡಿಯುವ ಮೂಲಕ

ಮುಂಬರುವ ಚುನಾವಣೆಗೆ ಈಗಿನಿಂದಲೇ ಸಜ್ಜಾಗಿ: ಧ್ರುವನಾರಾಯಣ್



ನಂಜನಗೂಡು, ಮಾ.26– ಸ್ಥಳೀಯ ಶಾಸಕರ ಲೋಪದೋಷ ಎತ್ತಿ ಹಿಡಿಯುವ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ಸಜ್ಜಾಗುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕರೆ ನೀಡಿದರು.

ತಾಲೂಕಿನ ಮಹದೇವನಗರದ ಕಲ್ಯಾಣ ಮಂಟಪದಲ್ಲಿ ಕಾಂಗ್ರೆಸ್ ವತಿಯಿಂದ ಶನಿವಾರ ಆಯೋಜಿಸಿದ್ದ ಬದನವಾಳು ಜಿಪಂ ವ್ಯಾಪ್ತಿಯ ಡಿಜಿಟಲ್ ಸದಸ್ಯತ್ವ ನೋಂದಣಿ ಅಭಿಯಾನ ಕುರಿತ ಅವಲೋಕನ ಸಭೆ ಉದ್ಘಾಟಿಸಿ ಮಾತನಾಡಿದರು.

ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲುವ ವಾತಾವರಣವಿದ್ದು, ಕಳೆದ 4 ವರ್ಷದಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಶಾಸಕರು ಅನುದಾನ ತಂದು ಉದ್ಘಾಟನೆ ಮಾಡಿರುವ ಯೋಜನೆಗಳ ನಿದರ್ಶನವಿಲ್ಲ. ಈಗಿನ ಶಾಸಕರು ಚಾಲನೆ ಕೊಡುತ್ತಿರುವ ಬಹುತೇಕ ಎಲ್ಲಾ ಯೋಜನೆಗಳು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭ ಜಾರಿಯಾಗಿದ್ದ ಕಾರ್ಯಕ್ರಮಗಳೇ ಆಗಿವೆ ಎಂದು ಶಾಸಕ ಬಿ.ಹರ್ಷವರ್ಧನ್ ಹೆಸರೇಳದೆ ವಾಗ್ದಾಳಿ ನಡೆಸಿದರು.

ತಾಲೂಕಿನ ಗಡಿಪ್ರದೇಶದ ರೈತರು ಸಾಗುವಳಿ ಪತ್ರ ಪಡೆಯಲು ವ್ಯಾಪಕವಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಈಗಿನ ಶಾಸಕರು ಕಳೆದ 4 ವರ್ಷದಲ್ಲಿ ಈವರೆಗೂ ಒಂದೇ ಒಂದೂ ದರ್ಖಾಸ್ತು ಸಮಿತಿ ಸಭೆಯನ್ನೇ ಮಾಡಿಲ್ಲ. ಯಾರಿಗೂ ಸಾಗುವಳಿ ಪತ್ರ ನೀಡಿದ ಉದಾಹರಣೆಯಿಲ್ಲ. ಇನ್ನು ಆರಾಧನಾ ಸಮಿತಿ ಸಭೆಯನ್ನೇ ಮಾಡದೇ ಯಾವ ದೇಗುಲಗಳಿಗೂ ಅನುದಾನ ನೀಡಿಲ್ಲ. ಒಂದು ಸಮುದಾಯ ಭವನಕ್ಕೂ ಈಗಿನ ಶಾಸಕರು ಅನುದಾನ ತಂದು ಉದ್ಘಾಟಿಸಿಲ್ಲ. ಒಂದೇ ಒಂದು ಆಶ್ರಯ ಮನೆ ಮಂಜೂರು ಆಗಿಲ್ಲ. ಈ ಎಲ್ಲಾ ಲೋಪದೋಷಗಳನ್ನು ಎತ್ತಿ ಹಿಡಿದು ಹೋರಾಟ ಕೈಗೊಳ್ಳುವ ಮೂಲಕ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಲು ಪಕ್ಷ ಸಂಘಟನೆ ಮಾಡುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ಬಿಜೆಪಿ ಪಕ್ಷಕ್ಕೆ ಕೋಮುವಾದವೇ ಚುನಾವಣಾ ಅಜೆಂಡಾ ಆಗಿದ್ದು, ಜನಪರ ಕಾರ್ಯಕ್ರಮಗಳನ್ನು ರಾಜ್ಯಕ್ಕೆ ನೀಡುವಲ್ಲಿ ವಿಫಲವಾಗಿದೆ. ಶೇ.40 ರಷ್ಟು ಕಮಿಷನ್ ಕೇಳುತ್ತಿರುವುದಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರಧಾನಿಗೆ ಪತ್ರ ಬರೆದಿರುವುದು ರಾಜ್ಯ ಸರ್ಕಾರ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುವುದಕ್ಕೆ ತಾಜಾ ನಿದರ್ಶನವಾಗಿದೆ ಎಂದು ಆಪಾದಿಸಿದರು.

ಪ್ರಧಾನಿ ಮೋದಿ ಪಂಚರಾಜ್ಯ ಚುನಾವಣೆ ಬಳಿಕ ಪೆಟ್ರೋಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಜೀವನದ ಮೇಲೆ ಬರೆ ಎಳೆದಿದ್ದಾರೆ. ಕಾಶ್ಮೀರಿ ಫೈಲ್ ಸಿನಿಮಾಗೆ ತೆರಿಗೆ ವಿನಾಯಿತಿ ನೀಡಿದ ಪ್ರಧಾನಿ ಮೋದಿ, ಬಡಕಟ್ಟು ಜನಾಂಗದವರ ಮೇಲೆ ಪೊಲೀಸರ ದೌರ್ಜನ್ಯ ಕುರಿತ ನೈಜ ಘಟನೆ ಆಧಾರಿತ ಜೈಭೀಮ್ ಚಿತ್ರಕ್ಕೆ ಏಕೆ ವಿನಾಯಿತಿ ನೀಡಲಿಲ್ಲ. ಕಾಶ್ಮೀರ ಪಂಡಿತರ ಪುನರ್ವಸತಿಗೆ ಪ್ರಧಾನಿ ಮೋದಿ ಯಾವುದೇ ನೆರವು ನೀಡಿಲ್ಲ. ಆದರೆ ಮನಮೋಹನ ಸಿಂಗ್ ಪ್ರಧಾನಿ ಆಗಿದ್ದ ಸಂದರ್ಭ 1,330 ಕೋಟಿ ಪ್ಯಾಕೇಜ್ ಘೋಷಿಸಿದ್ದರು. ಧರ್ಮಗಳ ನಡುವೆ ಕಂದಕ ಸೃಷ್ಟಿಸಿ ಯುವಕರನ್ನು ಪ್ರಚೋದಿಸುವ ಮೂಲಕ ಮತ ಸೆಳೆಯುವ ಹುನ್ನಾರದಲ್ಲಿ ಬಿಜೆಪಿ ತೊಡಗಿದೆ ಎಂದು ಆರೋಪಿಸಿದರು.

ಇದೇ ವೇಳೆ ಅಗ್ನಿಶಾಮಕ ದಳದ ನಿವೃತ್ತ ಉಪನಿರ್ದೇಶಕ ಬಸವಣ್ಣ ಕಾಂಗ್ರೆಸ್ ಸೇರ್ಪಡೆಗೊಂಡರು. ಮಾಜಿ ಶಾಸಕ ಕಳಲೆ ಎನ್.ಕೇಶವಮೂರ್ತಿ, ಜಿಪಂ ಮಾಜಿ ಅಧ್ಯಕ್ಷೆ ಎಂ.ಲತಾ, ಮಾಜಿ ಸದಸ್ಯ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್‌ರಾಜ್, ಕ್ಷೇತ್ರ ಉಸ್ತುವಾರಿ ಸೋಮೇಶ್, ಸದಸ್ಯತ್ವ ಅಭಿಯಾನ ಉಸ್ತುವಾರಿ ರವಿಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ಮಹಿಳಾ ಘಟಕದ ಅಧ್ಯಕ್ಷೆ ಮಮತಾ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ, ಎಪಿಎಂಸಿ ಮಾಜಿ ಸದಸ್ಯ ಮುದ್ದು ಮಾದಶೆಟ್ಟಿ, ವಕೀಲ ನಾಗರಾಜಯ್ಯ, ಎಸ್ಸಿ ಘಟಕದ ರಾಜ್ಯ ಕಾರ್ಯದರ್ಶಿ ದೊರೆಸ್ವಾಮಿ ನಾಯ್ಕ ಸೇರಿದಂತೆ ಹಲವರಿದ್ದರು.

25 ಸಾವಿರ ಸದಸ್ಯತ್ವ ಗುರಿ

ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ 25 ಸಾವಿರ ಸದಸ್ಯತ್ವ ನೋಂದಣಿ ಗುರಿ ಮುಟ್ಟುವ ಮೂಲಕ ಇಡೀ ಜಿಲ್ಲೆಯಲ್ಲಿ ಮುಂಚೂಣಿಯಲ್ಲಿದೆ ಎಂದು ಆರ್.ಧ್ರುವನಾರಾಯಣ್ ಹೇಳಿದರು. ರಾಜ್ಯದಲ್ಲಿ 50 ಲಕ್ಷ ಡಿಜಿಟಲ್ ಸದಸ್ಯತ್ವ ನೋಂದಣಿ ಮಾಡುವ ಗುರಿಯಲ್ಲಿ ಈಗಾಗಲೇ 35 ಲಕ್ಷ ನೋಂದಣಿಯಾಗಿದೆ. ಇನ್ನು ಮೈಸೂರು ಜಿಲ್ಲೆಯಲ್ಲಿ 1.71 ಲಕ್ಷ ಸದಸ್ಯತ್ವ ಆಗಿದ್ದು, ನಂಜನಗೂಡಿನಲ್ಲಿ 24,530 ಗುರಿ ಸಾಧನೆ ಮಾಡಿ ಜಿಲ್ಲೆಯಲ್ಲೇ ಮೊದಲ ಸ್ಥಾನದಲ್ಲಿದೆ. ಮಾ.31ವರೆಗೆ ಅಭಿಯಾನವಿದ್ದು, ಅಲ್ಲಿವರೆಗೂ ಇನ್ನಷ್ಟು ಸದಸ್ಯತ್ವ ನೋಂದಣಿ ಮಾಡುವ ಮೂಲಕ ಗುರಿ ಸಾಧನೆ ಮಾಡುವಂತೆ ಕಾರ್ಯಕರ್ತರಿಗೆ ಹೇಳಿದರು.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ



ಮಲ್ಕುಂಡಿ, ಮಾ.26(ಚನ್ನಪ್ಪ)– ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಸಮೀಪದ ಮಡಿಕೆಹುಂಡಿ ಗ್ರಾಮದಲ್ಲಿ 13 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಚನ್ನಪಟ್ಟಣ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಚುನಾವಣೆ ಸಂದರ್ಭ ಗ್ರಾಮೀಣ ರಸ್ತೆಗಳು ಹದಗೆಟ್ಟಿರುವುದನ್ನು ಕಂಡ ನಾನು ಶಾಸಕನಾದ ಬಳಿಕ ಪ್ರತಿ ಇಲಾಖೆಯಿಂದ ಅನುದಾನ ತಂದು ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಸಮರ್ಪಕ ಅನುದಾನ ನೀಡಿ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದೇನೆ. ನಮ್ಮ ಸರ್ಕಾರ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಅನುದಾನ ನೀಡಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದೆ. ಈ ಭಾಗದಲ್ಲಿ ಯಾವುದೇ ಕೆಲಸವಿದ್ದರೆ ನನ್ನ ಗಮನಕ್ಕೆ ತನ್ನಿ. ನಾನು ಅದನ್ನು ಹಂತ ಹಂತವಾಗಿ ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಮುಂದಿನ ದಿನಗಳಲ್ಲಿ ಉಳಿದ ಕಾಮಗಾರಿಗಳ ಅಭಿವೃದ್ಧಿಗೆ ಒತ್ತು ನೀಡಲು ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಹುರ ಗ್ರಾಪಂ ಅಧ್ಯಕ್ಷ ಚಂದ್ರು, ಹಾಡ್ಯ ಗ್ರಾಪಂ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷೆ ಶಾಂತಮ್ಮ, ಸದಸ್ಯ ಕೃಷ್ಣ, ಮುಖಂಡರಾದ ಶಂಕರ್, ಎಂ.ಪುಟ್ಟಸ್ವಾಮಿ, ಶಿರಮಳ್ಳಿ ಮಹದೇವಸ್ವಾಮಿ, ರಾಮು, ಎಸ್.ಬಸವರಾಜ್, ಶಿವರುದ್ರ, ಮಹದೇವಯ್ಯ ಇತರರಿದ್ದರು.

ಹಳ್ಳಿಗರಿಂದ ಮಾತ್ರ ಸಂಸ್ಕೃತಿ ಬೆಳವಣಿಗೆ ಸಾಧ್ಯ

ವಿಪಕ್ಷ ನಾಯಕ ಸಿದ್ದರಾಮಯ್ಯ



ಹುಣಸೂರು, ಮಾ.26(ಕೆಕೆ)– ನಮ್ಮ ಹಿರಿಯರು ಹೇಳುವಂತೆ ಕೆಟ್ಟು ಪಟ್ಟಣ ಸೇರದೇ ಹಳ್ಳಿಯ ಜನ ಹಳ್ಳಿಗಳಲ್ಲೇ ಇರಬೇಕು. ಹಳ್ಳಿ ಜನರಿಂದ ಮಾತ್ರ ನಮ್ಮ ಸಂಸ್ಕೃತಿ ಉಳಿಸಿ ಬೆಳೆಸಲು ಸಾಧ್ಯ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಖಾಸಗಿ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹಳ್ಳಿಗಳ ಅಭ್ಯುದಯ, ಸಂಸ್ಕೃತಿ ಉಳಿವು ಹಳ್ಳಿಗರಿಂದ ಮಾತ್ರ ಸಾಧ್ಯ. ಹೀಗಾಗಿ ಯುವಜನರು ಉದ್ಯೋಗ ಅರಸಿ ಹಳ್ಳಿಗಳನ್ನು ತೊರೆದು ಪಟ್ಟಣಕ್ಕೆ ಸೇರಬೇಡಿ. ಕೇಂದ್ರದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಸದ್ಬಳಕೆ ಮಾಡಿಕೊಳ್ಳಿ ಎಂದರು.

2020–21ರಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರ 1.12 ಲಕ್ಷ ಕೋಟಿ ಅನುದಾನ ನೀಡಿದ್ದು, ಪ್ರಸಕ್ತ ಸಾಲಿನಲ್ಲಿ 98 ಸಾವಿರ ಕೋಟಿ ನೀಡಿ 28 ಸಾವಿರ ಕೋಟಿ ರೂ. ಕಡಿತಗೊಳಿಸಿದೆ. ಅಲ್ಲದೇ 100 ದಿನ ಕೆಲಸ ನೀಡುವ ಭರವಸೆ ನೀಡಿದೆ. ಪ್ರಸ್ತುತ ರೈತ ಬೆಳೆದ ಕೃಷಿ ಉತ್ಪನ್ನಗಳನ್ನು ಸರ್ಕಾರ ಖರೀದಿಸುತ್ತಿಲ್ಲ. ನಮ್ಮ ಅವಧಿಯಲ್ಲಿ ಎಲ್ಲವನ್ನೂ ಖರೀದಿಸಿ ರೈತರಿಗೆ ಬೆಂಬಲವಾಗಿ ನಿಂತಿದ್ದೆವು ಎಂದರು.

ಕೇಂದ್ರ ಸರ್ಕಾರ ಔಷಧಿಗಳ ಬೆಲೆಯನ್ನು ಶೇ.10ರಷ್ಟು ಜಾಸ್ತಿ ಮಾಡಿದೆ. ಅಲ್ಲದೇ ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದೆ. ಇದರಿಂದ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಯುವಕರು ಉದ್ಯೋಗವಿಲ್ಲದೇ ನಿರುದ್ಯೋಗಿಗಳಾಗಿದ್ದಾರೆ. ರಾಜ್ಯ ಸರ್ಕಾರ ನಮ್ಮ ಅವಧಿಯಲ್ಲಿ ಪ್ರತಿ ಕುಟುಂಬಕ್ಕೆ 7 ಕೆಜಿ ಅಕ್ಕಿ ನೀಡುತ್ತಿದ್ದೆವು. ಇದೀಗ ಸರ್ಕಾರ 5 ಕೆಜಿಗೆ ಇಳಿಸಿದೆ ಎಂದರು.

ಮಠಗಳು, ಸ್ವಾಮೀಜಿಗಳ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ ಎಂದು ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಸುದ್ದಿ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಎಲ್ಲಾ ಮಠಗಳನ್ನು ನೋಡಿದ್ದೇನೆ. ಸ್ವಾಮೀಜಿಗಳನ್ನು ಪೂಜ್ಯ ಭಾವನೆಯಿಂದ ಗೌರವಿಸಿದ್ದೇನೆ. ಯಾವುದೋ ಒಂದು ವೇಳೆ ಹೇಳಿಕೆಯನ್ನು ತಿರುಚಲಾಗಿದೆ. ಇದರಿಂದ ಅವರಿಗೇನು ಪ್ರಯೋಜನ ನನಗೆ ತಿಳಿದಿಲ್ಲ. ನಾನು ಎಲ್ಲಿಯೂ ಸ್ವಾಮೀಜಿಗಳ ಬಗ್ಗೆ ಹಗುರವಾಗಿ ಮಾತನಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯನವರು ಹಣಕಾಸು 1983ರಲ್ಲಿ ಸಚಿವರಾದಾಗಿನಿಂದಲೂ ಹುಣಸೂರಿಗೆ ಅಪಾರ ಕೊಡುಗೆ ನೀಡಿದ್ದಾರೆ. 40 ವರ್ಷದಿಂದ ಬತ್ತಿ ಹೋಗಿದ್ದ ಕೆರೆಗಳನ್ನು ತುಂಬಿಸಿದ್ದಾರೆ. ಅಲ್ಲದೇ ಕಾಂಗ್ರೆಸ್ ಸರ್ಕಾರದಲ್ಲಿ 800 ಅಭಿವೃದ್ಧಿ ಕಾಮಗಾರಿ ನಡೆದಿತ್ತು. ಆದರೆ ಕಳೆದ 4 ವರ್ಷದಿಂದ ಒಂದೇ ಒಂದು ಅಭಿವೃದ್ಧಿ ಕೆಲಸ ಆಗಿಲ್ಲ. ತುರ್ತು ಚಿಕಿತ್ಸೆಗಾಗಿ ಸಿದ್ದರಾಮಯ್ಯ ಬೈಕ್ ಆಂಬುಲೆನ್ಸ್ ನೀಡಿದ್ದರು. ಬಿಜೆಪಿ ಸರ್ಕಾರ ಅದನ್ನು ನಿಲ್ಲಿಸಿದೆ ಎಂದ ಅವರು, ಸಿದ್ದರಾಮಯ್ಯನವರು ಮುಂಬರುವ ಚುನಾವಣೆಯಲ್ಲಿ ಹುಣಸೂರಿನಿಂದ ಸ್ಪರ್ಧಿಸುವುದಾದರೆ ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ ಎಂದರು.

ಈ ವೇಳೆ ಶಾಸಕ ಯತೀಂದ್ರ, ರವಿಶಂಕರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಮುಖಂಡರಾದ ರಾಕೇಶ್ ಪಾಪಣ್ಣ, ಡಾ.ಲೋಹಿತ್, ರಮೇಶ್, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ನಗರಸಭಾಧ್ಯಕ್ಷೆ ಸೌರಭ, ಗಣೇಶ್‌ಗೌಡ, ಸೋಮಶೇಖರ್, ಆನಂದಸ್ವಾಮಿ ಇದ್ದರು.

ಪದವೀಧರರ ಚುನಾವಣೆಯಲ್ಲಿ ಮಧು.ಜಿ.ಮಾದೇಗೌಡರನ್ನು ಗೆಲ್ಲಿಸಿ

ವಸತಿ ಯೋಜನಾ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಮನವಿ



ತಿ.ನರಸೀಪುರ, ಮಾ.26(ಎಸ್‌ಕೆ)– ಕ್ಷೇತ್ರದಲ್ಲಿ 4 ಸಾವಿರ ಪದವೀಧರ ಮತದಾರರಿದ್ದು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪದವೀಧರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಮುಂಬರುವ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರನ್ನು ಗೆಲ್ಲಿಸುವಂತೆ ವಸತಿ ಯೋಜನಾ ಸಮಿತಿ ಮಾಜಿ ಅಧ್ಯಕ್ಷ ಸುನಿಲ್ ಬೋಸ್ ಮನವಿ ಮಾಡಿದರು.

ಪಟ್ಟಣದ ವಿದ್ಯೋದಯ ಕಾಲೇಜಿನಲ್ಲಿ ಮಧು ಜಿ.ಮಾದೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ವಿದ್ಯಾರ್ಥಿಗಳಿಗೆ ನೀಡಿದ ಯೋಜನೆ ಮತ್ತು ಶಿಕ್ಷಕರ ಪರ ಕೆಲಸ ಮಾಡಿರುವುದರಿಂದ ಪದವೀಧರರು ನಮ್ಮ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ 4 ಜಿಲ್ಲೆಯ ನಾಯಕರ ತೀರ್ಮಾನದ ಮೇರೆಗೆ ಮಧು ಮಾದೇಗೌಡರು ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಚುನಾವಣೆಯಲ್ಲಿ ಗೆಲ್ಲಲಿದ್ದಾರೆ ಎಂದರು.

ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, ನಮ್ಮ ತಂದೆ ಜಿ.ಮಾದೇಗೌಡರು ಹಗಲಿರುಳು ರೈತ, ಕಾವೇರಿ ನೀರಿನ ವಿಚಾರದಲ್ಲಿ ಹೋರಾಟ ನಡೆಸಿದರು. ಅಲ್ಲದೇ ಬಡವರಿಗಾಗಿ ಕಾಲೇಜುಗಳನ್ನು ತೆರೆದರು. ಅದರಂತೆ ನಾನು 20 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದರಿಂದ ಶಿಕ್ಷಕರು ಹಾಗೂ ಪದವೀಧರರ ಸಮಸ್ಯೆ ಅರಿತಿದ್ದೇನೆ. ಈ ಸಮಸ್ಯೆಗಳನ್ನು ಬಗೆಹರಿಸಲು ನನಗೊಂದು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಈ ವೇಳೆ ವೀಕ್ಷಕ ಚಿಕ್ಕಮಾದು, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಪುರಸಭೆ ಸದಸ್ಯ ಬಾದಾಮಿ ಮಂಜು, ಎಸ್ಸಿ, ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಮಹದೇವಸ್ವಾಮಿ, ಪಿ.ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಮಣ್ಣೇಗೌಡ, ಶಿವಮೂರ್ತಿ, ಮಾಜಿ ಪ್ರಧಾನ, ಎಂ.ಡಿ.ಬಸವರಾಜು, ಪಪಂ ಮಾಜಿ ಅಧ್ಯಕ್ಷ ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಉಮೇಶ್, ಸದಸ್ಯ ಮಲ್ಲಾಜಮ್ಮ, ಮೃಗಾಲಯ ಮಾಜಿ ನಿರ್ದೇಶಕಿ ಲತಾ, ತಾಲೂಕು ಕುರುಬ ಸಂಘದ ಕಾರ್ಯದರ್ಶಿ ಬಸವರಾಜು, ಲಕ್ಷ್ಮಣ, ಗ್ರಾಪಂ ಮಾಜಿ ಅಧ್ಯಕ್ಷ ಶೇಷಾದ್ರಿ, ನವೀನ್, ಸಿದ್ದಶೆಟ್ಟಿ, ಬಸವರಾಜು, ಸಿದ್ದರಾಜು, ರಂಗನಾಥ್ ಹಾಜರಿದ್ದರು.

ಚೆಕ್‌ಬೌನ್ಸ್ ಪ್ರಕರಣ: ಶಿಕ್ಷಕನ ಬಂಧನ

ಹುಣಸೂರು, ಮಾ.26– ಚೆಕ್‌ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಕ್ಷಕರೊಬ್ಬರನ್ನು ನಗರ ಠಾಣೆ ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ತಾಲೂಕಿನ ಸೋಮನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಹೆಚ್.ಎ.ರೇವಣ್ಣ ನ್ಯಾಯಾಂಗ ಬಂಧನಕ್ಕೊಳಗಾದವರು. ಇವರು ನಗರದ ಬಾಲಕೃಷ್ಣ ಕಾಂಪೌಂಡ್ ಬಡಾವಣೆಯ ರವೀಶ್ ಎಂಬುವರಿಗೆ 3 ಲಕ್ಷ ರೂ. ಹಣ ನೀಡಬೇಕಿತ್ತು. ಹಣ ವಾಪಸ್ ನೀಡಲು ಸತಾಯಿಸುತ್ತಿದ್ದರಿಂದ ರವೀಶ್ 2020ರಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಮಧ್ಯ ರೇವಣ್ಣ ಒಂದು ಲಕ್ಷ ರೂ. ಮರುಪಾವತಿ ಮಾಡಿದ್ದರು. ಬಾಕಿ ಉಳಿದ ಹಣ ನೀಡಲು ಸತಾಯಿಸುತ್ತಿದ್ದರು. ಜೊತೆಗೆ ನಿಗದಿತವಾಗಿ ನ್ಯಾಯಾಲಯಕ್ಕೂ ಹಾಜರಾಗಿರಲಿಲ್ಲ. ಶಿಕ್ಷಕ ರೇವಣ್ಣನ ವಿರುದ್ಧ ನ್ಯಾಯಾಲಯದಿಂದ ವಾರೆಂಟ್ ಜಾರಿ ಮಾಡಿದ್ದು, ನಗರ ಠಾಣೆ ಇನ್‌ಸ್ಪೆಕ್ಟರ್ ಸಿ.ವಿ.ರವಿ ನೇತೃತ್ವದಲ್ಲಿ ಸಿಬ್ಬಂದಿಗಳಾದ ಚಂದ್ರಪ್ಪ, ಮಂಜುನಾಥ್, ಜಗದೀಶ್ ಆರೋಪಿಯನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದಾರೆ. ಈ ವೇಳೆ ನ್ಯಾಯಾಧೀಶ ಶರಿನ್ ಜೆ.ಅನ್ಸಾರಿಯವರು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಶಿಕ್ಷಕ ರೇವಣ್ಣ ಹಲವರಿಂದ ಚೆಕ್ ನೀಡಿ ಹಣ ಪಡೆದಿದ್ದು, ಹಿಂದೆಯೂ ಸಹ ಪ್ರಕರಣವೊಂದರಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿದ್ದರು. ಶಿಕ್ಷಕನ ವಿರುದ್ಧ ನಗರ ಠಾಣೆಯಲ್ಲಿ ಕೆಲವರು ದೂರು ಸಲ್ಲಿಸಿದ್ದು, ಕೆಲವು ರಾಜಿ ಮೂಲಕ ಇತ್ಯರ್ಥವಾಗಿದ್ದರೆ, ಹಲವು ಇನ್ನೂ ವಿಚಾರಣೆ ನಡೆಯಬೇಕಿದೆ ಎಂದು ತಿಳಿದು ಬಂದಿದೆ.

ಪಟ್ಟಣ ಪಂಚಾಯತ್‌ನಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಿ

ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರ ಒತ್ತಾಯ



ಸರಗೂರು, ಮಾ.26(ನಾಗೇಶ್)– ಪಟ್ಟಣ ಪಂಚಾಯತ್‌ನಲ್ಲಿ ಖಾತೆ ಸೇರಿದಂತೆ ಇನ್ನಿತರ ಕೆಲಸ ಕಾರ್ಯ ಮಾಡಿಕೊಡಿ ಎಂದು ಅಧಿಕಾರಿಗಳ ಮೇಲೆ ಒತ್ತಡ ಹೇರುವ ಮಧ್ಯವರ್ತಿಗಳ ಹಾವಳಿ ತಪ್ಪಿಸುವಂತೆ ಸಭೆಯಲ್ಲಿ ಸದಸ್ಯರು ಒತ್ತಾಯಿಸಿದರು.

ಪಟ್ಟಣ ಪಂಚಾಯತ್‌ನಲ್ಲಿ ಗುರುವಾರ ಅಧ್ಯಕ್ಷೆ ರಾಧಿಕಾ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪಟ್ಟಣದಲ್ಲಿ ವಾಸಿಸುವ ಅಸಹಾಯಕ ಜನರ ನಿವೇಶನ–ವಸತಿ ಸೇರಿದಂತೆ ಇನ್ನಿತರ ಕೆಲಸ ಮಾಡಿಸಿಕೊಡುವುದಾಗಿ ಮಧ್ಯವರ್ತಿಗಳು ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ. ಅಲ್ಲದೆ ಅಧಿಕಾರಿಗಳ ಮೇಲೂ ಒತ್ತಡ ಹೇರುತ್ತಿದ್ದಾರೆ. ಇದಕ್ಕೆ ಕೂಡಲೇ ಕಡಿವಾಣ ಹಾಕಬೇಕು ಎಂದರು.

2022–2023ನೇ ಸಾಲಿಗೆ ಆಡು, ಕುರಿ, ಕೋಳಿ ಮಾಂಸ ಮಾರಾಟ ಅಂಗಡಿಗಳ ವಾರ್ಷಿಕ ಲೈಸೆನ್ಸ್ ನೀಡುವುದನ್ನು ಸ್ಥಗಿತಗೊಳಿಸಿ ಬಹಿರಂಗ ಹರಾಜು ಮಾಡಬೇಕು. ಸಂತೆ ಸುಂಕ ವಸೂಲಿ ಮತ್ತು ರಸ್ತೆ ಬದಿ ವ್ಯಾಪಾರಸ್ಥರ ನೆಲ ಬಾಡಿಗೆ ಸುಂಕ ವಸೂಲಿ ಬಹಿರಂಗ ಹರಾಜು ಮಾಡಬೇಕು. ಈಗಾಗಲೇ ಪಟ್ಟಣ ಪಂಚಾಯಿತಿಯಿಂದ ಬಾಡಿಗೆ ಪಡೆದ ಮಳಿಗೆ ಮಾಲೀಕರು ತಿಂಗಳ 5ನೇ ತಾರೀಖಿನಂದು ಸರಿಯಾಗಿ ಬಾಡಿಗೆ ಪಾವತಿಸದಿದ್ದರೆ, ಅಂತಹ ಅಂಗಡಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ, ಬೀಗ ಹಾಕಬೇಕು. ಪಟ್ಟಣದಲ್ಲಿ ಎಸ್‌ಎಫ್‌ಸಿ ಅನುದಾನ, 15ನೇ ಹಣಕಾಸು, ಕುಡಿಯುವ ನೀರಿನ ಅನುದಾನ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಬಂದಿರುವ ಟೆಂಡರ್‌ಗಳನ್ನು ಅನುಮೋದಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸದಸ್ಯ ಎಸ್.ಎಲ್.ರಾಜಣ್ಣ ಮಾತನಾಡಿ, ಪಪಂ ಮಾಜಿ ಅಧ್ಯಕ್ಷ ನೂರ್ ಅಹಮದ್ ತಮ್ಮ ಅವಧಿಯಲ್ಲಿ ಅಕ್ರಮ ಸಾಗುವಳಿ ಮೇಲೆ ಖಾತೆ ನೀಡಿದ್ದು, ಸದರಿ ನಿವೇಶನಕ್ಕೆ ಸಂಬಂಧಪಟ್ಟ ಕಂದಾಯ ಇಲಾಖೆಯ ಖಾತೆ ದಾಖಲಾತಿಗಳನ್ನು ತಡೆಯಬೇಕು. ಜೊತೆಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಬಿ.ಜಿ.ಸತೀಶ್, ಅಕ್ರಮ ಖಾತೆಗೆ ಸಂಬಂಧಿಸಿದಂತೆ ಈಗಾಗಲೇ ದೂರು ದಾಖಲಿಸಲಾಗಿದೆ ಎಂದು ಉತ್ತರಿಸಿದರು.

ಸಭೆಯಲ್ಲಿ ಡಿ.2021ರಿಂದ ಫೆಬ್ರವರಿ 2022ರ ತಿಂಗಳ ಜಮಾ ವಿವರ ವಿವರಿಸಲಾಯಿತು. ಈ ವೇಳೆ ಸದಸ್ಯರೆಲ್ಲರೂ ಒಮ್ಮತದಿಂದ ಜಮಾ ವಿವರಗಳ ಲೆಕ್ಕಪತ್ರ ಸರಿಯಿಲ್ಲ. ಹಿಂದಿನ ಅವಧಿಯಲ್ಲಿನ ಬಿಲ್‌ಗಳಿಗೆ ಈ ಸಾಲಿನಲ್ಲಿ ಹಣ ಬಿಡುಗಡೆ ಮಾಡುವುದು ಯಾವ ಲೆಕ್ಕ ಎಂದು ಅಧ್ಯಕ್ಷರನ್ನು ಪ್ರಶ್ನಿಸಿದರು.

ಪಟ್ಟಣದಲ್ಲಿ ಗಡಿಭಾಗದ ಮುಖ್ಯ ರಸ್ತೆಯಲ್ಲಿ ಸ್ವಾಗತ ಕಮಾನುಗಳನ್ನು ತುಂಬಸೋಗೆ ಸೇತುವೆ ಪಕ್ಕ, ಕಬಿನಿ ಬಲದಂಡೆ ನಾಲೆ ಸಮೀಪ ಅಳವಡಿಸಲು ಕ್ರಿಯಾ ಯೋಜನೆ ರೂಪಿಸುವುದು. ಅಂಗಡಿಗಳು, ಬಾರ್‌ಗಳ ತ್ಯಾಜ್ಯಗಳನ್ನು ರಸ್ತೆಯ ಪಕ್ಕದಲ್ಲಿ ಬಿಸಾಡದಂತೆ ಎಚ್ಚರಿಸುವುದು ಸೇರಿದಂತೆ ಇನ್ನಿತರ ವಿಷಯಗಳನ್ನು ಚರ್ಚಿಸಲಾಯಿತು. ಅಧ್ಯಕ್ಷೆ ರಾಧಿಕಾ ಮಾತನಾಡಿ, ಸರಗೂರು ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ರೂಪಿಸಬೇಕು. ಜೊತೆಗೆ ಪಪಂ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಜನಪ್ರತಿನಿಧಿಗಳು ಸೇರಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಉಪಾಧ್ಯಕ್ಷ ವಿನಾಯಕ ಪ್ರಸಾದ್ ಮಾತನಾಡಿದರು. ಸದಸ್ಯರಾದ ಹೇಮಾವತಿ, ಚೈತ್ರಾಸ್ವಾಮಿ, ಸಣ್ಣತಾಯಮ್ಮ, ಎಸ್.ಎಲ್.ರಾಜಣ್ಣ, ನೂರಾಳಸ್ವಾಮಿ, ಗೋಪಿ ರಂಗಸ್ವಾಮಿ, ಶಿವಕುಮಾರ್, ಉಮಾ, ಶ್ರೀನಿವಾಸ್, ಚಲುವಕೃಷ್ಣ, ಮುಖ್ಯಾಧಿಕಾರಿ ಬಿ.ಜಿ.ಸತೀಶ್, ಸಿಬ್ಬಂದಿಗಳಾದ ಸುರೇಶ್, ನಾಗರತ್ನ, ಸಂತೋಷ್, ಪಳನಿ, ಸತೀಶ್ ಸೇರಿದಂತೆ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಜೇಮ್ಸ್ (ಕ): ಬೆ.9.55ಕ್ಕೆ, ಮ.12.55ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.50ಕ್ಕೆ.

ಸ್ಕ್ರೀನ್ 2 ಜೇಮ್ಸ್ (ಕ): ಬೆ.8ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ಓರುತಿ (ಮ): ಬೆ.10.50ಕ್ಕೆ, ಆಂಬುಲೆನ್ಸ್ (ಇಂ): ರಾ.10ಕ್ಕೆ.

ಸ್ಕ್ರೀನ್ 3 ಎದರ್ಕುಂ ತುನಿಂದವನ್ (ತ): ಬೆ.10.05ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.1ಕ್ಕೆ, ಬಚ್ಚನ್ ಪಾಂಡೆ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 4 ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ರಾಧೆಶ್ಯಾಮ್ (ತೆ): ಮ.1.15ಕ್ಕೆ, ಜೇಮ್ಸ್ (ಕ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಜೇಮ್ಸ್ (ಕ): ಬೆ.8.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 2 ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಸ್ಕ್ರೀನ್ 3 ಬಚ್ಚನ್ ಪಾಂಡೆ (ಹಿಂ): ಬೆ.9.20ಕ್ಕೆ, ಮ.3.45ಕ್ಕೆ, ಸಂ.6.50ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.12.20ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 4 ಜೇಮ್ಸ್ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45ಕ್ಕೆ, ಬಚ್ಚನ್ ಪಾಂಡೆ (ಹಿಂ): ರಾ.9ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಏಕ್ ಲವ್‌ಯಾ (ಕ): ಬೆ.10.45ಕ್ಕೆ, ಮ.1.45ಕ್ಕೆ, ಸಂ.6.35ಕ್ಕೆ, ಓಲ್ಡ್‌ಮಾಂಕ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಎದರ್ಕುಂ ತುನಿಂದವನ್ (ತ): ಬೆ.10.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ

ಸ್ಕ್ರೀನ್ 3 ರಾಧೆಶ್ಯಾಮ್ (ತೆ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ಆ ತೊಂಭತ್ತು ದಿನಗಳು (ಕ): ಬೆ.11ಕ್ಕೆ, ಡಿಯರ್ ಸತ್ಯ (ಕ): ಮ.1.30ಕ್ಕೆ, ಎದರ್ಕುಂ ತುನಿಂದವನ್ (ತ): ಸಂ.4.15ಕ್ಕೆ, ಹರೀಶ ವಯಸ್ಸು 36 (ಕ): ರಾ.7.15ಕ್ಕೆ, ಪದ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೇಮ್ಸ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು



ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಗ್ರಾಪಂ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಧ್ಯಕ್ಷೆ ಸೌಭಾಗ್ಯ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಪಿಡಿಓ ಸೌಮ್ಯ, ಉಪಾಧ್ಯಕ್ಷೆ ದೇವಮ್ಮ, ಸದಸ್ಯರಾದ ಬಸವರಾಜಪ್ಪ, ಶಂಕರೇಗೌಡ, ಲೇಖನ್‌ಗೌಡ, ಸ್ವಾಮಿಗೌಡ, ಪಿ.ಕೆ.ಶಿವರಾಜು, ವೃಷಭೇಂದ್ರ, ಸಿದ್ದರಾಜು, ಜಾವಿದ್, ಮಲ್ಲೇಶ, ರಾಜಣ್ಣ, ಧನಲಕ್ಷ್ಮಿ, ಸುನಂದಾ, ಮುಖಂಡರಾದ ಶಿವಪ್ಪ, ಶಿವಣ್ಣ, ಬೋರಪ್ಪ, ಗೌಡಿಕೆ ಶಿವರುದ್ರಪ್ಪ, ಸಿದ್ದರಾಮಪ್ಪ, ಮುದ್ದುರಾಮಪ್ಪ, ಅಣ್ಣೇಗೌಡ, ತಾಪಂ ಮಾಜಿ ಸದಸ್ಯ ಸಿದ್ದರಾಜು ಸೇರಿದಂತೆ ಇನ್ನಿತರರಿದ್ದರು.

ಇಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ


ಪಿರಿಯಾಪಟ್ಟಣ, ಮಾ.26(ವೀರೇಶ್)– ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದಿಂದ ನಾಳೆ (ಮಾ.27) ಬೆಳಗ್ಗೆ 10.30ಕ್ಕೆ ಮೈಸೂರಿನ ಕಲಾ ಮಂದಿರದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಉಪ್ಪಾರ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಾಲೂಕು ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಪಿ.ಎಲ್.ರಾಮಣ್ಣ ತಿಳಿಸಿದರು.

ಪಟ್ಟಣದ ಶ್ರೀಉಪ್ಪಾರ ರಾಮಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ಉಪ್ಪಾರ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಪುರುಷೋತ್ತಮನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಮಹದೇವಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಮಹರ್ಷಿ ಭಗೀರಥರ ಭಾವಚಿತ್ರ ಅನಾವರಣಗೊಳಿಸಲಿದ್ದಾರೆ. ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದು, ಅಗಲಿದ ಗಣ್ಯರಿಗೆ ನುಡಿನಮನ ಸಲ್ಲಿಸುವ ಜೊತೆಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದರು.

ಇಂದು ಉಚಿತ ಕಾರ್ಯಾಗಾರ

ಹೆಚ್.ಡಿ.ಕೋಟೆ, ಮಾ.26(ಮಂಜು)– ತಾಲೂಕು ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘದಿಂದ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಾ.27ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಆದರ್ಶ ಹಾಗೂ ನವೋದಯ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ತಜ್ಞ ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತ ಸಂಪತ್ ಕುಮಾರ್ ಹಾಗೂ ತಂಡದಿಂದ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.







ಶ್ರದ್ಧಾಂಜಲಿ



ಶ್ರೀ ದೇವರಾಜು.ಡಿ
(ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್)
ಜನನ: 03-03-1938 ಮರಣ:26-03-2022
ಇವರು ದಿ.: 26-03-2022ನೇ ಶನಿವಾರದಂದು ದೈವಾಧೀನರಾಗಿದ್ದು, ಇವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ
ದುಃಖತಪ್ತರು:
ಡಾ||ಅನ್ವಿತ ಶರತ್‌ಕುಮಾರ್ ಮತ್ತು ಕುಟುಂಬ

ಸಕಲೇಶಪುರದ ಹಿರಿಯ ಸಿವಿಲ್ ಜಡ್ಜ್ ಮತ್ತು ಎಂ.ಎ.ಸಿ.ಟಿ ನ್ಯಾಯಾಧೀಶರು ರವರ ನ್ಯಾಯಾಲಯದಲ್ಲಿ
ಎಂ.ವಿ.ಸಿ.-711/2021

ಅರ್ಜಿದಾರರು : ಕಮಲಮ್ಮ
ವಿರುದ್ಧ
ರೆಸ್ಪಾಂಡೆಂಟರು: ಸಯ್ಯದ್ ಆಸಿಫ್ ಇನ್ನೊಬ್ಬರು
1ನೇ ರೆಸ್ಪಾಂಡೆಂಟರು: ಸಯ್ಯದ್ ಆಸೀಫ್ ಬಿನ್ ಲೇಟ್ ಸಯ್ಯದ್ ನಜೀರ್ 42 ವರ್ಷ, ನಂ-65, 4ನೇ ಅಡ್ಡ ರಸ್ತೆ, 1ನೇ ಹಂತ, ಕೆ.ಎನ್.ಪುರ, ಹಂಚ್ಯಾ, ಉದಯಗಿರಿ ಮೈಸೂರು-570019

ಪತ್ರಿಕಾ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನಂದರೆ ಅರ್ಜಿದಾರರು ರೆಸ್ಪಾಂಡೆಂಟರ ವಿರುದ್ಧ ಸಕಲೇಶಪುರ ಹಿರಿಯ ಸಿವಿಲ್ ಜಡ್ಜ್ ಹಾಗೂ ಎಂ.ಎ.ಸಿ.ಟಿ. ನ್ಯಾಯಾಲಯದಲ್ಲಿ ಎಂ.ವಿ.ಸಿ. ಸಂಖ್ಯೆ 711/2021 ನ್ನು ಸಲ್ಲಿಸಿರುತ್ತಾರೆ, ಅರ್ಜಿಯಲ್ಲಿ ಕಂಡಂತಹ ಅಂಶಗಳಿಗೆ ಸಂಬಂಧಪಟ್ಟಂತೆ ಅರ್ಜಿಯ 1ನೇ ರೆಸ್ಪಾಂಡೆಂಟರಾದ ಸಯ್ಯದ ಆಸೀಫ್ ಬಿನ್ ಸಯ್ಯದ್ ನಜೀರ್ ಆದ ನಿಮಗೆ ಯಾವುದೇ ತಕರಾರು ವಗೈರೆಗಳು ಇದ್ದಲ್ಲಿ, ಮೇಲ್ಕಂಡ ಪ್ರಕರಣದ ವಿಚಾರಣೆಯ ದಿನಾಂಕವಾದ 05/04/2022 ರಂದು ಬೆಳಿಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಿದ್ದು, ನಿಮ್ಮ ಆಕ್ಷೇಪಣೆಯನ್ನು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಸಲ್ಲಿಸಬಹುದಾಗಿರುತ್ತದೆ. ಒಂದು ಪಕ್ಷ ಸದರಿ ದಿನಾಂಕದಂದು ನಿಮ್ಮ ತಕರಾರು ವಗೈರೆಗಳು ಬರದೇ ಇದ್ದಲ್ಲಿ, ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ತಕರಾರುಗಳು ಇಲ್ಲವೆಂದು ಪರಿಗಣಿಸಿ ಈ ಪ್ರಕರಣವನ್ನು ಮುಂದುವರೆಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ನ್ಯಾಯಾಲಯದ ಆದೇಶ ಮತ್ತು ಅಪ್ಪಣೆಯ ಮೇರೆಗೆ ದಿನಾಂಕ 11-03-2022 ರಂದು ನನ್ನ ಮೊಹರು ಮತ್ತು ಸಹಿಯೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
(ಎಸ್.ಕೆ. ರಮೇಶ್)
ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ, ಸಕಲೇಶಪುರ.

ವಾದಿ ಪರ ವಕೀಲರು
ಯಶವಂತ ಕುಮಾರ್ ಡಿ.ವಿ.
ವಕೀಲರು, ಸಕಲೇಶಪುರ





